ಶ್ರೀ ರಾಮಚಂದ್ರಗೌಡ ಮಾನ್ಯ ಉಪಾಧ್ಯಕ್ಷರೆ, ಜಿಲ್ಲಾ ಮಟ್ಟದ ಸಭೆ ಆಗಬಹುದು, ತಾಲ್ಲೂಕು ಮಟ್ಟದ ಸಭೆ ಆಗಬಹುದು, ತಿಂಗಳಿಗೆ ಒಂದರಂತೆ ವರ್ಷಕ್ಕೆ 12 ಸಭೆ ನಡೆಯುತ್ತವೆ ಎನ್ನುವಂತಹ ಉತ್ತರವನ್ನು ನಾನು ಈಗಾಗಲೇ ಕೊಟ್ಟಿದ್ದೇನೆ ನಮ್ಮ ನಿಯಮದಲ್ಲೂ ಕೂಡ ಅದೇ ತರಹ ಇದೆ

ಕಂಡಿಕೆ 3[e] ರಲ್ಲಿ ಸೂಚಿಸಿರುವ ತಾಲ್ಲೂಕು ಮಟ್ಟದ ಮಾಸಿಕ ಪರಿಶೀಲನಾ ಸಮಿತಿಯು ಪ್ರತಿ ತಿಂಗಳು 5ನೇ ತಾರೀಖು ಸಭೆ ಸೇರತಕ್ಕದ್ದು ಒಂದು ವೇಳೆ 5ನೇ ತಾರೀಖು ರಜಾ ದಿನವಾಗಿದ್ದರೆ, ಮುಂದಿನ ಕೆಲಸದ ದಿನದಂದು ಸಭೆ ಸೇರತಕ್ಕದ್ದು

ಅದೇ ರೀತಿಯಾಗಿ

ಕಂಡಿಕೆ 3[ಅ] ನಲ್ಲಿ ಸೂಚಿಸಿರುವ ಜಿಲ್ಲಾ ಮಟ್ಟದ ಮಾಸಿಕ ಪರಿಶೀಲನಾ ಸಮಿತಿಯು ಪ್ರತಿ ತಿಂಗಳು 11ನೇ ತಾರೀಖು ಸಭೆ ಸೇರತಕ್ಕದ್ದು ಒಂದು ವೇಳೆ 11 ನೇ ತಾರೀಖು ರಜಾ ದಿನವಾಗಿದ್ದಲ್ಲಿ ಮುಂದಿನ ಕೆಲಸದ ದಿನದಂದು ಸಭೆ ಸೇರತಕ್ಕದ್ದು ಈ ರೀತಿಯಾಗಿ ನಾವು ಕಳುಹಿಸಿದ್ದೇವೆ ಅಕಸ್ಮಾತ್ ಯಾರಾದರೂ ಜಿಲ್ಲಾ ಮಂತ್ರಿಗಳೋ ಅಥವಾ ಮಾನ್ಯ ಮುಖ್ಯಮಂತ್ರಿಗಳೋ, ಯಾರಾದರೂ ಜಿಲ್ಲೆಗೆ ಬಂದಿದ್ದರೆ, ಅಂತಹ ಸಂದರ್ಭದಲ್ಲಿ ತಾಲ್ಲೂಕಿನ ಅಧಿಕಾರಿಗಳು ಹೋಗಿರಲಿಕ್ಕೂ ಉಂಟು ಜಿಲ್ಲಾಧಿಕಾರಿಗಳಿಗೆ ಕೂಡಲೇ ನಾನು ಹೇಳುತ್ತೇನೆ ಆ ತಾಲ್ಲೂಕಿನ ಅಧಿಕಾರಿಗಳು ಯಾವುದೇ ಸಂದರ್ಭದಲ್ಲಿ ಅವರ ಕಛೇರಿಗಳಲ್ಲಿ ಸಿಗಬೇಕು ಹೀಗೆ ಸಬೂಬು ಹೇಳಿ, ವಾರದಲ್ಲಿ 3–4 ಸಭೆಗಳಿಗೆ ಹೋಗುತ್ತೇವೆಂದು ಹೇಳಿದರೆ ತಪ್ಪಾಗುತ್ತದೆ ಅಂತಹವರು ಯಾರಾದರೂ ಇದ್ದರೆ, ಕೂಡಲೇ ನಾವು ಕ್ರಮ ತೆಗೆದುಕೊಳ್ಳುತ್ತೇವೆ ಮಾನ್ಯ ಸದಸ್ಯರು ಇಂಥಿಂಥ ದಿವಸ ಇಂದಿಂದವರು ಇರಲಿಲ್ಲವೆಂದು ಬರವಣಿಗೆಯಲ್ಲಿ ಕೊಟ್ಟರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೂ ನಾವು ತಯಾರಿದ್ದೇವೆ ಯಾವುದೇ ಸಂದರ್ಭದಲ್ಲಿ ಹೀಗೆ ಆಗುವುದಕ್ಕೆ ಬಿಡುವುದಿಲ್ಲ ಎನ್ನುವಂತಹ ಭರವಸೆಯನ್ನು ಮಾನ್ಯ ಸದಸ್ಯರಿಗೆ ಕೊಡಬಯಸುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಜಾಸ್ತಿಯಾಗಿ ಬಿಟ್ಟಿದೆ ತಾಲ್ಲೂಕು ಮಟ್ಟದ ಅಧಿಕಾರಿಗಳು ಇರುವುದೇ ಇಲ್ಲ Executive Engineer ಕರೆದಿದ್ದರು, CS ಕರೆದಿದ್ದರು, DC ಕರೆದಿದ್ದರು, ಅವರು ಕರೆದಿದ್ದರು, ಇವರು ಕರೆದಿದ್ದರು ಎಂದು ವಾರದಲ್ಲಿ 3–4 ಸಲ ಮೀಟಿಂಗ್‌ಗೆಂದು ಹೋಗಿರುತ್ತಾರೆಂದು ಹೇಳುತ್ತಾರೆ ಜಿಲ್ಲಾ ಕೇಂದ್ರಗಳಿಂದ ತಾಲ್ಲೂಕುಗಳಿಗೆ ಓಡಾಡುತ್ತಾರೆ ನಾವು ಯಾವತ್ತಾದರೂ ಕೇಳಿದರೆ, ಆ ಮೀಟಿಂಗ್ ಇತ್ತು, ಈ ಮೀಟಿಂಗ್ ಇತ್ತು ಎಂದು ಅಧಿಕಾರಿಗಳು ಸಿಗುವುದೇ

ದುರ್ಲಭವಾಗಿದೆ ಇದಕ್ಕೆ ಏನಾದರೂ ಬಿಗಿ ಮಾಡಬೇಕು DCಗಳಿಗೆ ಮತ್ತು CEOಗಳಿಗೆ ಈ ಬಗ್ಗೆ ಆದೇಶ ಕೊಡಿ ತಿಂಗಳಿನಲ್ಲಿ 4–5 ಮೀಟಿಂಗ್‌ಗಳನ್ನು ಅವರು ಮಾಡಬಾರದು ಅದರಲ್ಲೂ ಸೋಮವಾರದಂದು ಕಡ್ಡಾಯವಾಗಿ ಮೀಟಿಂಗ್‌ಗಳನ್ನು ಮಾಡದಂತೆ ಮಾಡಬೇಕು ಏಕೆಂದರೆ, ಸೋಮವಾರ ಸಾಮಾನ್ಯವಾಗಿ ಎಲ್ಲಾ mofussil townಗಳಲ್ಲೂ shandy ಇರುತ್ತದೆ ಅವತ್ತು ಎಲ್ಲಾ ಅಧಿಕಾರಿಗಳೂ ಸಿಗುವಂತೆ ನೀವು ಮಾಡಬೇಕು

ಉಪಾಧ್ಯಕ್ಷರು ಪ್ರಶ್ನೋತ್ತರ 11 30 ಗಂಟೆಗೆ ಪ್ರಾರಂಭವಾಯಿತು ಈಗ 12 30 ಗಂಟೆಯಾಗುತ್ತಿದೆ ಒಂದು ಗಂಟೆಯೊಳಗಾಗಿ ಪ್ರಶ್ನೋತ್ತರ ಮುಗಿಸಬೇಕಾಗಿದೆ ಇನ್ನೂ ಚರ್ಚಿಸಬೇಕಾದ ಹಲವಾರು ವಿಷಯಗಳಿವೆ ಮಾನ್ಯ ಜ್ಞಾನೇಂದ್ರವರೆ, ತಾವು ಪ್ರತಿಯೊಂದು ಪ್ರಶ್ನೆಗೂ ಎದ್ದು ನಿಂತುಕೊಂಡು ಉಪ ಪ್ರಶ್ನೆ ಕೇಳಿದರೆ ಹೇಗೆ ?

ಶ್ರೀ ಆರಗ ಜ್ಞಾನೇಂದ್ರ ಮಾನ್ಯ ಉಪಾಧ್ಯಕ್ಷರೆ, ಅಧಿಕಾರಿಗಳು ಮೀಟಿಂಗ್ ಕಡಿಮೆ ಮಾಡಿ, ಅವರು Head Quartersನಲ್ಲೇ ಇದ್ದು, spot inspection ಮಾಡುವಂತೆ ಮಾಡಬೇಕು ಜಿಲ್ಲಾ ಪಂಚಾಯತ್‌ನ ಸ್ಥಾಯಿ ಸಮಿತಿ ಸಭೆಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು ಹೋಗಬೇಕೆಂದರೆ ಹೇಗೆ ? ಜಿಲ್ಲಾ ಮಟ್ಟದ ಅಧಿಕಾರಿಗಳು ಮಾತ್ರ ಆ ಸಭೆಗೆ ಹೋದರೆ ಸಾಕಾಗುತ್ತದೆ ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಇದರ ಬಗ್ಗೆ ಸೂಚನೆ ಕೊಡದೇ ಹೋದರೆ, ತಿಂಗಳಿಗೆ 20 ದಿನ ಮೀಟಿಂಗ್‌ಗಳೇ ನಡೆಯುತ್ತಿರುತ್ತವೆ ಅಧಿಕಾರಿಗಳು ಯಾರೂ ಕೂಡ ಸಿಗುವುದೇ ಇಲ್ಲ

ಶ್ರೀ ಬಿ ಶಿವರಾಂ ಮಾನ್ಯ ಉಪಾಧ್ಯಕ್ಷರೆ, ಅರಸೀಕೆರೆ ತಾಲ್ಲೂಕಿಗೆ ಸಂಬಂಧಪಟ್ಟಂತೆ ಅಲ್ಲಿಯ ಶಾಸಕರು ಈ ಪ್ರಶ್ನೆಯನ್ನು ಕೇಳಿದ್ದಾರೆ ಇದು ವಾಸ್ತವಿಕ ಸಂಗತಿ ಅವರು ಏನು ಕೇಳಿದ್ದಾರೆ, ಅದು ಇವತ್ತು ಹಾಸನ ಜಿಲ್ಲೆಯಲ್ಲಿ ನಡೆಯುತ್ತಿರತಕ್ಕಂಥ ಸಂಗತಿಯಾಗಿದೆ ನಿಮ್ಮ ಮುಖ್ಯ ಕಾರ್ಯ ನಿರ್ವಾಹಣಾಧಿಕಾರಿಗಳು ವಾರದಲ್ಲಿ 3–4 ಸಲ ಬಂದಿಲ್ಲವೆಂದು ಉತ್ತರ ಕೊಟ್ಟಿದ್ದಾರೆ ನೀವೇನಾದರೂ ಹಾಸನದಲ್ಲಿ ಒಂದು ವಾರದಲ್ಲಿ ನಾಲ್ಕು ದಿವಸ ಓಡಾಡಿ ಆ ನಾಲ್ಕೂ ದಿವಸವೂ ಸರ್ಕಾರದ ಎಲ್ಲಾ ಕಾರುಗಳು ಮತ್ತಿತರ ವೆಹಿಕಲ್‌ಗಳು ಡಿ ಸಿ ಆಫೀಸ್ ಮುಂದೆಯೇ ನಿಂತಿರುವುದನ್ನು ನೀವು ಕಾಣುತ್ತೀರಿ ಅಧಿಕಾರಿಗಳಿಗೆ ಏನು ಕೆಲಸವಿರುತ್ತದೆ ? ತಾವು ಮಂತ್ರಿಗಳು, ಮುಖ್ಯಮಂತ್ರಿಗಳು ಜಿಲ್ಲೆಗೆ ಭೇಟಿ ನೀಡುತ್ತಾರೆಂದು ಹೇಳಿದಿರಿ, ವಾರದಲ್ಲಿ ಮಂತ್ರಿಗಳು 4–5 ದಿವಸ ಅಲ್ಲೇ ಇದ್ದರೆ, ಎಲ್ಲಾ ಅಧಿಕಾರಿಗಳು ಅಲ್ಲೇ ಇರಬೇಕೆನ್ನುವುದಾದರೆ, ಶಾಸಕರು ಏನು ಕೆಲಸ ಮಾಡುವುದಕ್ಕೆ ಸಾಧ್ಯ ? ಎರಡನೆಯದಾಗಿ, ಜನಸಾಮಾನ್ಯರು ಯಾರನ್ನು ಹೋಗಿ ಭೇಟಿಯಾಗಬೇಕು,

ಅವರು ಯಾವ ಅಧಿಕಾರಿಗಳನ್ನು ಭೇಟಿ ಮಾಡುವುದಕ್ಕೆ ಸಾಧ್ಯವಿಲ್ಲ ದಿವಸ ಬಂದು ಜಿಲ್ಲಾ ಕಚೇರಿಯಲ್ಲಿ ನಿಂತುಕೊಳ್ಳುವುದಕ್ಕಾಗುತ್ತದೆಯೇ ? ಹಾಸನ ಜಿಲ್ಲೆಗೆ ಅವರು ಕೇಳಿರುವ ಪ್ರಶ್ನೆ ಪ್ರಸ್ತುತವಾಗಿದೆ ಜಿಲ್ಲಾ ಮಟ್ಟದ ಅಧಿಕಾರಿಗಳಾದ ಜಿಲ್ಲಾಧಿಕಾರಿಗಳನ್ನು ಕರೆದು ಮಾತನಾಡುವುದು ಸರಿಯೇ ಹೊರತು ಎಲ್ಲಾ ತಾಲ್ಲೂಕಿನ ಅಧಿಕಾರಿಗಳನ್ನು ಕರೆಯುವುದು ಸರಿಯಲ್ಲ ಎಲ್ಲಾ ತಾಲ್ಲೂಕಿನ ಅಧಿಕಾರಿಗಳನ್ನು ಕರೆದು ದಿವಸ ನೂರು ನೂರು ವಾಹನಗಳನ್ನು ನಿಲ್ಲಿಸಿಕೊಂಡು ನಿಂತಿರುತ್ತಾರೆ ಮೊನ್ನೆ ಹೊಳೇನರಸೀಪುರಕ್ಕೆ ಹೋಗುತ್ತಿರುವಾಗ 10 00 ಗಂಟೆಗೆ ಮನೆಯ ಹತ್ತಿರ 70 ವಾಹನಗಳನ್ನು ತಾಲ್ಲೂಕಿನಲ್ಲಿ ನಿಂತಿದ್ದಾವೆ ಆಶ್ಚರ್ಯ, 60–70 ಸರ್ಕಾರಿ ವಾಹನಗಳು ದಿವಸ ಈ ರೀತಿ ನಿಂತಿದ್ದರೆ, ಆ ಅಧಿಕಾರಿಗಳಿಗೆ ಸಂಬಳ, ಪೆಟ್ರೋಲ್‌ಗಳಿಗೆ ಖರ್ಚಾಗುವುದಕ್ಕೆ ಬೆಲೆ ಇಲ್ಲವೆ ? ಎಲ್ಲದಕ್ಕೂ ಕೂಡ ಒಂದು ಇತಿಮಿತಿ ಇರುತ್ತದೆ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಕರೆಯದೇ ಜಿಲ್ಲೆಯ ಎಲ್ಲಾ ಅಧಿಕಾರಿಗಳ ಸಮೂಹವನ್ನೇ ಕೂರಿಸಿಕೊಂಡು ದಿವಸಗಟ್ಟಲೆ ಕಾಲ ಕಳೆದರೆ, ಜನರ ಸಾಮಾನ್ಯ ಪ್ರಶ್ನೆ ಏನು ? ಅದಕ್ಕೆ ತಾವು ತೀರ್ಮಾನ ತೆಗೆದುಕೊಳ್ಳಿ

ಶ್ರೀ ಆರ್ ರಾಮಚಂದ್ರೇಗೌಡ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಾಸಕರ ಅಭಿಪ್ರಾಯ ಗೊತ್ತಾಗಿದೆ ಆ ಬಗ್ಗೆ ಸರಿಯಾದ instruction ಅನ್ನು ಕೂಡಲೆ ಕೊಡಲಾಗುವುದು

ಶ್ರೀ ಎ,ಎಸ್, ಬಸವರಾಜು ಉಪಾಧ್ಯಕ್ಷರೆ, ಜಿಲ್ಲಾ ಮಟ್ಟದ ಸಭೆಗಳಲ್ಲಿ ತಾಲ್ಲೂಕು ಮಟ್ಟದ ಸುಮಾರು 120 ಅಧಿಕಾರಿಗಳು ಇರುತ್ತಾರೆ ಆದರೆ, ಕೇಳುವುದು ಎಷ್ಟು ಜನರಿಗೆಂದರೆ, ಜಿಲ್ಲೆಯ 10 ಅಧಿಕಾರಿಗಳಿಗೆ ಮಾತ್ರ ಕೇಳಲಾಗುವುದು, ಇನ್ನು 110 ಅಧಿಕಾರಿಗಳು ಕೂಡ ಬೆಳಿಗ್ಗೆಯಿಂದ ಸಂಜೆವರೆಗೆ ಇರುತ್ತಾರೆ, ಮತ್ತೆ ವಾಪಸ್ ಬರುತ್ತಾರೆ, ಅವರಿಗೆ TA,DA, ಪೆಟ್ರೋಲ್,ಡಿಸೇಲ್ ಇದಕ್ಕೆ ಸರ್ಕಾರದ ಹಣ ವೆಚ್ಚವಾಗುತ್ತಿದೆ ಎಂದು ನಾನು ಹೇಳುತ್ತಿದ್ದೇನೆ

ಶ್ರೀ ಬಿ ಶಿವರಾಂ ಮಂತ್ರಿಗಳ ಉತ್ತರ ಕರೆಕ್ಟ್ ಆಗಿ ಗೊತ್ತಾಯಿತು, ಹಾಸನ ಜಿಲ್ಲೆಯಲ್ಲಿ ಏನು ನಡೆಯುವುದಿಲ್ಲ, ಹೇಳುತ್ತೇವೆಂದು ಅಷ್ಟನ್ನೇ ಹೇಳುತ್ತಿದ್ದಾರೆಯೇ ಹೊರತು, ನಡೆಯುತ್ತಿರುವುದನ್ನು ನಿಯಂತ್ರಣ ಮಾಡುವುದಕ್ಕೆ ಈ ಸರ್ಕಾರದ ಕೈಯಿಂದ ಸಾಧ್ಯವಿಲ್ಲವೆಂಬುದನ್ನು ಸದನ ಅರ್ಥ ಮಾಡಿಕೊಂಡರೆ ಸಾಕು

ಶ್ರೀ ರಾಮಚಂದ್ರೇಗೌಡ ತಾವು ಕೂಡ ಮಂತ್ರಿಗಳಾಗಿದ್ದವರು, ನಿಮಗೆ ಗೊತ್ತಿದೆ, ಜಿಲ್ಲಾ ಮಂತ್ರಿಗಳು ಹೋದಾಗ ಜಿಲ್ಲಾ ಅಧಿಕಾರಿಗಳಿರುತ್ತಾರೆ, ಅಕಸ್ಮಾತ್ ತಾಲ್ಲೂಕಿನಲ್ಲಿ ತಹಶೀಲ್ದಾರ್ ಹೋಗುತ್ತಾರೆ, ಮತ್ತೆ ಯಾರು ಹೋಗಬಾರದು ಇವತ್ತು ನಾನು ಉತ್ತರ ಕೊಟ್ಟಿರುವ ಪ್ರಕಾರ 3–4 ಸಾರಿ ಸಭೆಗಳಾಗಿಲ್ಲ, ತಿಂಗಳಿಗೆ

ಒಂದೊಂದೇ ಸಭೆಗಳಾಗಿರುವುದು ಅಕಸ್ಮಾತ್ ಅವರು ಅನಾವಶ್ಯಕವಾಗಿ ಹೋಗಿದ್ದರೆ they should be treated as absent hereafterwards

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಸಚಿವರೆ, ಹಾಸನ ಜಿಲ್ಲೆ ಒಂದೇ ಅಲ್ಲ, ಇಡೀ ಕರ್ನಾಟಕದ ಎಲ್ಲಾ ತಾಲ್ಲೂಕುಗಳಲ್ಲಿ, ಹಾಗೂ ಜಿಲ್ಲೆಗಳಲ್ಲಿ, ಕಡ್ಡಾಯವಾಗಿ ಈ ಅಭಿವೃದ್ಧಿ ಸಮಿತಿಗಳು ತಾಲ್ಲೂಕು ಮಟ್ಟದಲ್ಲಿರಬಹುದು, ಜಿಲ್ಲಾ ಮಟ್ಟದಲ್ಲಿರಬಹುದು, ಕಡ್ಡಾಯವಾಗಿ ಈ ಸಭೆಗಳಿಗೆ ಹೋಗಲೇಬೇಕೆಂದು ತಾವು ಒಂದು ಆದೇಶವನ್ನು ಕಳುಹಿಸಲೇಬೇಕಾಗುತ್ತದೆ, ಅದನ್ನು ತಾವು ಕಳುಹಿಸುತ್ತಾರಾ ಎಂಬುದರ ಬಗ್ಗೆ ಹೇಳಿ ಅಲ್ಲಿ 50% ಜನ ಬರದಿರುವ ಪರಿಸ್ಥಿತಿ ನಿರ್ಮಾಣವಾಗಿದೆ ಆದುದರಿಂದ ಅಭಿವೃದ್ಧಿ ಸಭೆಗಳನ್ನು ಕರೆಯುವುದರಲ್ಲಿ ಅರ್ಥನೇ ಇಲ್ಲ, ಅದು ಅರ್ಥ ಕಳೆಕೊಂಡಿದೆ ಅಧಿಕಾರಿಗಳಿರುವುದಿಲ್ಲವೆಂದರೆ ಏನು ಪರಿಸ್ಥಿತಿ, ಅದಕ್ಕೆ ಸ್ಪಷ್ಟವಾಗಿ ಇವತ್ತೇ ಅವರಿಗೆಲ್ಲಾ ಆದೇಶವನ್ನು ಕಳುಹಿಸುತ್ತೇನೆಂದು ತಾವು ಹೇಳಿ

ಶ್ರೀ ರಾಮಚಂದ್ರೇಗೌಡ ಪ್ರಜಾಪ್ರಭುತ್ವದಲ್ಲಿ ಸಭೆ ಕರೆಯಬೇಕಾದ್ದು ಧರ್ಮ, ಆ ಸಭೆಗೆ ಅವರು ಬರಬೇಕಾದ್ದು ಕೂಡ ಧರ್ಮ, ಆದರೆ ಒತ್ತಿಕೊಂಡು ಬರುವುದಕ್ಕಾಗುದಿಲ್ಲವಲ್ಲ ಇವತ್ತು ವಿಧಾನಸಭೆ ಅಥವಾ ವಿಧಾನ ಪರಿಷತ್ ಆಗಬಹುದು ನಮ್ಮ ಹಾಜರಾತಿ ಎಷ್ಟಿರುತ್ತದೆಂದು ನಾವು ಒಂದೊಂದು ಸಲ ನೋಡಿಕೊಳ್ಳಬೇಕಾಗುತ್ತದಲ್ಲ ಆದುದರಿಂದ, ನಾವು ಯಾರ ಮೇಲೂ ಆ ರೀತಿ ಒತ್ತಡ ತರುವುದಕ್ಕಾಗುವುದಿಲ್ಲ ಒಟ್ಟಿನಲ್ಲಿ ಅವರು ಅನಾವಶ್ಯಕವಾಗಿ ಕಚೇರಿಗಳಲ್ಲಿ ಸಿಗದಿದ್ದರೆ, ಅವರ ಮೇಲೆ ಕಾನೂನಿನ ಕ್ರಮ ತೆಗೆದುಕೊಳ್ಳುವುದನ್ನು ಜಾರಿ ಮಾಡುತ್ತೇವೆನ್ನುವ ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ

ಶ್ರೀ ಕೆ ಜಯಪ್ರಕಾಶ ಹೆಗ್ಡೆ ಹಾಗಲ್ಲ, ಸಚಿವರು ಜಿಲ್ಲೆಗೆ ಹೋದಾಗ ಕೆಡಿಪಿ ರಿವ್ಯು ಮಿಟಿಂಗ್ ಅಲ್ಲದೇ ಬೇರೆ ದಿವಸಗಳಲ್ಲಿ ಸಚಿವರು ಯಾವ ಇಲಾಖೆಯ ಅಧಿಕಾರಿಯನ್ನು ಕರೆಯುತ್ತಾರೋ ಅವರು ಬಿಟ್ಟು ಬೇರೆಯವರು ಅಲ್ಲಿ ಹೋಗಿ ಕಾಯ್ದುಕೊಂಡಿರಬಾರದು ಎಲ್ಲರೂ ಇದ್ದರೆ, ಸಚಿವರು ಎಲ್ಲರನ್ನು ಮಾತನಾಡಿಸುವುದಕ್ಕೆ ಸಾಧ್ಯವಾಗುವುದಿಲ್ಲ ಎಷ್ಟು ಸಮಯ ವೇಸ್ಟ್ ಆಗುತ್ತದೆ, ಆದುದರಿಂದ ಅವರಿಗೆ ಯಾವ ಅಧಿಕಾರಿ ಬೇಕೋ ಅವರನ್ನು ಮಾತ್ರ ಕರೆಹಿಸಿಕೊಳ್ಳಬೇಕು, ಎಲ್ಲರು ಬಂದು ನಿಲ್ಲುವುದನ್ನು ತಪ್ಪಿಸಬೇಕು

ಶ್ರೀ ರಾಮಚಂದ್ರೇಗೌಡ ಸಾಮಾನ್ಯವಾಗಿ ಅತಿವೃಷ್ಟಿಯಾದಂಥ ಸಂದರ್ಭದಲ್ಲಿ ಜಿಲ್ಲಾ ಮಂತ್ರಿಗಳು ಹೋದಾಗ ಅನೇಕ ಅಧಿಕಾರಿಗಳು ಜೊತೆಯಲ್ಲಿರಬೇಕಾಗುತ್ತದೆ

ಶ್ರೀ ಕೆ ಜಯಪ್ರಕಾಶ ಹೆಗ್ಡೆ ಕಂದಾಯ ಹಾಗೂ ಇಂಜಿನಿಯರ್ ಇಲಾಖೆಯ ಅಧಿಕಾರಿಗಳಿದ್ದರೆ ಸಾಕೆನಿಸುತ್ತದೆ

ಪ್ರವಾಹ ನಿರ್ವಹಣೆ ಮತ್ತು ಪುನರ್ ವಸತಿ

160 (1045) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಕರ್ನಾಟಕದಲ್ಲಿ ಪ್ರವಾಹಪೀಡಿತ ಪ್ರದೇಶಗಳ ಪೈಕಿ ಕೊಡಗು ಜಿಲ್ಲೆಯ ಹೆಚ್ಚು ಬಾದಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹೌದಾದರೆ ಸರ್ಕಾರ ಕೈಗೊಂಡಿರುವ ಮತ್ತು ಪುನರ್ವಸತಿ ಪರಿಹಾರ ಕಾರ್ಯಗಳ ವಿವರಗಳನ್ನು ನೀಡುವುದು

ಇ) ಪ್ರವಾಹಪೀಡಿತವಾಗಿರುವ ಸ್ಥಳಗಳು ಮತ್ತು ಜನರ ಸಂಖ್ಯೆ ನೀಡುವುದು

ಈ) ಪೀಡಿತ ಪ್ರದೇಶಗಳಲ್ಲಿ ಪರಿಹಾರಕ್ಕೆ ಬಿಡುಗಡೆ ಮಾಡಿದ ಅನುದಾನ ಅಥವಾ ಬಿಡುಗಡೆ ಮಾಡಬೇಕಾದ ಅನುದಾನ

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಹೌದು

ಆ) ಕೊಡಗು ಜಿಲ್ಲೆಯಲ್ಲಿ ಪರಿಹಾರ ಕಾರ್ಯ ಕೈಗೊಳಲು ಸರ್ಕಾರವು ರೂ 650 00 ಲಕ್ಷ ಹಣ ಬಿಡುಗಡೆ ಮಾಡಿದೆ ಜಿಲ್ಲಾ ಆಡಳಿತವು ತುರ್ತು ಪರಿಹಾರ ಕಾರ್ಯ ಕೈಗೊಳ್ಳಲು ವಿರಾಜಪೇಟೆ ತಹಶೀಲ್ದಾರ್ ರವರಿಗೆ ರೂ 20 00 ಲಕ್ಷ ಸೋಮವಾರಪೇಟೆ ತಹಶೀಲ್ದಾರ್ ರವರಿಗೆ ರೂ 10 00 ಲಕ್ಷ ಮತ್ತು ಮಡಿಕೇರಿ ತಹಶೀಲ್ದಾರ್ ರವರಿಗೆ ರೂ 10 00 ಲಕ್ಷ ಅನುದಾನ ಬಿಡುಗಡೆ ಮಾಡಿರುತ್ತದೆ ಕುಡಿಯುವ ನೀರಿಗೆ ರೂ 50 00 ಲಕ್ಷ ಬಿಡುಗಡೆ ಮಾಡಿರುತ್ತದೆ ತಗ್ಗು ಪ್ರದೇಶಗಳಲ್ಲಿರುವ ಜನರನ್ನು ಸ್ಥಳಾಂತರಿಸಲಾಗುತ್ತದೆ 10 ಗಂಜಿ/ಪುನರ್ವಸತಿ ಕೇಂದ್ರಗಳನ್ನು ತೆರೆದು ಜನರಿಗೆ ಊಟ ವಸತಿ ಒದಗಿಸಲಾಗಿದೆ ಮುಂಜಾಗ್ರತೆ ಕ್ರಮವಾಗಿ ದೋಣಿಗಳನ್ನು ವ್ಯವಸ್ಥೆ ಮಾಡಲಾಗಿದೆ ತುರ್ತು ಸನ್ನಿವೇಶದಲ್ಲಿ ಹೆಚ್ಚುವರಿ ಗಂಜಿ/ ಪುನರ್ವಸತಿ ಕೇಂದ್ರಗಳನ್ನು ತೆರೆಯುವಂತೆ ಸೂಚನೆ ನೀಡಲಾಗಿದೆ ಮೃತರ ಕುಟುಂಬದವರಿಗೆ 3 ಪ್ರಕರಣಗಳಲ್ಲಿ ತಲಾ ರೂ 50,000/–ದಂತೆ ಮತ್ತು ಒಂದು ಪ್ರಕರಣದಲ್ಲಿ ರೂ 1,00,000/– ದಂತೆ ಪರಿಹಾರ ನೀಡಲಾಗಿದೆ ಮನೆ ಹಾನಿಗೆ ಮತ್ತು ಬೆಳೆಹಾನಿಗೆ ಪರಿಹಾರ ಕೊಡಲು ಕ್ರಮ ಕೈಗೊಳ್ಳಲಾಗುತ್ತಿದೆ ಮೂಲಭೂತ ಸೌಕರ್ಯಗಳ ದುರಸ್ತಿಗಾಗಿ ಕ್ರಮವಹಿಸಲಾಗುತ್ತಿದೆ ಪರಿಹಾರ ಒದಗಿಸುವಂತೆ ಎಲ್ಲ ರೀತಿಯ ಮುಂಜಾಗ್ರತಾ ಕ್ರಮಗಳನ್ನು ತೆಗೆದುಕೊಳಲಾಗಿದೆ

ಇ) ವಿವರ ಕೆಳಗಿನಂತಿರುತ್ತವೆ

ಕ್ರ ಸಂ	ಹಾನಿಗೊಳ ಗಾದ ಗ್ರಾಮ	ಸಂತಸ್ಥ ಕುಟುಂಬಗಳ	ಒಟ್ಟು ಸಂತಸ್ಥರ

		ಸಂಖ್ಯೆ	ಸಂಖ್ಯೆ
1	ಗುಹ್ಯ	19	66
2	ಕರಡಿಗೋಡು	24	62
3	ಹಾಲುಗುಂದ ಕೊಂಡಂಗೇರಿ	17	80
4	ಗೋಣಿಕೊಪ್ಪ	105	350
5	ಬೇತ್ರಿ	21	173
6	ಮಡಿಕೇರಿ ನಗರ	42	157
7	ನೆಲ್ಲಿ ಹುದಿಕೇರಿ	12	43
	ಒಟ್ಟು	**240**	**931**

ಈ) ಸರ್ಕಾರವು ಪರಿಹಾರ ಕಾರ್ಯ ಕೈಗೊಳ್ಳಲು ಕೊಡಗು ಜಿಲ್ಲೆಗೆ ರೂ 650 00 ಲಕ್ಷ ಬಿಡುಗಡೆ ಮಾಡಿದೆ

ಶ್ರೀ ಐವಾನ್ ನಿಗ್ಲಿ ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಒಟ್ಟಿಗೆ ಮಳೆ ಹಾನಿ ಪರಿಹಾರವಾಗಿ ಕೊಡಗು ಜಿಲ್ಲೆಗೆ 650 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆಂದು ಹೇಳಿದ್ದಾರೆ ಈಗ ಬೆಳಿಗ್ಗೆ ಕೊಡಗು ಜಿಲ್ಲಾಡಳಿತದಿಂದ ನನಗೆ ಮಾಹಿತಿ ಸಿಕ್ಕಿರುವ ಪ್ರಕಾರ, ಸುಮಾರ ಕಡೆ ಲ್ಯಾಂಡ್ ಸ್ಲೈಡಿಂಗ್ ಆಗಿ, ಇಂದಿರಾ ನಗರದಲ್ಲಿ 30 ಮನೆಗಳು, ಜ್ಯೋತಿನಗರದಲ್ಲಿ 15 ಮನೆಗಳು, ಚಾಮುಂಡೇಶ್ವರಿಯಲ್ಲಿ 25 ಮನೆಗಳು, ಮಂಗಳದೇವಿನಗರದಲ್ಲಿ 85 ಮನೆಗಳು ಬಿದ್ದುಹೋಗಿವೆ, ಈ ಮನೆಗಳಿಗೆ ತಲಾ ರೂ 2000 ಪರಿಹಾರ ಕೊಟ್ಟಿದ್ದಾರೆ ಅವರಿಗೆ ಆ ಹಣದಲ್ಲಿ ಪುನಃ ಮನೆಯನ್ನು ಕಟ್ಟಗಾಗುತ್ತದೆಯೇ ? ಕನಿಷ್ಟ ಪ್ರತಿ ಮನೆಗೆ ರೂ 25,000 ಗಳನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ ಇತ್ತೀಚೆಗೆ ಕೊಡಗಿನಲ್ಲಿ ರೆಸಾರ್ಟ್‌ಗಳಿಗೆ ಅನುಮತಿಯನ್ನು ಕೊಟ್ಟಿದ್ದಾರೆ ನಾನು ಒಂದು ತಿಂಗಳ ಮುಂಚೆ ಹೋದಾಗ ಆ ಕಾಫಿ ಎಸ್ಟೇಟ್ ಎಲ್ಲಾ

ಉಪಾಧ್ಯಕ್ಷರು ನಿಮ್ಮ ಪ್ರಶ್ನೆ ಸೀಮಿತವಾಗಿರಲಿ, ಅಲ್ಲಿಗೆಲ್ಲಾ ಈಗ ಹೋಗಬೇಡಿ, ನಿಮ್ಮ ವಿಷಯವೇನೆಂಬುದನ್ನು ಸ್ಪಷ್ಟವಾಗಿ ಹೇಳಿ

ಶ್ರೀ ಐವಾನ್ ನಿಗ್ಲಿ · ಬಿದ್ದುಹೋಗಿರುವ ಈ 200 ಮನೆಗಳಿಗೆ ಕನಿಷ್ಟ ತಲಾ ರೂ 25,000 ಕೊಡಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಸದಸ್ಯರಾದ ನಿಗ್ಲಿಯವರೇನು ಪ್ರಶ್ನೆ ಕೇಳಿದ್ದಾರೆ, ಅವರು ಪ್ರಸ್ತುತ ಪಡೆದುಕೊಂಡಿರುವ ಮಾಹಿತಿಯ ಪ್ರಕಾರ, ಇವತ್ತು ಎಲ್ಲೆಲ್ಲಿ ಪೂರ್ಣ ಮನೆಗಳು ಬಿದ್ದಿವೆ, ಅವಕ್ಕೆ ಹೆಚ್ಚಿನ ಪರಿಹಾರವನ್ನು

ಕೊಡುವುದಕ್ಕೆ ನಾನು ಜಿಲ್ಲಾಧಿಕಾರಿಗಳಿಗೆ ಸೂಚನೆಗಳನ್ನು ಕೊಟ್ಟಿದ್ದೇನೆ ಮತ್ತೆ ಕೇಂದ್ರ ಸರ್ಕಾರದ ಹೊಸ ಗೈಡ್ ಲೈನ್ಸ್ ಪ್ರಕಾರನೂ ಇವತ್ತು ಪೂರ್ಣವಾಗಿ ಮನೆಗಳು ಬಿದ್ದಂಥ ಸಂದರ್ಭದಲ್ಲಿ ಅದಕ್ಕೆ ಪರಿಹಾರಧನ ಕೊಡುವುದನ್ನು ಹೆಚ್ಚಿಗೆ ಮಾಡಿದ್ದಾರೆ ಅದೇರೀತಿ ಅರ್ಧಂಬರ್ಧ ಬಿದ್ದಂಥ ಮನೆಗಳಿಗೂ ಹೆಚ್ಚಿನ ಪರಿಹಾರ ಕೊಡಲು ಈಗಾಗಲೇ ಗೈಡ್ ಲೈನ್ಸ್ ಬಂದಿದೆ ಆ ಪ್ರಕಾರ ನಾವು ಹೆಚ್ಚಿನ ಪರಿಹಾರ ಕೊಡಲು ನಾವು ಸೂಚನೆಯನ್ನು ಕೊಡುತ್ತೇವೆ

ಶ್ರೀ ಎಂ ಟಿ ಬಿ ನಾಗರಾಜ್ . ಇವತ್ತು ನೀವು ಕೊಟ್ಟಿರುವ ರೂ 2000 ನಲ್ಲಿ ಅರ್ಧ ಬಿದ್ದು ಹೋಗಿರುವ ಮನೆಯನ್ನು ರಿಪೇರಿ ಮಾಡಿಕೊಳ್ಳುವು ದಕ್ಕಾಗುವುದಿಲ್ಲ ಒಂದು ಮೂಟೆ ಸಿಮೆಂಟ್ ಬೆಲೆ ರೂ 300ಗಳು, ಒಬ್ಬ ಗಾರೆಯವರಿಗೆ 300 ರೂ ಕೂಲಿ, ಮನೆ ರಿಪೇರಿ ಮಾಡಿಕೊಳ್ಳುವುದ ಕ್ಕಾಗುವುದಿಲ್ಲ, ಅರ್ಧ ಮನೆ ಬಿದ್ದವರೆಗೆ ಕನಿಷ್ಟ ರೂ 10,000 ಕೊಡದಿದ್ದರೆ ಆ ಬಡವರಿಗೆ ಹೇಗೆ ಸಹಾಯ ಮಾಡಿದಂತಾಗುತ್ತದೆ ? ಸಂಪೂರ್ಣ ಮನೆ ಬಿದ್ದವರಿಗೆ ರೂ 25,000ಗಳನ್ನು ಕೊಡಿ

ಶ್ರೀ ಜಗದೀಶ್ ಶೆಟ್ಟರ್ ಸಂಪೂರ್ಣ ಮನೆಗಳು ಬಿದಿದ್ದರೆ ಹೊಸ ಗೈಡ್‌ಲೈನ್ಸ್ ಪ್ರಕಾರ ರೂ 25 000 ಗಳನ್ನು ಮತ್ತು ಅರ್ಧಂಬರ್ಧ ಬಿದ್ದ ಮನೆಗಳಿಗೆ ರೂ ಹತ್ತರಿಂದ ಹನ್ನೇರಡು ಸಾವಿರ ಕೊಡಲು ಅವಕಾಶವಿದೆ ಹೀಗಾಗಿ, ನಮ್ಮ ಅಧಿಕಾರಿಗಳಿಗೆ ಆ ರೀತಿಯ ಸೂಚನೆಗಳನ್ನು ಮತ್ತು ಅನುಮತಿಯನ್ನು ಕೊಟ್ಟಿದ್ದೇವೆ

ಶ್ರೀ ಕೆ ಅಭಯ ಚಂದ್ರ ಈಗಾಗಲೇ ರೂ 6000 ಕೊಟ್ಟವರಿಗೆ ಉಳಿದ 19,000 ಗಳನ್ನು ಕೊಡುತ್ತೀರಾ ? ಈಗ 2 ಸಾವಿರ 6 ಸಾವಿರ ಪರಿಹಾರ ಕೊಟ್ಟವರಿಗೆ ಹೊಸ ಗೈಡ್‌ಲೈನ್ಸ್ ಪ್ರಕಾರ ಉಳಿದ ಹಣವನ್ನು ಕೊಡಬೇಕಲ್ಲ

ಶ್ರೀ ಬಿ ಎ ಜೀವಿಜಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಕೊಡಗು ಜಿಲ್ಲೆಗೆ ಆರೂವರೆ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಕೊಟ್ಟಿದ್ದಾರೆ ಹಿಂದಿನ ಬಾಕಿ ಸೇರಿ ಆರೂವರೆ ಕೋಟಿ ಎಂದು ಹೇಳುತ್ತಾರೆ ನಮ್ಮ ಕೊಡಗು ಜಿಲ್ಲೆಯಲ್ಲಿ ಮಳೆಯಿಂದ ಹಾನಿಯಾಗಿರುವ ಸುಮಾರು 40 ಕೋಟಿ ರೂಪಾಯಿಗಳನ್ನು ಪ್ರಸ್ತಾವನೆ ಸರ್ಕಾರಕ್ಕೆ ಬಂದಿದೆ, ಈಗ ಬಿಡುಗಡೆಯಾಗಿರುವುದು ಕೇವಲ 5 ಕೋಟಿ ರೂಪಾಯಿಗಳು ಮಾತ್ರ, ನಮ್ಮ ಕೊಡಗು ಜಿಲ್ಲೆಯಲ್ಲಿ ಬಹಳ ಮಳೆಯಾಗುತ್ತಿದೆ ನಿನ್ನೆ ನಾನು ಬರುತ್ತಿರುವಾಗ, ನೀವು ಒಂದೊಂದು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ಮೈಸೂರು ಬಂಟ್ವಾಳ ರಸ್ತೆ ಮಾಡುತ್ತಿದ್ದೀರಿ ಈಗಾಗಲೇ ಅಲ್ಲಿ ಗುಂಡಿ ಬಿದ್ದಿದೆ, ನಮ್ಮ ಮಳೆಯ ಪ್ರಮಾಣ ಎಷ್ಟಿದೆ ಎಂದರೆ 6000–8000 ಮಿಲಿ ಮೀಟರ್ ಅಷ್ಟು ಮಳೆ ಬರುತ್ತಿದೆ, ನಮಗೆ ರಸ್ತೆಗಳಿಲ್ಲ ಅದಕ್ಕೋಸ್ಕರ ಈ ಮಳೆ ಹಾನಿಯಲ್ಲಾದರೂ ಹೆಚ್ಚಿನ ಆದ್ಯತೆಯನ್ನು ಕೊಟ್ಟು ನಮ್ಮ ಕೊಡಗು ಜಿಲ್ಲೆಯ ಈ

ರಸ್ತೆಗಳನ್ನು ರಿಪೇರಿ ಮಾಡಬೇಕು ಕೊಡಗು ಜಿಲ್ಲೆ ಮಾತ್ತವಲ್ಲ ತೀರ್ಥಹಳ್ಳಿ ಸೇರಿದಂತೆ ಮಲೆನಾಡು ಪ್ರದೇಶಕ್ಕೆ ಈ ಮಳೆ ಹಾನಿಯ ಹಿನ್ನೆಲೆಯಲ್ಲಿ ಹೆಚ್ಚಿನ ಹಣವನ್ನು ಕೊಡುತ್ತೀರಾ ಎನ್ನುವ ಪ್ರಶ್ನೆಯನ್ನು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಬಯಸುತ್ತೇನೆ

ಶ್ರೀ ಸಿ ಟಿ ರವಿ ಸಕಲೇಶಪುರ, ಅರಸೀಕೆರೆ ಮತ್ತು ಸೋಮವಾರ ಪೇಟೆ ಭಾಗಗಳಲ್ಲಿ ಯಾವುದೇ ಬೆಳೆ ಇಲ್ಲ, ಕಾಫಿ, ಮೆಣಸು ಒಂದು ಎಲೆಬಿಡದಂತೆ ಹಾಳಾಗಿ ಹೋಗಿದೆ

ಉಪ ಸಭಾಧ್ಯಕ್ಷರು ಈಗ ಇದನ್ನು ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳೋಣವೆ ?

ಶ್ರೀ ಸಿ ಟಿ ರವಿ ಅರ್ಧಗಂಟೆ ಚರ್ಚೆಗೆ ತೆಗೆದುಕೊಳ್ಳಬೇಕಾಗುತ್ತದೆ

ಉಪ ಸಭಾದ್ಯಕ್ಷರು ಆಯಿತು ಬಿಡಿ

ಹೊಸ ತಾಲ್ಲೂಕುಗಳ ರಚನೆ

161 (1363) ಶ್ರೀ ಶಿವಾನಂದ ಎಸ್ ಪಾಟೀಲ್ (ಬಸವನಬಾಗೇವಾಡಿ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ರಾಜ್ಯದಲ್ಲಿ ಸರ್ಕಾರ ಹೊಸದಾಗಿ ತಾಲ್ಲೂಕುಗಳನ್ನು ರಚನೆ ಮಾಡಿದೆಯೇ,

ಆ) ಹಾಗಿದ್ದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸಲು ಕೈಗೊಂಡ ಕ್ರಮವೇನು,

ಇ) ರಾಜ್ಯದಲ್ಲಿ ಯಾವ ಯಾವ ಹೊಸ ತಾಲ್ಲೂಕುಗಳನ್ನು ರಚಿಸಲಾಗುವುದು,

ಈ) ಯಾವ ಕಾಲಮಿತಿಯೊಳಗೆ ಹೊಸದಾಗಿ ತಾಲ್ಲೂಕುಗಳನ್ನು ರಚಿಸಲಾಗುವುದು ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) 1956 ರಲ್ಲಿ ಹೊಸ ಮೈಸೂರು ರಾಜ್ಯ ನಿರ್ಮಾಣವಾದ ನಂತರ ಸಣ್ಣಪುಟ್ಟ ಬದಲಾವಣೆಗಳನ್ನು ಮಾತ್ರ ತಾಲ್ಲೂಕು ಮಟ್ಟದಲ್ಲಿ ಮಾಡಲಾಗಿದೆ ಆದರೆ, ಜಿಲ್ಲೆಗಳ ಪುನರ್ ವಿಂಗಡಣೆಯನ್ನು ಮೂರು ಸಲ ಮಾಡಲಾಗಿದೆ 1950 ರ ದಶಕದಲ್ಲಿ ಸಮುದಾಯ ಅಭಿವೃದ್ಧಿ ಯೋಜನೆಗಳನ್ನು (Community Development Programs) ಜಾರಿಯಲ್ಲಿದ್ದಾಗಲೂ ಕೂಡ ಬೇರೆ ರಾಜ್ಯಗಳಲ್ಲಿ ತಾಲ್ಲೂಕುಗಳನ್ನು ವಿಭಜಿಸಿ ಅಭಿವೃದ್ಧಿ ಮಂಡಳಿಗಳನ್ನಾಗಿ (Development Block) ಮಾಡಲಾಗಿತ್ತು ಆದರೆ ಕರ್ನಾಟಕದಲ್ಲಿ ತಾಲ್ಲೂಕುಗಳನ್ನೆ Blockಗಳೆಂದು ಪರಿಗಣಿಸಲಾಯಿತು ಆಗಲೂ ಕೂಡ ತಾಲ್ಲೂಕುಗಳು ಪುನರ್

ರಚನೆ ಆಗಲಿಲ್ಲ ಶ್ರೀ ವಾಸುದೇವರಾವ್ ಸಮಿತಿಯು ಕೆಲವು ಸೂಚನೆಗಳನ್ನು ಮಾಡಿದ್ದರೂ ಕೂಡ ತಾಲ್ಲೂಕುಗಳ ಪುನರ್ ರಚನೆ ಕಾರ್ಯ ಕೈಗೊಳ್ಳಲಿಲ್ಲ ನಂತರ ಜಿಲ್ಲಾ ರಚನೆಗೆ ಸಂಬಂಧಿಸಿದಂತೆ ಹುಂಡೇಕೆರೆ ಹಾಗೂ ಗದ್ದಿಗೌಡರ್ ಸಮಿತಿಗಳು ಕೆಲವು ತಾಲ್ಲೂಕುಗಳ ರಚನೆಯ ಬಗ್ಗೆ ಮಾಡಿದ ಸೂಚನೆಗಳು ಕೂಡ ಜಾರಿಗೆ ಬರಲಿಲ್ಲ ಆದರೆ ಇತ್ತೀಚೆಗೆ 2001 ರಲ್ಲಿ ಬೆಂಗಳೂರು ಪೂರ್ವ ತಾಲ್ಲೂಕನ್ನು ಮಾತ್ರ ರಚಿಸಲಾಗಿದೆ

ಆ) ಸರ್ಕಾರವು ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಪರಿಶೀಲಿಸುತ್ತಿದೆ ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಿ ಅದರ ವರದಿ ಬಂದ ನಂತರ ಅದನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಕ್ರಮ ಕೈಗೊಳ್ಳಲಾಗುವುದು

ಇ) ತಜ್ಞರ ಸಮಿತಿಯನ್ನು ನೇಮಿಸಿ ಅದರ ವರದಿ ಬಂದ ನಂತರ ಪರಿಶೀಲಿಸಿನಿರ್ಧರಿಸಲಾಗುವುದು

ಈ) ಮೇಲೆ (ಇ) ನಲ್ಲಿನ ಉತ್ತರದಿಂದ ಉದ್ಭವಿಸುವುದಿಲ್ಲ

ಶ್ರೀ ಶಿವಾನಂದ ಎಸ್ ಪಾಟೀಲ್ ಮಾನ್ಯ ಉಪ ಸಭಾಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ, ಅದರಲ್ಲಿ ಆನಲ್ಲಿ ಸರ್ಕಾರವು ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚಿಸುವ ಬಗ್ಗೆ ಪರಿಶೀಲಿಸುತ್ತಿದೆ ಈ ಬಗ್ಗೆ ತಜ್ಞರ ಸಮಿತಿಯನ್ನು ನೇಮಿಸಿ ಅದರ ವರದಿ ಬಂದ ನಂತರ ಅದನ್ನು ಸಮಗ್ರವಾಗಿ ಪರಿಶೀಲಿಸಿದ ನಂತರ ಹೊಸ ತಾಲ್ಲೂಕುಗಳ ರಚನೆ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದೆಂದು ಹೇಳಿದ್ದಾರೆ ನಾನು ಮಾನ್ಯ ಸಚಿವರಿಗೆ ಕೇಳುವುದಕ್ಕೆ ಇಷ್ಟ ಪಡುತ್ತೇನೆ ಈಗಾಗಲೇ ತಾಲ್ಲೂಕುಗಳು ಎಷ್ಟು ಆಗಬೇಕು, ಜಿಲ್ಲೆಗಳು ಎಷ್ಟು ಆಗಬೇಕು, ಡಿವಿಷನ್ಸ್ ಎಷ್ಟು ಆಗಬೇಕು, ಸಬ್ ಡಿವಿಷನ್ಸ್ ಎಷ್ಟು ಆಗಬೇಕು, ಎನ್ನತಕ್ಕಂತಹ ವರದಿಯನ್ನು ಶ್ರೀ ವಾಸುದೇವನ್ ಕಮ್ಮಿಟಿ ವರದಿ ಕೊಟ್ಟಿದೆ, ಹುಂಡೇಕರ್ ಸಮಿತಿ ವರದಿ ಕೊಟ್ಟಿದೆ, ಗದ್ದಿಗೌಡರ್ ಸಮಿತಿ ವರದಿ ಕೊಟ್ಟಿದೆ ಮತ್ತೊಂದು ತಜ್ಞರ ಸಮಿತಿ ನೇಮಿಸತಕ್ಕಂತಹ ಅವಶ್ಯಕತೆ ತಮಗೇನಿದೆ ಎಂದು ದಯಮಾಡಿ ತಾವು ಸಭೆಗೆ ತಿಳಿಸಬೇಕು ತಜ್ಞರ ಸಮಿತಿ ವರದಿ ಮೇಲೆ ತಾವೇನಾದರೂ ತಾಲೂಕುಗಳನ್ನು ಹಾಗೂ ಜಿಲ್ಲೆಗಳನ್ನು ರಚನೆ ಮಾಡುತ್ತಿದ್ದರೆ, ರಾಮನಗರ ಜಿಲ್ಲೆಯನ್ನು ಹೇಗೆ ರಚನೆ ಮಾಡಿದ್ದೀರಿ ಎಂದು ಸಭೆಗೆ ತಿಳಿಸಬೇಕು

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಉಪಾಧ್ಯಕ್ಷರೆ, ಹೊಸದಾಗಿ ಜಿಲ್ಲೆಗಳ ಸ್ಥಾಪನೆ ಆಯಿತು, ಹೊಸ ತಾಲ್ಲೂಕುಗಳನ್ನು ಮಾಡಬೇಕೆಂಬ ಬೇಡಿಕೆ ಬಹಳ ದಿವಸಗಳಿಂದ ಇಡೀ ರಾಜ್ಯದಲ್ಲಿ ಎಲ್ಲಾ ಭಾಗಗಳಲ್ಲಿ ಹಾಗೂ ಎಲ್ಲಾ ಜಿಲ್ಲೆಗಳಲ್ಲಿಯೂ ಇದೆ ಈ ಸರ್ಕಾರ ಕೂಡ ಹೊಸ ತಾಲ್ಲೂಕುಗಳನ್ನು ರಚನೆ ಮಾಡುವ ಬಗ್ಗೆ ಅದರ ಪರವಾಗಿದೆ ನಾವೂ ಕೂಡ ಅದರ ಪರವಾಗಿದ್ದೇವೆ

ಅದರ ಬಗ್ಗೆ ನಾವು ಚಿಂತನೆಯನ್ನು ಮಾಡುತ್ತಿದ್ದೇವೆ. ಮಾನ್ಯ ಶಿವಾನಂದ ಪಾಟೀಲರು ಏನು ಪ್ರಶ್ನೆ ಕೇಳಿದ್ದಾರೆ, ಇದರ ಬಗ್ಗೆ ಪರಿಶೀಲನೆ ಮಾಡುತ್ತೇವೆ ಹೊಸ ತಜ್ಞರ ಕಮಿಟಿ ಏಕೆ ಮಾಡುತ್ತೇವೆಂದರೆ, 1973ರಲ್ಲಿ ವಾಸುದೇವನ್‌ರವರ ಒಂದು ಕಮಿಟಿ ಆಗಿತ್ತು 1984 ರಲ್ಲಿ ಬಿ ಎಮ್ ಹುಂಡೇಕಾರ್‌ರವರ ಒಂದು ಕಮಿಟಿ ಆಯಿತು 1986 ರಲ್ಲಿ ಡಿ ಸಿ ಗದ್ದೀಗೌಡರ ಕಮಿಟಿ ಆಯಿತು ಅವರೆಲ್ಲಾ ವರದಿ ಕೊಟ್ಟಿದ್ದಾರೆ ಆ ವರದಿ ಸರ್ಕಾರದ ಅಧೀನದಲ್ಲಿದೆ ಈ ವರದಿಗಳು ಬಂದು 20 ವರ್ಷಗಳ ಮೇಲ್ಪಟ್ಟಾಯಿತು ಮೊದಲನೇ ವರದಿ ಬಂದು 30 ವರ್ಷಗಳ ಮೇಲಾಯಿತು ಅದಾದ ಮೇಲೆ ಇವತ್ತು ಜನಸಂಖ್ಯೆಯಲ್ಲಿ ಬದಲಾವಣೆ, ಏರಿಯಾದಲ್ಲಿ ಬದಲಾವಣೆ, ನಾವು ಹೊಸದಾಗಿ ತಾಲ್ಲೂಕುಗಳನ್ನು ಮಾಡಬೇಕಾದರೆ ಮತ್ತೊಂದು expert committee ಮಾಡಲೇಬೇಕಾಗುತ್ತದೆ ಹಿಂದಿನ ಕಮಿಟಿಗಳು ಆಗಿ 20 ವರ್ಷಗಳಾಗಿವೆ ಆಗಿನ ಸರ್ಕಾರ ಈ ವರದಿಗಳ ಮೇಲೆ ಕ್ರಮ ತೆಗೆದುಕೊಂಡಿದ್ದರೆ ಮತ್ತೊಮ್ಮೆ ಕಮಿಟಿ ಮಾಡುವ ಅವಶ್ಯಕತೆ ಇರಲಿಲ್ಲ 20 ವರ್ಷಗಳ ನಂತರ ನಾವು ವಿಚಾರ ಮಾಡುತ್ತಿದ್ದೇವೆ ಹೀಗಾಗಿ ಮತ್ತೊಂದು ಕಮಿಟಿ ಮಾಡಬೇಕಾಗುತ್ತದೆ ಹೊಸ ಕಮಿಟಿ ಮಾಡಿ, ಹಿಂದಿನ ಕಮಿಟಿಯವರು ಏನು ವರದಿ ಕೊಟ್ಟಿದ್ದಾರೆ, ಆ ವರದಿಯನ್ನೂ consider ಮಾಡಿ, ಆ ವರದಿಯಲ್ಲಿ ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ, ಯಾವ ಯಾವ ತಾಲ್ಲೂಕುಗಳನ್ನು ಮಾಡಬೇಕೆಂದು ಹೇಳಿದ್ದಾರೆ ಅದನ್ನೂ ಕೂಡ ಅವರು ಪರಿಶೀಲನೆ ಮಾಡುತ್ತಾರೆ ಹಿಂದಿನ ವರದಿಗಳ ಪ್ರಕಾರ 25 ರಿಂದ 30 ತಾಲ್ಲೂಕುಗಳನ್ನು ಮಾಡಬೇಕೆಂದು ವರದಿ ಇತ್ತು ಇಡೀ ರಾಜ್ಯದಲ್ಲಿ 85 ರಿಂದ 90 ಸ್ಥಳಗಳಲ್ಲಿ ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದು ಬೇಡಿಕೆ ಇದೆ ಇವುಗಳನ್ನೆಲ್ಲಾ ಪರಿಶೀಲನೆ ಮಾಡಬೇಕೆಂದರೆ, ತಜ್ಞರ ಸಮಿತಿ ಮಾಡಲೇಬೇಕಾಗುತ್ತದೆ ಅದನ್ನು consider ಮಾಡುತ್ತೇವೆ ಎನ್ನುವಂತಹ ಮಾತನ್ನು ಹೇಳುತ್ತೇನೆ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಉಪಾಧ್ಯಕ್ಷರೆ, ಹಳೆಯ ಸಮಿತಿಗಳನ್ನು ಮಾಡಿ 20 ವರ್ಷಗಳಾದವು, ಜನಸಂಖ್ಯೆ ಆಧಾರದ ಮೇಲೆ ಹೊಸ ಸಮಿತಿಗಳನ್ನು ಮಾಡಬೇಕೆಂದು ಹೇಳಿದಿರಿ, ಜಿಲ್ಲೆಗಳನ್ನು ಮಾಡಿರುವುದರ ಬಗ್ಗೆ ಮತ್ತು ತಾಲ್ಲೂಕುಗಳನ್ನು ಮಾಡಿರುವುದರ ಬಗ್ಗೆ ನಮ್ಮ ತಕರಾರು ಏನೂ ಇಲ್ಲ ರಾಮನಗರ ಮತ್ತು ಚಿಕ್ಕಬಳ್ಳಾಪುರಗಳನ್ನು ಜಿಲ್ಲೆಗಳನ್ನಾಗಿ ಮಾಡಿದರಲ್ಲಾ, ಇದಕ್ಕೆ ಯಾವ ಸಮಿತಿ ರಚನೆ ಮಾಡಿದಿರಿ, ಯಾವ ಸಮಿತಿಯವರು ನಿಮಗೆ ಈ ಜಿಲ್ಲೆಗಳನ್ನು ಮಾಡುವುದಕ್ಕೆ ಅಧಿಕಾರ ಕೊಟ್ಟವರು? ರಾಮನಗರ ಹಾಗೂ ಚಿಕ್ಕಬಳ್ಳಾಪುರ ಜಿಲ್ಲೆಗಳಾಗಿದ್ದು ಬಹಳ ಸಂತೋಷ ಕನಕಪುರ ಕೂಡ ಜಿಲ್ಲೆಯಾಗಲಿ ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ ಈ ಜಿಲ್ಲೆಗಳನ್ನು

ಮಾಡುವುದಕ್ಕೆ ಯಾವ ಕಮಿಟಿಯವರು ಶಿಫಾರಸ್ಸು ಮಾಡಿದರು ಎಂದು ಸ್ಪಷ್ಟವಾಗಿ, ಪ್ರಾಮಾಣಿಕವಾಗಿ ಹೇಳಿ ಹೊಳೆನರಸೀಪುರವನ್ನೂ ನೀವು ಜಿಲ್ಲೆ ಮಾಡಿ ಶಿಕಾರಿಪುರವನ್ನೂ ಜಿಲ್ಲೆ ಮಾಡಿ ನಮಗೇನೂ ಅಭ್ಯಂತರವಿಲ್ಲ

ಉಪಾಧ್ಯಕ್ಷರು ಅವರ ಪ್ರಶ್ನೆಗೆ ಒಬ್ಬರು ಇಬ್ಬರು ಉಪ ಪ್ರಶ್ನೆ ಕೇಳಬಹುದು ಎಲ್ಲರೂ ಕೈ ಎತ್ತುತ್ತಿದ್ದರೆ ಯಾರಿಗೆ ಅವಕಾಶ ಕೊಡುವುದು? ನಾನೂ ನಿಮ್ಮ ಜೊತೆ ಕೈ ಎತ್ತಬೇಕಾಗುತ್ತದೆ ಭಾಗೀರಥಿಯವರು ಪ್ರಶ್ನೆ ಕೇಳಿ ಅವರೂ ಪ್ರಶ್ನೆ ಕೇಳಲಿ ಎಲ್ಲಾ ಉತ್ತರಗಳನ್ನು ಒಟ್ಟಿಗೆ ಕೊಡುತ್ತಾರೆ

ಶ್ರೀ ವಾಟಾಳ್ ನಾಗರಾಜ್ ಅವರು ಬೇರೆ ಪ್ರಶ್ನೆ ಕೇಳುತ್ತಾರೆ ನಾನು ಮತ್ತೊಮ್ಮೆ ನಿಮ್ಮ ಗಮನಕ್ಕೆ ತರುತ್ತೇನೆ

ಉಪಾಧ್ಯಕ್ಷರು ತೊಂದರೆ ಮಾಡಬೇಡಿ 11 30 ಗಂಟೆಗೆ ಪ್ರಾರಂಭವಾಗಿ, 12 30 ಗಂಟೆ ಆಗಿದೆ ಕುಳಿತುಕೊಳ್ಳಿ ಎಂದು ಹೇಳಿದರೆ ಯಾರೂ ಕುಳಿತುಕೊಳ್ಳಲಿಲ್ಲವೆಂದರೆ ನಾನು ಏನು ಮಾಡುವುದು?

ಶ್ರೀ ಆರ್ ದ್ರುವನಾರಾಯಣ ಕಳೆದ ಅಸೆಂಬ್ಲಿಯಲ್ಲಿ ನಾನು ಪ್ರಶ್ನೆ ಕೇಳಿದ್ದೆ ಕ್ಷೇತ್ರ ಪುನರ್ವಿಂಗಡಣೆ

ಉಪಾಧ್ಯಕ್ಷರು ಕುಳಿತುಕೊಳ್ಳಿ ಎಂದು ಹೇಳಿದರೂ ಕುಳಿತುಕೊಳ್ಳಲಿ ಲ್ಲವೆಂದರೆ ನಾನು ಏನು ಮಾಡಲಿ? ನಿಮ್ಮ ಪ್ರಶ್ನೆಗೆ ಉತ್ತರ ಕೊಡುವಾಗ ಅವರಿಗೆ ಕುಳಿತುಕೊಳ್ಳಿ ಎಂದು ಹೇಳಿದರೂ ಕುಳಿತುಕೊಳ್ಳುವುದಿಲ್ಲ ನಾನು ಏನು ಮಾಡಬೇಕು?

ಶ್ರೀ ವಾಟಾಳ್ ನಾಗರಾಜ್ ತಾವು ಏನು ಮಾಡಬೇಕೆಂದು ನಾನು ಹೇಳುವುದಕ್ಕೆ ಬರುವುದಿಲ್ಲ ತಾವು ಅವರಿಗೆ ಹೇಳಿ ನನ್ನ ಪ್ರಶ್ನೆಗೆ ಉತ್ತರ ಕೊಡುತ್ತಿದ್ದಾರೆ,

ಉಪಾಧ್ಯಕ್ಷರು ಸಾಕಷ್ಟು ಬೇಡಿಕೆಗಳಿವೆ ಅದರಲ್ಲಿ ಸೇರಿಸಿಕೊಂಡು ಅವರು ಮಾತನಾಡುವಾಗ ಮಾತನಾಡಿದರೆ ಆಯಿತು ಯಾವುದೇ ಪ್ರಶ್ನೆ ಬಂದರೂ ಎಲ್ಲರೂ ಕೈ ಎತ್ತುವುದು

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಏನು ಪ್ರಶ್ನೆಯನ್ನು ಕೇಳಿದ್ದಾರೆ, ಚಿಕ್ಕಬಳ್ಳಾಪುರ ಮತ್ತು ರಾಮನಗರ ಈ ಜಿಲ್ಲೆಗಳನ್ನು ಮಾಡುವ ಸಂದರ್ಭದಲ್ಲಿ ಹೊಸ ಜಿಲ್ಲೆಗಳನ್ನು ಮಾಡುವ ಬಗ್ಗೆ ಡಾ ಬಾಲಸುಬ್ರಮಣ್ಯ ನಿವೃತ್ತ IAS ಅಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಸರ್ಕಾರ ಒಂದು ಸಮಿತಿಯನ್ನು ಮಾಡಿತ್ತು ಅದರಲ್ಲಿ ಇನ್ನಿರಾಯರವರು ಸದಸ್ಯರಾಗಿದ್ದರು, ಮತ್ತು ಚಿರಂಜೀವಿಸಿಂಗ್‌ರವರು ಕೂಡ ಸದಸ್ಯರಾಗಿದ್ದರು ಈ ಕಮಿಟಿ ಅವರ ವರದಿ ಕೊಟ್ಟ ನಂತರ ಆ ವರದಿ ಆಧಾರದ ಮೇಲೆ ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ನಾವು ಘೋಷಣೆ ಮಾಡಿದ್ದೇವೆ

ಶ್ರೀ ವಾಟಾಳ್ ನಾಗರಾಜ್ ಈ ಸಮಿತಿಗಳನ್ನು ಮಾಡಿದ್ದು ನನಗೆ ಗೊತ್ತಿಲ್ಲವೆಂದು ಹೇಳಿದ್ದಾರೆ 20 ವರ್ಷಗಳಾದವು ಎಂದು ಹೇಳಿದ್ದಾರೆ ಈಗ ಮತ್ತೆ ಅದಕ್ಕೆ ಒಂದು ಕಥೆ ಹೇಳುತ್ತಿದ್ದಾರೆ, ಇದರ ಅರ್ಥವೇನು? ಆ ಎರಡೂ ಜಿಲ್ಲೆಗಳನ್ನು ಮಾಡುವುದಕ್ಕೆ ಒಂದು ಸಮಿತಿ ಮಾಡಿದಿರಾ? ಚಿಕ್ಕಬಳ್ಳಾಪುರ, ಮತ್ತು ರಾಮನಗರ ಜಿಲ್ಲೆಗಳನ್ನು ಮಾಡುವುದಕ್ಕಾಗಿ ಸಮಿತಿಯನ್ನು ನೇಮಕ ಮಾಡಿದ್ದಿರಾ? ಈ ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಮಾಡಿದ್ದಿರಾ? ಆ ಸಮಿತಿ ವರದಿ ಏನು ಈ ಸಭೆಯ ಮುಂದಡಿ ರಾಮನಗರ ಜಿಲ್ಲೆ ಆಗುವುದಕ್ಕೆ ನಮ್ಮ ತಕರಾರು ಇಲ್ಲ ಸಮಿತಿ ಏನು ವರದಿ ಕೊಟ್ಟಿದೆ ಅದನ್ನು ಸದನದ ಮುಂದೆ ಇಡಿ

ಶ್ರೀ ಎಸ್ ಶಿವಾನಂದ ಪಾಟೀಲ್ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ, ಈ ವಾಸುದೇವನ್ ಕಮಿಟಿ ವರದಿಯನ್ನು, ಹುಂಡೇಕರ್ ಕಮಿಟಿ ವರದಿಯನ್ನು ಮತ್ತಿ ಗದೀಗೌಡರ್ ಸಮಿತಿ ವರದಿಯನ್ನು ಕಸದ ಬುಟ್ಟಿಗೆ ಹಾಕಿ ಈ ಎರಡು ಜಿಲ್ಲೆಗಳ ಸಲುವಾಗಿ ಹೊಸ ಸಮಿತಿ ನೇಮಕ ಮಾಡಿದ್ದೀರಾ? ಮಾನ್ಯ ವಾಟಾಳ್ ನಾಗರಾಜ್‌ರವರು ಅದನ್ನೇ ಕೇಳುತ್ತಿರುವುದು 1975 ರಿಂದ 87 ರವರೆಗೆ ನೀವು ಕಮಿಟಿಗಳನ್ನು ನೇಮಕ ಮಾಡಿದ್ದೀರಿ ಆ ಮೂರು ಕಮಿಟಿಗಳಿಗೆ ಏನು sanctity ಉಳಿಯಿತು? ಆ ಕಮಿಟಿಗಳ ವರದಿಗಳನ್ನು implement ಮಾಡದೇ ಹೊಸದಾಗಿ ರಾಮನಗರ ಮತ್ತು ಚಿಕ್ಕಬಳ್ಳಾಪುರಕ್ಕೆ ಒಂದು ಹೊಸ ಸಮಿತಿ ಮಾಡಿಕೊಂಡು ಅದಕ್ಕೆ ಕೊಟ್ಟರೆ, ಗುಲ್ಬರ್ಗ ಜಿಲ್ಲೆಯವರು ಏನು ತಪ್ಪು ಮಾಡಿದ್ದರು ಎಂದು ತಾವು ಹೇಳಬೇಕು

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಶಿವಾನಂದ ಪಾಟೀಲರು ಏನು ಹೇಳಿದರು, ವಾಸುದೇವನ್ ಕಮಿಟಿ ಇರಬಹುದು, ಹುಂಡೇಕರ್ ಮತ್ತು ಗದ್ದೀಗೌಡರ್ ಕಮಿಟಿ ಏನಿವೆ, ಅವರು ಏನು ವರದಿ ಕೊಟ್ಟಿದ್ದಾರೆ, ಅದನ್ನು ಕಸದ ಬುಟ್ಟಿಗೆ ಹಾಕುವುದಲ್ಲ ಆ ವರದಿಗಳನ್ನೂ consider ಮಾಡುತ್ತೇವೆ ಆ ವರದಿಯಲ್ಲಿ ಏನು ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ, ಅದನ್ನೂ ಕೂಡ ನೋಡುತ್ತೇವೆ ಹೊಸ ಸಮಿತಿ ಅದನ್ನೂ ಪರಿಶೀಲಿಸುತ್ತದೆ

ಶ್ರೀ ಎಸ್ ಶಿವಾನಂದ ಪಾಟೀಲ್ ಈ ಮೂರು ಕಮಿಟಿಗಳ ವರದಿಯನ್ನು ಇನ್ನು ಪಾರ್ಷಿಯಲಿ ಕೂಡ implement ಆಗಿಲ್ಲ ವಾಸುದೇವನ್ ರವರು 194

ಉಪಾಧ್ಯಕ್ಷರು ಇಂತಹ ಪ್ರಶ್ನೆಗಳನ್ನು ಹಾಕಿ ಒಂದು ಗಂಟೆಯವರೆಗೆ ಇದರ ಬಗ್ಗೆ ಚರ್ಚೆ ಮಾಡಿದರೆ, ಇದರ ಮೇಲೆ ಚರ್ಚೆಯಾಗುವುದಕ್ಕೆ ಒಂದು ವಾರ ಕಾಲಾವಕಾಶ ಬೇಕಾಗುತ್ತದೆ ಪ್ರಶ್ನೆ ಕೇಳಿ ಅದರ ಮೇಲೆ ಅರ್ಧ ಗಂಟೆ

ಮುಕ್ಕಾಲು ಗಂಟೆ ಚರ್ಚೆ ಮಾಡಿದರೆ ಹೇಗೆ? ಬೇರೆ ರೀತಿಯಲ್ಲಿ ನೀವು ಆ ಪ್ರಶ್ನೆಯನ್ನು ಕೇಳಬಹುದು

ಶ್ರೀ ಎಸ್ ಶಿವಾನಂದ ಪಾಟೀಲ್ ಬೇರೆ ರೀತಿ ಅಲ್ಲ, ನಾವು ಬಹಳ specific ಆಗಿ ಕೇಳಿದ್ದೇವೆ ತಾವು ಬೇಕಾದರೆ ಓದಿ ನೋಡಿ ನಾವು ಹೇಳುತ್ತಿರುವುದು ಇಷ್ಟೆ ಈ ಮೂರೂ ಸಮಿತಿಯವರು ವರದಿ ಕೊಟ್ಟು ಆದ ಮೇಲೆ, ಆ ಜಿಲ್ಲೆಗಳ ರಚನೆ ಆಗಿಲ್ಲ ಆ ತಾಲ್ಲೂಕುಗಳ ರಚನೆಯಾಗಿಲ್ಲ ಆ ಸಬ್ ಡಿವಿಷನ್‌ಗಳು ರಚನೆಯಾಗಿಲ್ಲ ಹಾಗಾದರೆ ಈ ಚಿಕ್ಕಬಳ್ಳಾಪುರ ಮತ್ತು ರಾಮನಗರ ಹೇಗೆ ರಚನೆ ಆಗುತ್ತದೆ ಎಂದು ತಾವು ಹೇಳಬೇಕು ತಾವು ಇದನ್ನೇಕೆ ಸಮರ್ಥನೆ ಮಾಡಿಕೊಳ್ಳುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್ ಸನ್ಮಾನ್ಯ ಉಪಾಧ್ಯಕ್ಷರೆ, ರಾಮನಗರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳನ್ನು ಮಾಡುವಂತಹ ಸಂದರ್ಭದಲ್ಲಿ ಜಿಲ್ಲೆಗಳ ಪುನರ್ವಿಂಗಡೆ ಮಾಡುವುದಕ್ಕಾಗಿ ಶ್ರೀ ಬಾಲಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಸರ್ಕಾರ ಸಮಿತಿ ರಚನೆ ಮಾಡಿತ್ತು ಅದರಲ್ಲಿ ಗುಲ್ಬರ್ಗ ಮತ್ತು ಬೆಳಗಾವಿ ಜಿಲ್ಲೆಗಳು ಕೂಡ ಇದ್ದವು ಕೇವಲ ಚಿಕ್ಕಬಳ್ಳಾಪುರ ಮತ್ತು ರಾಮನಗರ ಅಷ್ಟೆ ಇರಲಿಲ್ಲ, ಬೆಳಗಾವಿ ಮತ್ತು ಗುಲ್ಬರ್ಗ ಕೂಡ ಅದರಲ್ಲಿ reference point ಇದೆ ಈ ಜಿಲ್ಲೆಗಳ ಬಗ್ಗೆ ವರದಿ ಕೊಟ್ಟಿದ್ದಾರೆ ಬೆಳಗಾಂನಲ್ಲಿ ಬೇರೆ ಬೇರೆ ಅಭಿಪ್ರಾಯಗಳು ಬಂದವು

ಶ್ರೀ ಎಸ್ ಶಿವಾನಂದ ಪಾಟೀಲ್ ಚಿಕ್ಕೋಡಿ ಆಗಬೇಕು, ಗುಲ್ಬರ್ಗದಲ್ಲಿ ಯಾವುದಾದರೂ ಒಂದು ಜಿಲ್ಲೆ ಆಗಬೇಕು

ಶ್ರೀ ಜಗದೀಶ್ ಶೆಟ್ಟರ್ Terms of reference ನಲ್ಲಿ ಗುಲ್ಬರ್ಗ ಮತ್ತು ಬೆಳಗಾವಿ ಜಿಲ್ಲೆಗಳೂಕೂಡ ಇದ್ದವು ತಾಲ್ಲೂಕುಗಳ ಬಗ್ಗೆ ಕೂಡ ಹೇಳಿದ್ದರು

ಶ್ರೀ ಎಸ್ ಶಿವಾನಂದ ಪಾಟೀಲ್ ಉತ್ತರ ಕರ್ನಾಟಕದ ಯಾವ ಜಿಲ್ಲೆ ಬಹಳ ಪ್ರಾಮುಖ್ಯವಾಗಿ ಜಿಯಾಗ್ರಫಿಕಲಿ ದೊಡ್ಡ ಜಿಲ್ಲೆಗಳು ಅವುಗಳನ್ನು ಹೊಡೆಯಬೇಕಾದ ಅವಶ್ಯಕತೆ ಇದೆ ಅವುಗಳನ್ನು ಬಿಟ್ಟು ನೀವು

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಉಪಾಧ್ಯಕ್ಷರೆ, ತಾಲ್ಲೂಕುಗಳ ಬಗ್ಗೆ ಕೇಳಿದರು, ಹಿಂದಿನ ಕಮಿಟಿಗಳು ಏನು ವರದಿಯನ್ನು ಕೊಟ್ಟಿದ್ದಾರೆ, ಅದನ್ನೂ consider ಮಾಡುತ್ತೇವೆ ಹೊಸದಾಗಿ ಕೂಡ ಬೇಡಿಕೆಗಳು ಬಂದಿವೆ

ಶ್ರೀ ಎಸ್ ಶಿವಾನಂದ ಪಾಟೀಲ್ ಯಾವಾಗ ಸ್ವಾಮಿ?

ಶ್ರೀ ವಾಟಾಳ್ ನಾಗರಾಜ್ ಬಾಲಸುಬ್ರಹ್ಮಣ್ಯ ಕಮಿಟಿಯವರು ಕತ್ತಲಿನಲ್ಲಿ ಕುಳಿತಿದ್ದಾರಾ? ಯಾರಿಂದಲಾದರೂ ಮನವಿಗಳನ್ನು ಸ್ವೀಕಾರ ಮಾಡಿದ್ದಾರಾ? ಯಾರನ್ನು ಕೇಳಿದರು? ಈ ರಾಜ್ಯದಲ್ಲಿ ಸಮಿತಿ ಯಾವಾಗ ನೇಮಕವಾಯಿತು ಹೇಳೀ

ಡಾ॥ ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಮಾನ್ಯ ಉಪಾಧ್ಯಕ್ಷರೆ, ಗುಲ್ಬರ್ಗ ಜಿಲ್ಲೆಯ ಬಗ್ಗೆ ಏಕೆ ತೀರ್ಮಾನ ತೆಗೆದುಕೊಳ್ಳಲಿಲ್ಲವೆಂದು ಹೇಳಬೇಕು

ಶ್ರೀಮತಿ ಭಾಗೀರಥಿ ಟಿ ಮಾನ್ಯ ಉಪಾಧ್ಯಕ್ಷರೆ, ನನ್ನ ಕ್ಷೇತ್ರದಲ್ಲಿ ಧರಣಿ ಕುಳಿತು ಒಂದು ತಿಂಗಳಾಯಿತು ಮಾನ್ಯ ಸಚಿವರನ್ನು ಕೂಡ ನನ್ನ ಕ್ಷೇತ್ರದ ಜನ ಬಂದು ಕಂಡಿದ್ದಾರೆ ಎಲ್ಲಾ ಸಮಿತಿಗಳ ವರದಿಗಳ ಆಧಾರದ ಮೇಲೆ ಮಾಡುತ್ತಿದೀರಿ ಎಂದಾದರೆ, ನನ್ನ ಕ್ಷೇತ್ರಕ್ಕೂ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡಿ ವಿಶೇಷ ತಹಶೀಲ್ದಾರರನ್ನು ನೇಮಕ ಮಾಡುವವರೆಗೂ ಮುಷ್ಕರವನ್ನು ನಿಲ್ಲಿಸುವುದಿಲ್ಲವೆಂದು ಮುಷ್ಕರವನ್ನು ಮುಂದುವರೆಸಿದ್ದಾರೆ ಮೊನ್ನೆ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರೂ ಕೂಡ ಅಲ್ಲಿಗೆ ಭೇಟಿಯನ್ನು ಕೊಟ್ಟಿದ್ದರು ನೀವು ಮತ್ತೆ ವಿಶೇಷ ತಜ್ಞರ ಸಮಿತಿ ನೇಮಕ ಮಾಡಿ ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ಆಗಬೇಕು ಎಂದು ಆ ಸಮಿತಿಯಿಂದ ವರದಿಯನ್ನು ತರಿಸಿಕೊಳ್ಳುತ್ತೀರ? ಆ ಸಂದರ್ಭದಲ್ಲಿ ನಮ್ಮ ಕ್ಷೇತ್ರವನ್ನು consider ಮಾಡುತ್ತೀರ? ಈಗ ನನ್ನ ಕ್ಷೇತ್ರದ ಜನರನ್ನು ಮುಷ್ಕರ ಕೈಬಿಡುವಂತೆ ಮಾಡಲು ಸರ್ಕಾರದ ಕಡೆಯಿಂದ ಈಗ ಏನು ವ್ಯವಸ್ಥೆಯನ್ನು ಮಾಡುತ್ತೀರಿ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕೆಂದು ವಿನಂತಿ ಮಾಡುತ್ತೇನೆ

ಶ್ರೀ ಶಿವಾನಂದ ಎಸ್ ಪಾಟೀಲ್ ಮಾನ್ಯ ಸಚಿವರೆ, ತಾವು ಹೊಸ ಜಿಲ್ಲೆ ರಚನೆ ಮಾಡುವುದಿಲ್ಲವೆಂದು ದೆಹಲಿಯಲ್ಲಿ ಒಂದು ಸ್ಟೇಟ್‌ಮೆಂಟ್ ಕೊಡುತ್ತೀರಿ ಇಲ್ಲಿ ಬಂದು ಹುಂಡೇಕಾರ್ ಸಮಿತಿ ವರದಿಯನ್ನು consider ಮಾಡುತ್ತೇವೆ ಎಂದು ಹೇಳುತ್ತೀರಿ ತಾವು ಕೊಟ್ಟಿರುವ ಸ್ಟೇಟ್‌ಮೆಂಟ್ ಇಲ್ಲಿಯೇ ಇದೆ

ಶ್ರೀ ಕೆ ಜಯಪ್ರಕಾಶ್ ಹೆಗಡೆ ಮಾನ್ಯ ಉಪಾಧ್ಯಕ್ಷರೆ, ತಾಲ್ಲೂಕನ್ನು ಮಾಡುವುದಕ್ಕೆ ವಿಶೇಷ ತಹಶೀಲ್ದಾರ್ ನೇಮಕವನ್ನು ಮಾಡಲಾಗಿದೆ ಅದನ್ನೆಲ್ಲ ಏನು ಮಾಡುತ್ತೀರಿ? ಅದು ಬೇಡವೇ? ನೀವು ಹಿಂದಿನ ವರದಿಯನ್ನು ತೆಗೆದುಕೊಳ್ಳುವುದಿಲ್ಲ ಎನ್ನುವುದಾದರೆ ಈಗಾಗಲೇ ತಾಲ್ಲೂಕು ರಚನೆ ಮಾಡುವುದಕ್ಕೋಸ್ಕರ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡಲಾಗಿದೆ ಅದನ್ನು ತಾವೇನು ಮಾಡುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್ consider ಮಾಡುವು ದಿಲ್ಲವೆಂದು ಹೇಳಲಿಲ್ಲ ಹಿಂದಿನ ವರದಿಯನ್ನೂ consider ಮಾಡುತ್ತೇವೆ ಇವೊತ್ತು ಇಡೀ ರಾಜ್ಯದಲ್ಲಿ 80 ರಿಂದ 90 ಸ್ಥಳಗಳಲ್ಲಿ ಹೊಸ ತಾಲ್ಲೂಕುಗಳನ್ನು ಮಾಡಬೇಕೆಂದು ಬೇಡಿಕೆ ಬಂದಿದೆ ಅವುಗಳ ಬಗ್ಗೆ ಪರಿಶೀಲನೆಯನ್ನು ಮಾಡಬೇಕಲ್ಲ

ಉಪಾಧ್ಯಕ್ಷರು ಈ ವಿಷಯ ಏಕೋ ಬಹಳ ಸಮಸ್ಯೆಗಳನ್ನೊಳಗೊಂಡಂತಿದೆ ಆದುದರಿಂದ ಇದನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಗೆ ತೆಗೆದುಕೊಳ್ಳೋಣ

ಶ್ರೀ ಆರ್ ವಿ ದೇಶಪಾಂಡೆ ಮಾನ್ಯ ಸಚಿವರೆ, ತಾವು ದಾಂಡೇಲಿಗೆ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡುತ್ತೇನೆಂದು ಹೇಳಿದ್ದಿರಿ ದಾಂಡೇಲಿಯನ್ನು ತಾಲ್ಲೂಕನ್ನಾಗಿ ಮಾಡುವ ಬಗ್ಗೆಯೂ ತಾವು ಪರಿಶೀಲಿಸಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೀರಿ ಕಡೇಪಕ್ಷ ತಕ್ಷಣಕ್ಕೆ ದಾಂಡೇಲಿಗೆ ವಿಶೇಷ ತಹಶೀಲ್ದಾರ್‌ರನ್ನು ಹಾಕಲು ವ್ಯವಸ್ಥೆ ಮಾಡಿ ದಾಂಡೇಲಿಯನ್ನು ತಾಲ್ಲೂಕು ಮಾಡಬೇಕೆಂದು ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ

ಶ್ರೀ ಜಗದೀಶ್ ಶೆಟ್ಟರ್ ಮಾನ್ಯ ಉಪಾಧ್ಯಕ್ಷರೆ, ಎಲ್ಲೆಲ್ಲಿ ಈಗ ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡಬೇಕೆಂದು ಬೇಡಿಕೆ ಬಂದಿದೆ ಅಲ್ಲಿಯ ಕೆಲಸದ ಒತ್ತಡ, ಅಲ್ಲಿರುವ ಕಾರ್ಯದ ಒತ್ತಡದ ಮೇಲೆ ನಾವು ವಿಶೇಷ ತಹಶೀಲ್ದಾರ್‌ರನ್ನು ನೇಮಕ ಮಾಡುತ್ತೇವೆ ಕೊಟ್ಟೂರಿನದಾಗಲಿ, ದಾಂಡೇಲಿಯದಾಗಲಿ ಒಟ್ಟಾರೆ ಎಲ್ಲೆಲ್ಲಿ ಬೇಡಿಕೆ ಬಂದಿದೆ ಅದರ ಬಗ್ಗೆ ನಾವು ಪರಿಶೀಲನೆ ಮಾಡುತ್ತೇವೆ

ಉಪಾಧ್ಯಕ್ಷರೆ ಈಗಾಗಲೇ ಈ ವಿಷಯವನ್ನು ಅರ್ಧ ಗಂಟೆ ಕಾಲಾವಧಿ ಚರ್ಚೆಯಡಿಯಲ್ಲಿ ತೆಗೆದುಕೊಳ್ಳುತ್ತೇವೆಂದು ಹೇಳಿದ್ದೇನೆ ಆದುದರಿಂದ ಈ ವಿಷಯದ ಮೇಲೆ ಚರ್ಚೆ ಮುಕ್ತಾಯ ಮಾಡಿ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಉಪಾಧ್ಯಕ್ಷರೆ, ಹಾಗಾದರೆ ಈ ವಿಷಯ ಚರ್ಚೆಗೆ ಇನ್ಯಾವತ್ತು ಬರುತ್ತದೋ ಗೊತ್ತಿಲ್ಲ ಏಕೆಂದರೆ ಅರ್ಧ ಗಂಟೆ ಕಾಲಾವಧಿ ಚರ್ಚೆಯ ಮೇಲೆ ತೆಗೆದುಕೊಳ್ಳುತ್ತೇವೆಂದರೆ ಅದು ಇನ್ಯಾವತ್ತು ಬರುತ್ತದೋ, ಒಂದು ರೀತಿಯಲ್ಲಿ ಶವಾಗಾರಕ್ಕೆ ಹೋದಂತಾಗುತ್ತದಷ್ಟೆ

ಉಪಾಧ್ಯಕ್ಷರು ವಾಟಾಳ್ ನಾಗರಾಜ್‌ರವರೆ, ಆ ರೀತಿಯ ಅನುಮಾನವನ್ನು ಇಟ್ಟುಕೊಳ್ಳಬೇಡಿ ಆದಷ್ಟು ಬೇಗ ಸದರಿ ವಿಷಯವನ್ನು ಚರ್ಚೆಗೆ ತರೋಣ ಈಗ ಎಲ್ಲರೂ ಕುಳಿತುಕೊಳ್ಳಿ ಮಹದೇವಪ್ಪನವರೇ ತಾವು ಶುರುಮಾಡಿ, ತಾವು ಪ್ರಶ್ನೆ ಕೇಳಿ

ರಾಮದುರ್ಗ ತಾಲ್ಲೂಕಿನ ರೇಷ್ಮೆ ಇಲಾಖೆಗೆ ಸಿಬ್ಬಂದಿ ಒದಗಿಸುವುದು

162 (944) ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಬೆಳಗಾವಿ ಜಿಲ್ಲೆ ರಾಮದುರ್ಗ ತಾಲ್ಲೂಕಿನಲ್ಲಿ 2004-05, 2005-06 ಮತ್ತು 2007ನೇ ಸಾಲಿನಲ್ಲಿ ರೇಷ್ಮೆ ಬೆಳೆಯುವ ಪ್ರದೇಶ ಎಷ್ಟು (ವರ್ಷವಾರು ವಿವರ ನೀಡುವುದು),

ಆ) ರಾಮದುರ್ಗ ತಾಲ್ಲೂಕು ರೇಷ್ಮೆ ಇಲಾಖೆಯ ಕಛೇರಿಯಲ್ಲಿ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಇ) ಸದರಿ ಕಛೇರಿಗೆ ಅವಶ್ಯಕ ಸಿಬ್ಬಂದಿಯನ್ನು ನೇಮಕಾತಿ ಮಾಡುವಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ,

ಈ) ಬೆಳಗಾವಿ ಜಿಲ್ಲೆಯ ರಾಮದುರ್ಗ ತಾಲ್ಲೂಕಿನಲ್ಲಿ 2004–05, 2005–06 ಮತ್ತು 2006–07ನೇ ಸಾಲಿನಲ್ಲಿ ಯಾವ ಯಾವ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗಿದೆ ಹಾಗೂ ಅವುಗಳಿಗೆ ಬಿಡುಗಡೆಯಾದ ಅನುದಾನವೆಷ್ಟು (ಫಲಾನಿಭವಿಗಳ ವಿವರಣೆಯನ್ನು ನೀಡುವುದು) ?

ಶ್ರೀ ಎಸ್ ಶಿವಣ್ಣ (ರೇಷ್ಮೆ ಸಚಿವರು)

ಅ) ರಾಮದುರ್ಗ ತಾಲ್ಲೂಕಿನ ವರ್ಷವಾರು ಹಿಪ್ಪುನೇರಳೆ ವ್ಯವಸಾಯದ ವಿವರ ಕೆಳಕಂಡಂತಿದೆ

ವರ್ಷ	ಹಿಪ್ಪುನೇರಳೆ ವಿಸ್ತೀರ್ಣ (ಹೆಕ್ಟೇರುಗಳಲ್ಲಿ)
2004–05	4 40
2005–06	6 80
2006–07	12 80

ಆ) ಬಂದಿಲ್ಲ

ರಾಮದುರ್ಗ ತಾಲ್ಲೂಕಿನಲ್ಲಿ ಕೆಳಕಂಡ ಇಲಾಖೆಯ ಕಛೇರಿಗಳು ಕಾರ್ಯ ನಿರ್ವಹಿಸುತ್ತಿವೆ ಇಲ್ಲಿ ಮಂಜೂರಾದ ಮತ್ತು ಭರ್ತಿಯಾದ ಹುದ್ದೆಗಳ ವಿವರ ಈ ಕೆಳಕಂಡಂತಿದೆ

ಕಛೇರಿ / ಹುದ್ದೆ	ಮಂಜೂರಾದ ಹುದ್ದೆಗಳ ಸಂಖ್ಯೆ	ಭರ್ತಿಯಾದ ಹುದೆಗಳ ಸಂಖ್ಯೆ
1) ರೇಷ್ಮೆ ಕೃಷಿ ಕ್ಷೇತ್ರ, ರಾಮದುರ್ಗ 1 ರೇಷ್ಮೆ ನಿರೀಕ್ಷಕರು	1	1
2) ಚಾಕಿ ಸಾಕಾಣಿಕೆ ಕೇಂದ್ರ, ಹುಲಕುಂದ 1 ರೇಷ್ಮೆ ಪ್ರವರ್ತಕರು	2	2

ಇ) ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡಲಾಗಿದೆ ಇದಲ್ಲದೆ ತಾಲ್ಲೂಕಿನ ವಿಸ್ತರಣಾ ಚಟುಚಟಿಕೆಗಳಿಗಾಗಿ ಒಬ್ಬ ರೇಷ್ಮೆ ನಿರೀಕ್ಷಕರನ್ನು ಹಾಗೂ ಮೂವರು ಸಂಖ್ಯಾತಿರಿಕ್ತ ನೌಕರರನ್ನು ಅನ್ಯ ಕಾರ್ಯ ನಿಮಿತ್ತ ನಿಯೋಜಿಸಲಾಗಿದೆ

ಈ) ಕಳೆದ ಮೂರು ವರ್ಷಗಳಲ್ಲಿ ರಾಮದುರ್ಗ ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸಿದ ಯೋಜನೆ / ಕಾರ್ಯಕ್ರಮಗಳಿಗೆ ಆದ ಸಹಾಯಧನದ ವೆಚ್ಚ ಹಾಗೂ ಫಲಾನುಭವಿಗಳ ವಿವರ ಈ ಕೆಳಕಂಡಂತಿದೆ

ಯೋಜನೆ	ವೆಚ್ಚ (ರೂ ಲಕ್ಷ)	ಫಲಾನುಭವಿಗಳ ಸಂಖ್ಯೆ
2004–05	ಇಲ್ಲ	ಇಲ್ಲ
2005–06		
1 ವಿಶೇಷ ಘಟಕ ಯೋಜನೆ	0 17	2
2 ಕೆಟಲಿಟಿಕ್ ಅಭಿವೃದ್ಧಿ ಯೋಜನೆ		
ಅ ಹನಿ ನೀರಾವರಿ	0 24	1
ಆ ಕಿಸಾನ್ ನರ್ಸರಿ	0 31	4
2006–07		
1 ವಿಶೇಷ ಘಟಕ ಯೋಜನೆ	0 17	2
2 ಕೆಟಿಲಿಟಿಕ್ ಅಬಿವೃದ್ಧಿ ಯೋಜನೆ		
ಅ ರೇಷ್ಮೆ ಹುಳು ಸಾಕಾಣಿಕೆ ಮನೆ	0 50	1
3 ರೇಷ್ಮೆ ವರದಾನ ಯೋಜನೆ		
ಅ ಹಿಪ್ಪುನೇರಳೆ ನಾಟಿ		
4 ತಾಲ್ಲೂಕು ಪಂಚಾಯತ್ ಯೋಜನೆ	0 475	10
ಅ ರೇಷ್ಮೆ ಹುಳು ಸಾಕಾಣಿಕೆ ಮನೆ	0 50	2

ಶ್ರೀ ಯಾದವಾಡ್ ಮಹಾದೆವಪ್ಪ ಶಿವಲಿಂಗಪ್ಪ ಮಾನ್ಯ ಉಪಾಧ್ಯಕ್ಷರೆ, ಉತ್ತರವನ್ನು ಕೊಟ್ಟಿದ್ದಾರೆ ನಮ್ಮ ತಾಲ್ಲೂಕಿನಲ್ಲಿ 1982 ರಲ್ಲಿ ರೇಷ್ಮೆ ಇಲಾಖೆ ಕಛೇರಿ ಸ್ಥಾಪನೆಗೊಂಡು ಸುಮಾರು 150 ಎಕರೆಯಲ್ಲಿ ರೇಷ್ಮೆಯನ್ನು ಬೆಳೆಯಲಾಗಿತ್ತು 1992 ರಿಂದ 1994 ರವರೆಗೆ 300 ಎಕರೆಗಳಿಗಿಂತ ಹೆಚ್ಚು ಪ್ರದೇಶದಲ್ಲಿ ರೇಷ್ಮೆ ಬೆಳೆಯಲಾಗಿತ್ತು ರಾಮದುರ್ಗ ತಾಲ್ಲೂಕಿನ ಚನಕನವಳ್ಳಿ ಗ್ರಾಮದಲ್ಲಿ 12 ಎಕರೆ ಜಮೀನು ಹೊಂದಿದ್ದು ಅಲ್ಲಿ ರೇಷ್ಮೆ ಇಲಾಖೆ ಸುಸಜ್ಜಿತವಾದ ಕಟ್ಟಡವನ್ನು ನಿರ್ಮಿಸಿತ್ತು ಈಗ ಈ ಇಲಾಖೆಯ ನಿರ್ಲಕ್ಷ್ಯದಿಂದ ತಾಲ್ಲೂಕಿನಲ್ಲಿ ರೇಷ್ಮೆ ಬೆಳೆಯುವ ರೈತರ ಸಂಖ್ಯೆ ಕಡಿಮೆಯಾಗಿದ್ದು 2004–05 ರಲ್ಲಿ ಕೇವಲ 11 ಎಕರೆ ಬೆಳೆ ಬಂದು ಕಡಿಮೆಯಾಗಿರುವುದು ಬಹಳ ವಿಷಾದವಾದ ಸಂಗತಿಯಾಗಿದೆ 2006–07 ನೇ ಸಾಲಿನಲ್ಲಿ ಸುಮಾರು 32 ಎಕರೆಯಲ್ಲಿ ರೇಷ್ಮೆ ಬೆಳೆದಿದ್ದು ಸ್ವಲ್ಪ ಪ್ರಗತಿ ಸಾಧಿಸಲಾಗಿದೆ ಇಲಾಖೆಯ ಸಿಬ್ಬಂಧಿ ಅಲ್ಲಿ ಇರುವುದಿಲ್ಲ ಅದಕ್ಕಾಗಿ ನಾನು ಮಾನ್ಯ ಉಪಾಧ್ಯಕ್ಷರ ಮೂಲಕ ವಿನಂತಿ ಮಾಡುವುದೇನೆಂದರೆ, ನನ್ನ ತಾಲ್ಲೂಕಿಗೆ ರೇಷ್ಮೆ ವಿಸ್ತರಣಾಧಿಕಾರಿಗಳನ್ನು ತಾವು ತಾತ್ಕಾಲಿಕವಾಗಿ ನೇಮಕ ಮಾಡಬೇಕೆಂದು ವಿನಂತಿ ಮಾಡುತ್ತೇನೆ

ಶ್ರೀ ಎಸ್ ಶಿವಣ್ಣ (ರೇಷ್ಮೆ ಖಾತೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವಂಥದ್ದು ಸತ್ಯ ಹಿಂದೆ ರೇಷ್ಮೆಯನ್ನು ಅಲ್ಲಿ ಚೆನ್ನಾಗಿ ಬೆಳೆಯುತ್ತಿದ್ದರು ಈಗ ನಾಲ್ಕೈದು ವರ್ಷಗಳ ಹಿಂದೆ ಕುಂರಿತವಾಗಿದ್ದು ಈಗ 2006–07 ರಲ್ಲಿ 32 ಎಕರೆ ಜಮೀನಿನಲ್ಲಿ ರೇಷ್ಮೆ ಕೃಷಿ ಇದೆ ನಾವು ಈಗಾಗಲೇ 7 ಜನ ನೌಕರರನ್ನು ಅಲ್ಲಿಗೆ ಕೊಟ್ಟಿದ್ದೇವೆ ಈಗ ಏನಾದರೂ ಅಲ್ಲಿ ಇನ್ನೂ ಹೆಚ್ಚು ಎಕರೆ ಪ್ರದೇಶದಲ್ಲಿ ರೇಷ್ಮೆ ಕೃಷಿಯನ್ನು ಬೆಳೆಯಲು ಅಪೇಕ್ಷೆಪಟ್ಟರೆ ನಾವು ಕೊಡುವುದಕ್ಕೆ ತಯಾರಾಗಿದ್ದೇವೆ

ಉಪಾಧ್ಯಕ್ಷರು ಅವರು ಅಪರೂಪಕ್ಕೆ ಕೇಳಿದ್ದಾರೆ ಅವರನ್ನು ನಿಮ್ಮ ಛೇಂಬರ್‌ಗೆ ಕರೆಸಿಕೊಂಡು ಸಮಸ್ಯೆಗೆ ಬಗೆಹರಿಸಿ

ಶ್ರೀ ಎಸ್ ಶಿವಣ್ಣ ಅವರು ಕೇಳಿರುವುದನ್ನು ನಾವು ಕೊಡುವುದಕ್ಕೆ ತಯಾರಿದ್ದೇವೆ

ಉಪಾಧ್ಯಕ್ಷರು ಯಾದವಾಡ್‌ರವರೆ, ನೀವು ಮಾನ್ಯ ಸಚಿವರ ಛೇಂಬರ್‌ಗೆ ಹೋಗಿ, ಅವರು ನಿಮ್ಮ ಸಮಸ್ಯೆಯನ್ನು ಬಗೆಹರಿಸುತ್ತಾರೆ

ಶ್ರೀ ಯಾದವಾಡ್ ಮಹಾದೇವಪ್ಪ ಶಿವಲಿಂಗಪ್ಪ ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಮಂತ್ರಿಗಳಿಗೆ ಪತ್ರವನ್ನು ಕೊಟ್ಟಿದ್ದೇನೆ. ತಮ್ಮ ಮೂಲಕ ರೇಷ್ಮೆ ವಿಸ್ತರಣಾಧಿಕಾರಿಗಳನ್ನು ಕೂಡಲೇ ಅಲ್ಲಿಗೆ ಭರ್ತಿ ಮಾಡಬೇಕೆಂದು ವಿನಂತಿಸುತ್ತೇನೆ

ಶ್ರೀ ಎಸ್ ಶಿವಣ್ಣ ಮಾನ್ಯ ಉಪಾಧ್ಯಕ್ಷರೆ, ಆ ರೀತಿಯ ಪತ್ರವೇನೂ ಬಂದಿಲ್ಲ ಅವರಿಗೆ ಬೇಕಾದರೆ ಕೊಡೋಣ

ಪರಿಸರ ಮಾಲಿನ್ಯ ತಡೆಯುವುದು

163 (1190) ಶ್ರೀ ಹೆಚ್ ಎಸ್ ಶಂಕರ ಲಿಂಗೇಗೌಡ (ಚಾಮರಾಜ) ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಮೈಸೂರು ಜಿಲ್ಲೆಯಾದ್ಯಂತ ಪರಿಸರ ಮಾಲಿನ್ಯಕ್ಕೆ ಸಂಬಂಧ ಪಟ್ಟಂತೇ ಬಂದಿರುವ ದೂರುಗಳು ಎಷ್ಟು?

ಆ) ಈ ದೂರುಗಳ ಬಗ್ಗೆ ಇಲಾಖೆ ಯಾವ ಯಾವ ಕ್ರಮ ಕೈಗೊಂಡಿದೆ?

ಇ) ಮೈಸೂರು ಜಿಲ್ಲೆಯಾದ್ಯಂತ ಪರಿಸರ ಮಾಲಿನ್ಯ ತಡೆ/ನಿಯಂತ್ರಣಕ್ಕೆ ಕಳೆದ ಮೂರು ವರ್ಷಗಳಲ್ಲಿ ಸರ್ಕಾರ ಯಾವ ಯಾವ ಕ್ರಮ ಕೈಗೊಂಡಿದೆ?

ಶ್ರೀ ಪಿ ಚೆನ್ನಿಗಪ್ಪ (ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು)

ಅ) ಮೈಸೂರು ಜಿಲ್ಲೆಯಾದ್ಯಂತ ದಿನಾಂಕ 1-4-06 ರಿಂದ 31-3-07 ರ ವರೆಗೆ ಪರಿಸರ ಮಾಲಿನ್ಯಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ನೇರ ವ್ಯಾಪ್ತಿಯಲ್ಲಿ 32 ದೂರುಗಳು ಸ್ವೀಕೃತವಾಗಿರುತ್ತದೆ

ಆ) ಪರಿಸರ ನಿಯಮಗಳನ್ನು ಉಲ್ಲಂಘಿಸಿದ ಪ್ರಕರಣಗಳಲ್ಲಿ ಸಂಬಂಧಿಸಿದ ವಿರುದ್ಧ ಕ್ರಮ ಕೈಗೊಳ್ಳಲು ಜಲ (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ, 1974 ಹಾಗೂ ವಾಯು (ಮಾಲಿನ್ಯ ನಿವಾರಣೆ ಹಾಗೂ ನಿಯಂತ್ರಣ) ಕಾಯ್ದೆ, 1981 ಅಡಿಯಲ್ಲಿ ಕ್ರಮ ಜರುಗಿಸಲು ಶಾಸನ ಬದ್ಧ ಸಂಸ್ಥೆಯಾದ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗೆ ಅಧಿಕಾರ ಪ್ರದತ್ತವಾಗಿರುತ್ತದೆ ದೂರುಗಳಿಗೆ ಸಂಬಂಧಿಸಿದಂತೆ ಸದರಿ ಕಾಯ್ದೆಗಳಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕ್ರಮ ಕೈಗೊಂಡಿದ್ದು ವಿವರಗಳನ್ನು ಅನುಬಂಧ-1ರಲ್ಲಿ ಒದಗಿಸಿದೆ

ಇ) ಮೈಸೂರು ಜಿಲ್ಲೆಯಾದ್ಯಂತ ಹಾಗೂ ಕರ್ನಾಟಕದಾದ್ಯಂತ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಲ ಮಾಲಿನ್ಯ (ನಿವಾರಣಾ ಮತ್ತು ನಿಯಂತ್ರಣ) ಕಾಯ್ದೆ, 1981, ಹಾಗೂ ಅಪಾಯಕಾರೀ ತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಉಮಾವಳಿಗಳು, 2000 ಇವುಗಳನ್ನು ಜಾರಿಗೊಳಿಸುತ್ತಿದೆ

- ಜಲ ಕಾಯ್ದೆ ಹಾಗೂ ವಾಯು ಕಾಯ್ದೆಗಳಲ್ಲಿನ ಅವಕಾಶಗಳನ್ವಯ ಉದ್ದಿಮೆಗಳು ತಮ್ಮಲ್ಲಿ ಉತ್ಪತ್ತಿಯಾಗುವ ಗೃಹ ಬಳಕೆಯ ಹಾಗೂ ಕೈಗಾರಿಕಾ ಕಾರ್ಯ ಚಟುವಟಿಕೆಗಳ ತ್ಯಾಜ್ಯ ನೀರನ್ನು ಹಾಗೂ ಕಲುಷಿತವಾದ ಹೊಗೆಯನ್ನು ವಾತಾವರಣಕ್ಕೆ ಬಿಡುವ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿ ಪತ್ರ ಪಡೆಯಬೇಕಾಗಿರುತ್ತದೆ

- ಹಾಗೆಯೇ ಅಪಾಯಕಾರೀ ತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಾವಳಿಗಳು, 2000 ಇದರ ಅಡಿಯಲ್ಲಿ ಉದ್ದಿಮೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಧೀಕೃತ ಪತ್ರ ಪಡೆಯಬೇಕಾಗಿರುತ್ತದೆ
- ಜಲ ಕಾಯ್ದೆಯಡಿಯಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿ ಪತ್ರವನ್ನು ನೀಡುವಾಗ ಉದ್ದಿಮೆಗಳು ತ್ಯಾಜ್ಯ ನೀರಿನ ಶುದ್ಧೀಕರಣ ಘಟಕವನ್ನು ಅಳವಡಿಸಿ, ಶುದ್ಧೀಕರಿಸಿದ ನೀರನ್ನು ಅವುಗಳಿಗೆ ನಿಗದಿಪಡಿಸಿರುವ ಮಾನಕಗಳನ್ನು ಮೀರದಂತೆ ಹೊರ ಚೆಲ್ಲುವಂತೆ ನಿಬಂಧನೆಗಳನ್ನು ನಿಗದಿಪಡಿಸಲಾಗುತ್ತದೆ ಹಾಗೂ ಸಂಸ್ಕರಿಸಿದ ನೀರನ್ನು ತೋಟಗಾರಿಕೆಗಾಗಿ ಅಥವಾ ಕೈಗಾರಿಕಾ ಚಟುವಟಿಕೆಗಳಿಗೆ ಪುನರ್ಬಳಕೆ ಮಾಡಲು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಉದ್ದಿಮೆಗಳಿಗೆ ನಿರ್ದೇಶಿಸಲಾಗುತ್ತದೆ
- ವಾಯು ಕಾಯ್ದೆಯಡಿಯಲ್ಲಿ ಕೂಡ ಉದ್ದಿಮೆಗಳು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಸಮ್ಮತಿ ಪತ್ರ ಪಡೆಯುವಾಗ ವಾಯು ಮಾಲಿನ್ಯದ ಮೂಲಗಳಿಂದ ಬರುವ ಕಲುಷಿತ ಹೊಗೆಯನ್ನು ತಡೆಗಟ್ಟಲು ಸೂಕ್ತ ಎತ್ತರವಿರುವ ಚಿಮಣಿಗಳನ್ನು ಹಾಗೂ ವಾಯು ಮಾಲಿನ್ಯ ಉಪಕರಣಗಳನ್ನು ಅಳವಡಿಸಬೇಕಾಗಿರುತ್ತದೆ ಈ ರೀತಿ ಅಗತ್ಯ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅನುಸರಿಸಿದ ನಂತರವೆ ಮಂಡಳಿಯಿಂದ ಉದ್ದಿಮೆಗಳಿಗೆ ಸಮ್ಮತಿ ಪತ್ರಗಳನ್ನು ನೀಡಲಾಗುತ್ತದೆ
- ಮುಂದುವರಿದಂತೆ, ಅಪಾಯಕಾರೀ ತ್ಯಾಜ್ಯ ವಸ್ತುಗಳ (ವ್ಯವಸ್ಥಾಪನೆ ಮತ್ತು ನಿರ್ವಹಣೆ) ನಿಯಮಾವಳಿಗಳಡಿಯಲ್ಲಿ ಉದ್ದಿಮೆಗಳಿಗೆ ಅಧೀಕೃತ ಪತ್ರ ನೀಡುವಾಗಲೂ ಸಹ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ನಿಯಮಗಳಿಗನುಸಾರವಾಗಿ ಸಂಗ್ರಹಿಸಿಡುವ ಷರತ್ತುಗಳಿಗನುಗುಣವಾಗಿ ನೀಡಲಾಗುತ್ತದೆ
- ಒಂದು ವೇಳೆ ಮಂಡಳಿಯು ನಿಗದಿ ಪಡಿಸಿದ ನಿಬಂಧನೆಗಳನ್ನು ಉದ್ದಿಮೆಯು ಉಲ್ಲಂಘಿಸಿದಲ್ಲಿ ಮೇಲಿನ ನಿಯಮಗಳಲ್ಲಿನ ಅವಕಾಶಗಳನ್ವಯ ಉದ್ದಿಮೆಯ ಮೇಲೆ ಸೂಕ್ತ ಕಾನೂನು ಕ್ರಮಗಳನ್ನು ತೆಗೆದುಕೊಳ್ಳಲಾಗುತ್ತದೆ

ಕಳೆದ ಮೂರು ವರ್ಷಗಳ ಅವಧಿಯಲ್ಲಿ ಮೈಸೂರು ಜಿಲ್ಲೆಯಾದ್ಯಂತ ಪರಿಸರ ಕಾಯ್ದೆಗಳನ್ನು ಉಲ್ಲಂಘಿಸಿದ ಉದ್ದಿಮೆಗಳ ವಿರುದ್ಧ ಈ ಕೆಳಗಿನಂತೆ ಕ್ರಮ ತೆಗೆದುಕೊಳ್ಳಲಾಗಿರುತ್ತದೆ ಕ್ರಿಮಿನಲ್ ಮೊಕದ್ದಮೆಗಳನ್ನು ಹೂಡಲಾಗಿರುವ ಉದ್ದಿಮೆಗಳ ಸಂಖ್ಯೆ 6 ಮುಚ್ಚುವ ಆದೇಶಗಳನ್ನು ಜಾರಿಗೊಳಿಸಲಾಗಿರುವ ಉದ್ದಿಮೆಗಳ ಸಂಖ್ಯೆ 9 ಇವುಗಳ ವಿವರಗಳನ್ನು ಅನುಬಂಧ –2 ರಲ್ಲಿ ಲಗತ್ತಿಸಲಾಗಿದೆ

ಅನುಬಂಧ–1

ಕ್ರಮ ಸಂಖ್ಯೆ	ಮಾಲಿನ್ಯ ಸಂಬಂಧಿತ ದೂರಿನ ವಿಧ ಮತ್ತು ವಿವರ			ದೂರು ಸ್ವೀಕೃತಿ ಯಾದ ದಿನಾಂಕ	ದೂರಿನ ವಿರುದ್ಧ ಜರುಗಿಸಿದ ಕ್ರಮ
	ವಾಯು ಮಾಲಿನ್ಯ	ಜಲ ಮಾಲಿನ್ಯ	ಶಬ್ದ ಮಾಲಿನ್ಯ		
1	–	–	ಶಾಂತಿ ನಗರದಲ್ಲಿರುವ ಸಾಮಿಲ್ ಉದ್ದಿಮೆಯಿಂದ ಶಬ್ದ ಮಾಲಿನ್ಯ ಉಂಟಾಗುತ್ತಿರುವ ಬಗ್ಗೆ	06–04–06	ಉದ್ದಿಮೆಗೆ ನೋಟೀಸ್ ಜಾರಿಮಾಡಿ ಶಬ್ದ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳಲು ಸೂಚಿಸಲಾಗಿತ್ತು ಅದರ ಪ್ರಕಾರ ಜನರೇಟರ್‌ಗೆ ಸೈಲೇನ್ಸರ್ ಅಳವಡಿಸಿಕೊಳ್ಳಲಾಗಿದೆ
2	ನಂಜನಗೂಡು ಕೈಗಾರಿಕಾ ಪ್ರದೇಶದಲ್ಲಿ ವಾಯು ಮಾಲಿನ್ಯ ಉಂಟಾಗುತ್ತಿರುವ ಬಗ್ಗೆ	–	–	03–05–06	ಈ ಬಗ್ಗೆ ಉದ್ದಿಮೆಗಳನ್ನು ಪರಿವೀಕ್ಷಿಸಿ ನೋಟೀಸ್ ಜಾರಿಮಾಡಲಾಗಿದೆ ಉದ್ದಿಮೆಯವರು ವಾಯು ಮಾಲಿನ್ಯ ನಿಯಂತ್ರಣ ಉಪಕರಣ

					ಅಳವಡಿಸಿಕೊಂಡಿದ್ದಾರೆ
3		ಮೇ ಸಿದ್ವೀ ಪ್ಯಾಕಿಂಗ್‌ರವರು ಘನ ತ್ಯಾಜ್ಯ ವಸ್ತುಗಳನ್ನು ಚರಂಡಿಗೆ ಹಾಕುತ್ತಿರುವಕುರಿತು	–	03–05–06	ಸ್ಥಳ ಪರಿವೀಕ್ಷಣೆ ಮಾಡಿ ಸದರಿ ತೊಂದರೆಯನ್ನು ನಿವಾರಿಸಲಾಯಿತು
4	ಹೋಟೆಲ್‌ನಿಂದ ಹಾಕುತ್ತಿರುವ ಮಾಲಿನ್ಯ		–	24–05–06	ಪರಿವೀಕ್ಷಣೆ ನಡೆಸಿ ನೋಟಿಸು ನೀಡಿ ಕ್ರಮ ಕೈಗೊಳ್ಳಲಾಗಿದೆ ಉದ್ದಿಮೆಯು ಅಗತ್ಯ ಕ್ರಮ ಕೈಗೊಂಡಿದೆ
5	–	ಕೊಳಚೆ ನೀರು ಶುದ್ಧಿಕರಣ ಘಟಕವನ್ನು ನಿರ್ಮಾಣ ಮಾಡುವುದರಿಂದ ಹಾಗುವ ತೊಂದರೆ	–	29–05–06	ಈ ಬಗ್ಗೆ ನಂಜನಗೂಡು ಪಟ್ಟಣ ಪಂಚಾಯಿತಿಗೆ ಪತ್ರ ಬರೆದು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಹಾಗೂ ಸದರಿ ಸ್ಥಳದಲ್ಲಿ ನಿರ್ಮಾಣ ಕಾರ್ಯ

		ಕುರಿತು ಹಾಗೂ ಅದನ್ನು ಬೇರೆಡೆಗೆ ವರ್ಗಯಿಸುವ ಬಗ್ಗೆ			ಪ್ರಾರಂಭವಾಗಿರುವುದಿಲ್ಲ
6	ಹಸಿರು ವಲಯಕ್ಕೆ ಸಂಬಂಧಿಸಿದಂತೆ ದೂರು	–	–	06–06–06	ಈ ಕಛೇರಿಯಿಂದ ಕೆಐಎಡಿಬಿ ಅಧಿಕಾರಿಗಳಿಗೆ ಪತ್ರ ಬರೆದು ಭೂ ಉಪಯೋಗದ ಯೋಜನೆಗಾಗಿ ಮಂಡಳಿಯಿಂದ ಸಮ್ಮತಿಯನ್ನು ಪಡೆದುಕೊಳ್ಳುವಂತೆ ಸೂಚಿಸಲಾಗಿದೆ
7	ಶ್ರೀ ನಂಜುಂಡೇಶ್ವರ ಹಲ್ಲರ್ ಮತ್ತು ಫ್ಲೋರ್‌ಮಿಲ್‌ನ್ನು ನಡೆಸುತ್ತಿರುವ ಬಗ್ಗೆ	–	–	08–06–06	ಈ ಉದ್ದಿಮೆಯ ವಿರುದ್ಧ ದೂರುದಾರರು ಘಿರ್ಯಾಧು ಮಾನ್ಯ ನ್ಯಾಯಾಲಯದಲ್ಲಿ ಇದೆ ಫ್ಲೋರ್ ಮಿಲ್‌ನವರಿಗೆ ನೋಟೀಸ್ ಜಾರಿ ಮಾಡಿದ್ದು ಟಿ ನರಸೀಪುರ ಪಟ್ಟಣ ಪಂಚಾಯತಿಯವರಿಗೆ ಸಹಾ ಕ್ರಮ ಕೈಗೊಳ್ಳಲು ತಿಳಿಸಲಾಗಿದೆ

8	–	ಅನಧೀಕೃತವಾಗಿ ಬಡಾವಣೆಯನ್ನು ನಿರ್ಮಿಸಿರುವ ಬಗ್ಗೆ	–	30–06–06	ಪರಿವೀಕ್ಷಣೆ ನಡೆಸಿ ನೋಟಿಸು ನೀಡಿ ಕ್ರಮ ಕೈಗೊಳ್ಳಲಾಗಿದೆ ಬಡವಾಣೆ ನಿರ್ಮಾಣದಾರರ ವಿರುದ್ಧ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ
9	–	ಕಾರ್ಖಾನೆಯ ತ್ಯಾಜ್ಯವನ್ನು ಅಕ್ರಮವಾಗಿ ಕಬಿನಿ ಬಲದಂಡೆ ನಾಲೆಗ ಬಿಟ್ಟಿರುವ ಬಗ್ಗೆ	–	10–07–06	ದಿನಾಂಕ 26–06–2006 ರಿಂದ ನಿರಂತರವಾಗಿ ಪರಿವೀಕ್ಷಣೆ ನಡೆಸಿ ನೋಟೀಸ್ ಜಾರಿಮಾಡಲಾಗಿದೆ ಹಾಗೂ ಕಬಿನಿ ನಾಲಯದಲ್ಲಿ ಕಲುಷಿತ ನೀರನ್ನು ಉದ್ದಿಮೆಯಿಂದ ಪಂಪ್ ಮಾಡಿಸಿ ಉದ್ದಿಮೆಯ ಅವರಣದೊಳಗೆ ಸಂಗ್ರಹಿಸುವಲ್ಲಿ ಯಶಸ್ವಿ ಕ್ರಮ ಕೈಗೊಳ್ಳಲಾಗಿದೆ
10		ಕಾರ್ಖಾನೆಯ ತ್ಯಾಜ್ಯವನ್ನು			ದಿನಾಂಕ 26–06–2006ರಿಂದ ನಿರಂತರವಾಗಿ ಪರಿವೀಕ್ಷಣೆ ನಡೆಸಿ

	–	ಅಕ್ರಮವಾಗಿ ಕಬಿನಿ ಬಲದಂಡೆ ನಾಲೆಗೆ ಬಿಟ್ಟಿರುವ ಬಗ್ಗೆ	–	24–07–06	ನೋಟೀಸ್ ಜಾರಿಮಾಡಲಾಗಿದೆ ಹಾಗೂ ಕಬಿನಿ ನಾಲಯದಲ್ಲಿ ಕಲುಷಿತ ನೀರನ್ನು ಉದ್ದಿಮೆಯವರಿಂದ ಪಂಪ್ ಮಾಡಿಸಿ ಉದ್ದಿಮೆಯ ಅವರಣದೊಳಗೆ ಸಂಗ್ರಹಿಸುವಲ್ಲಿ ಯಶಸ್ವಿ ಕ್ರಮ ಕೈಗೊಳ್ಳಲಾಗಿದೆ
11	–	ಅನಧೀಕೃತವಾಗಿ ಬಡಾವಣೆಯನ್ನು ನಿರ್ಮಿಸಿರುವ ಬಗ್ಗೆ	–	24–07–06	ಪರಿವೀಕ್ಷಣೆ ನಡೆಸಿ ನೋಟೀಸ್ ನೀಡಿ ಕ್ರಮ ಕೈಗೊಳ್ಳಲಾಗಿದೆ ಬಡವಾಣೆ ನಿರ್ಮಾಣದಾರರ ವಿರುದ್ಧ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕ್ಕದ್ದಮೆ ಹೂಡಲಾಗಿದೆ
12	–	ಕುವೆಂಪುನಗರದಲ್ಲಿ ಶ್ರೀ ವಿವೇಕ್‌ರವರ ಸರ್ವಿಸ್ ಸ್ಟೇಷನ್ ನಿಂದ ಹಾಗುತ್ತಿರುವ	–	24–07–06	ಪರಿವೀಕ್ಷಣೆ ನಡೆಸಿ ನೋಟೀಸ್ ನೀಡಿ ಕ್ರಮ ಕೈಗೊಳ್ಳಲಾಗಿದೆ ಮತ್ತು ಉದ್ದಿಮೆಯು ಸ್ಥಗಿತಗೊಂಡಿದೆ

		ತೊಂದರೆ			
13	–	ಉದ್ದಿಮೆಯಿಂದ ಉಂಟಾಗುತ್ತಿರುವ ಘನ ತ್ಯಾಜ್ಯ ವಸ್ತುಗಳನ್ನು ಅವೈಜ್ಞಾನಿಕವಾಗಿ ವಿಲೇವಾರಿ ಮಾಡುತ್ತಿರುವ ಬಗ್ಗೆ	–	26–07–06	ಸದರಿ ದೂರಿನನ್ವಯ ಉದ್ದಿಮೆಯನ್ನು ದಿನಾಂಕ 17–08–2006 ರಂದು ಪರಿವೀಕ್ಷಣೆ ನಡೆಸಿ, ಉದ್ದಿಮೆಗೆ ನೋಟಿಸ್ ಜಾರಿಗೊಳಿಸಿ ಘನ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಲು ನಿರ್ದೇಶನ ನೀಡಲಾಗಿದೆ ಈ ನಿರ್ದೇಶನದಂತೆ, ಉದ್ದಿಮೆಯವರು ಕ್ರಮ ಕೈಗೊಂಡಿದ್ದು, ಘನ ತ್ಯಾಜ್ಯ ವಸ್ತುಗಳನ್ನು ಸದರಿ ಸ್ಥಳದಿಂದ ತೆಗೆದು ಹಾಕಿರುತ್ತಾರೆ ಹಾಗೂ ಈ ಸಮಸ್ಯೆಯನ್ನು ಪರಿಹರಿಸಲಾಗಿದೆ
14	ಮೆ ಜಿ ಕೆ ಇಂಡಸ್ಟ್ರೀಸ್‌ನ ಹೊಗೆ				ಸದರಿ ದೂರಿನನ್ವಯ ಉದ್ದಿಮೆಯವರಿಗೆ ದಿನಾಂಕ 07–

	ಕೊಳವೆಯಿಂದ ಕಪ್ಪುಹೊಗೆ ಹೊರ ಬರುತ್ತಿರುವ ಬಗ್ಗೆ	–	–	31–07–06	08–2006ರಂದು ನೋಟೀಸ್ ಜಾರಿ ಮಾಡಿದ ನಂತರ ಉದ್ದಿಮೆಯವರು ಮಾಲಿನ್ಯವನ್ನು ನಿಯಂತ್ರಿಸಲು ಕ್ರಮ ಕೈಗೊಂಡಿರುತ್ತಾರೆ ಹಾಗೂ ಈ ದೂರನ್ನು ಪರಿಹರಿಸಲಾಗಿದೆ
15	ದಿ ಮೈಸೂರ್ ಚಿಪ್ ಬೋರ್ಡ್ಸ್, ಮೈಸೂರು–ಹುಣಸೂರು ರಸ್ತೆ, ಇಣಕಲ್, ಮೈಸೂರು ಉದ್ದಿಮೆಯಿಂದ ಹೊರಬರುವ ದೂಳು ಮತ್ತು ಹೊಗೆಯಿಂದ ತೊಂದರೆ ಉಂಟಾಗುತ್ತಿರುವ ಬಗ್ಗೆ	–	–	01–08–06	ಸದರಿ ದೂರಿನನ್ವಯ ಉದ್ದಿಮೆಯನ್ನು ದಿನಾಂಕ 11–08–2006ರಂದು ಪರಿವೀಕ್ಷಣೆ ನಡೆಸಿ, ಉದ್ದಿಮೆಗೆ ನೋಟೀಸ್ ಜಾರಿಗೊಳಿಸಿ ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಳ್ಳಲು ತಿಳಿಸಿ ದೂರನ್ನು ಪರಿಹರಿಸಲಾಗಿದೆ
16		ಜೆಮಿನಿ ಡಿಸ್ಟಿಲರೀಸ್ ನಿಂದ ಉಂಟಾಗಿರುವ		08–08–06	ದೂರನ್ನು ಪರಿಗಣಿಸಿ ಉದ್ದಿಮೆಯವರಿಗೆ ಪತ್ರ ಬರೆದು

	–	ತೊಂದರೆಯ ಬಗ್ಗೆ	–		ಪರಿಹಾರದ ಬಗ್ಗೆ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ ಬೆಳೆ ನಷ್ಟ ಪರಿಹಾರ ಭರಿಸುವಂತೆ ಅ ಪ ಜೆ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಇವರು ಉದ್ದಿಮೆಯವರಿಗೆ ಸೂಚಿಸಿರುತ್ತಾರೆ
17	ಜಾವ ಕಾರ್ಖಾನೆಯ ಜಾಗದಲ್ಲಿ ಅರ್ಪಾಟ್‌ಮೆಂಟ್ ಅನುಮತಿ ಕೊಡದಿರಲು ಕೋರ	ಜಾವ ಕಾರ್ಖಾನೆಯ ಜಾಗದಲ್ಲಿ ಅರ್ಪಾಟ್‌ಮೆಂಟ್ ಅನುಮತಿ ಕೊಡದಿರಲು ಕೋರ	ಜಾವ ಕಾರ್ಖಾನೆಯ ಜಾಗದಲ್ಲಿ ಅರ್ಪಾಟ್‌ಮೆಂಟ್ ಅನುಮತಿ ಕೊಡದಿರಲು ಕೋರ	04–09–06	ಜಾವ ಕಾರ್ಖಾನೆಯ ಜಾಗದಲ್ಲಿ ಅರ್ಪಾಟ್‌ಮೆಂಟ್ ನಿರ್ಮಾಣ ಮಾಡುವ ಸಂಬಂಧ ಮಂಡಳಿಯ ವತಿಯಿಂದ ಸಾರ್ವಜನಿಕ ವಿಚಾರಣ ಸಭೆಯನ್ನು ನಡೆಸಿದ್ದು ಸದರಿ ಸಭೆಯಲ್ಲಿ ಚರ್ಚಿಸದಂತೆ ನಡುವಳಿಗಳನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಗಿದೆ ಎಂಬ ವಿಷಯವನ್ನು ತಿಳಿಸಿ

					ದೂರುದಾರರಿಗೆ ಪತ್ರ ಬರೆದು ಕಡತವನ್ನು ಮುಚ್ಚಲಾಗಿದೆ
18	ಕೈಗಾರಿಕಾ ಪ್ರದೇಶವಲ್ಲದ ಸ್ಥಳದಲ್ಲಿ ಕಾರ್ಖಾನೆ ಮಾರ್ಪಟು ಮಾಡಿಕೊಂಡು ಸಾರ್ವಜನಿಕರು ಹಾಗೂ ಅಕ್ಕಪಕ್ಕದವರಿಗೆ ತೊಂದರೆಯಾಗುವ ರೀತಿಯಲ್ಲಿ ವಹಿವಾಟು ನಡೆಸುತ್ತಿರುವ ಬಗ್ಗೆ	–	–	06–09–06	ಸದರಿ ದೂರಿನನ್ವಯ ಸ್ಥಳ ಪರಿವೀಕ್ಷಣೆ ಮಾಡಿ ಅಲ್ಲಿ ಯಾವುದೇ ರಾಸಯನಿಕ ಉತ್ಪಾದನೆಗಳನ್ನು ತಯಾರಿಕೆ ಮಾಡುತ್ತಿರುವುದು ಕಂಡು ಬಂದ್ದಿಲ್ಲದರಿರುವುದನ್ನು ಜಿಲ್ಲಾ ಕೈಗಾರಿಕ ಕೇಂದ್ರಕ್ಕೆ ಪತ್ರ ಬರೆದು ಕಡತವನ್ನು ಮುಚ್ಚಲಾಗಿದೆ
19	–	ನಂಜನಗೂಡು ತಾಲ್ಲೂಕು ಕಲ್ಲಹಳ್ಳಿ ಗ್ರಾಮದ ಗದೆಯಲ್ಲಿನ ಜಮೀನುಗಳ ಗುಣಮಟ್ಟ ಸ್ಥಳೀಯ	–	23–09–06	ಈ ದೂರಿನ ಬಗ್ಗೆ ದಿನಾಂಕ 23–09–2006 ರಂದು ಪರಿವೀಕ್ಷಣೆ ನಡೆಸಿ ಗದ್ದೆಯ ಮಣ್ಣಿನ ಮಾದರಿಗಳನ್ನು ಸಂಗ್ರಹಿಸಲಾಗಿತ್ತು ಕೃಷಿ ಅಧಿಕಾರಿಗಳಿಗೆ ಮಣ್ಣಿನ

		ಕಾರ್ಖಾನೆಗಳಿಂದ ತುಂಬಾ ಹದಗೆಟ್ಟಿದ್ದು ಯಾವ ಬೆಳೆಯು ಆಗದೇ ಇರುವ ದೂರು			ಗುಣ ಹದಗೆಟ್ಟಿರುವ ಬಗ್ಗೆ ವರದಿ ಇಲಾಖೆಯವರು ಕ್ರಮ ಕೈಗೊಳ್ಳಲಿದ್ದಾರೆ
20	ಉದ್ದಿಮೆಯಿಂದ ಉಂಟಾಗುತ್ತಿರುವ ಘನ ತ್ಯಾಜ್ಯ ವಸ್ತುಗಳನ್ನು ಅವೈಜ್ಞಾನಿಕವಾಗಿ ವಿಲೇವಾರಿ ಮಾಡುತ್ತಿರುವ ಬಗ್ಗೆ	–	–	30–09–06	ಸದರಿ ದೂರಿನನ್ವಯ ಉದ್ದಿಮೆಯನ್ನು ದಿನಾಂಕ 27–10–2006 ರಂದು ಪರಿವೀಕ್ಷಣೆ ನಡೆಸಿ, ಪರಿವೀಕ್ಷಣೆಯ ಸಮಯದಲ್ಲಿ ಘನ ತ್ಯಾಜ್ಯ ವಸ್ತುಗಳನ್ನು ವೈಜ್ಞಾನಿಕ ರೀತಿಯಲ್ಲಿ ವಿಲೇವಾರಿ ಮಾಡಲು ನಿರ್ದೇಶನ ನೀಡಲಾಗಿದೆ ಅದರನ್ವಯ ಉದ್ದಿಮೆಯವರು ಸೂಕ್ತ ಕ್ರಮ ಕೈಗೊಂಡಿರುತ್ತಾರೆ ಹಾಗೂ ಈ ದೂರನ್ನು ಪರಿಹರಿಸಲಾಗಿದೆ

F9

21	–	–	ವಿಶ್ವ ಮಾನವ ಜೋಡಿ ರಸ್ತೆಯ ಎರಡನೇ ಅಡ್ಡ ರಸ್ತೆಯಲ್ಲಿ ಸರ್ವಿಸ್ ಸ್ಟೇಷನ್ ಇಂದ ಶಬ್ದ ಮಾಲಿನ್ಯ ಮತ್ತು ಗೋಡಿಯ ಅಡೆತಡೆಯ ಬಗ್ಗೆ	09–10–06	ಸದರಿ ದೂರಿನನ್ವಯ ಸರ್ವಿಸ್ ಸ್ಟೇಷನ್ ಪರಿವೀಕ್ಷಣೆ ಮಾಡಿ ಅಲ್ಲಿರುವ ಜನರೇಟರ್‌ನಿಂದ ಉಂಟಾಗುತ್ತಿರುವ ಶಬ್ದ ಮಾಲಿನ್ಯವನ್ನು ಉಲ್ಲೇಖಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿ ಸರ್ವಿಸ್ ಸ್ಟೇಷನ್ ಜೊತೆ ಪತ್ರ ಬರೆಯಲಾಗಿದೆ ಹಾಗೂ ಪತ್ರದ ಪ್ರತಿಯನ್ನು ದೂರುದಾರರಿಗೆ ಕಳುಹಿಸಲಾಗಿದೆ ತದನಂತರ ಶಬ್ದ ಮಾಲಿನ್ಯ ಬಗ್ಗೆ ಸರ್ವಿಸ್ ಸ್ಟೇಷನ್ ವಿರುದ್ಧ ದೂರು ಸೀಕೃತಿಯಾಗಿರುವುದಿಲ್ಲ ಅದುದರಿಂದ ಕಡತವನ್ನು ಮುಕ್ತಾಯಗೊಳಿಸಲಾಗಿದೆ
22	ಮೆ ವಿನಯ			21–11–06	ಸದರಿ ದೂರಿನನ್ವಯ

	ಪ್ರೊಡಕ್ಟ್ಸ್, ಎ–110, ಕೈಗಾರಿಕ ವಸಾಹತು, ಹೆಬ್ಬಾಳು ಕೈಗಾರಿಕ ಪ್ರದೇಶ, ಮೈಸೂರು ಉದ್ದಿಮೆ ಯಿಂದ ಹೊರಬರುವ ಕಲುಷಿತ ಹೊಗೆಯಿಂದ ತೊಂದರೆ ಉಂಟಾಗುತ್ತಿರುವ ಬಗ್ಗೆ	–	–		ಉದ್ದಿಮೆಯನ್ನು 30–11–2006 ರಂದು ಪರಿವೀಕ್ಷಣೆ ನಡೆಸಿ, ಉದ್ದಿಮೆಯ ವಾಯು ಮಾಲಿನ್ಯದ ಮೂಲವಾದ ಬಾಯ್ಲರ್‌ಗೆ ಉದ್ದಿಮೆಯವರು ಐ ಡಿ ಫ್ಯಾನ್ ಅಳವಡಿಸಿವಂತೆ ನೋಟೀಸ್ ಜಾರಿ ಮಾಡಿದ ನಂತರ ಉದ್ದಿಮೆಯವರು ಮಂಡಳಿಗೆ ಮುಚ್ಚಳಿಕೆಯನ್ನು ಸಲ್ಲಿಸಿ ವಾಯು ಮಾಲಿನ್ಯವನ್ನು ತಡೆಗಟ್ಟಲು ಕ್ರಮ ಕೈಗೊಳ್ಳುವುದಾಗಿ ತಿಳಿಸಿರುತ್ತಾರೆ ಅದೇ ರೀತಿ ಮಾಲಿನ್ಯವನ್ನು ತಡೆಗಟ್ಟಿದ್ದು ದೂರನ್ನು ಪರಿಹರಿಸಲಾಗಿದೆ
23	ಮೆ॥ ಜುಬಿಲೆಂಟ್ ಆರ್ಗ್ಯಾನೋಸಿಸ್			08–12–06	ಸದರಿ ಉದ್ದಿಮೆಯು ಔಷಧಿ ತಯಾರಿಕಾ ಕಾರ್ಖಾನೆಯಾ

	ಲಿಮಿಟೆಡ್, ಕೆ ಐ ಎ ಡಿ ಬಿ ಕೈಗಾರಿಕಾ ಪ್ರದೇಶ, ನಂಜನಗೂಡು ಉದ್ದಿಮೆಯಿಂದ ಉಂಟಾಗುತ್ತಿರುವ ದೂರ್ವಾಸನೆ ಬಗ್ಗೆ	–	–		ಗಿರುವುದರಿಂದ ಹಾಗೂ ವಿವಿಧ ರೀತಿ ಸಾವಯವ ಕಛ್ಚಾವಸ್ತುಗಳನ್ನು ಸರಿಯಾದ ರೀತಿಯಲ್ಲಿ ಸಂಗ್ರಹಣೆ ಮಾಡದಿರುವುದರಿಂದ ಮತ್ತು ವಾಯು ಮಾಲಿನ್ಯ ನಿಯಂತ್ರಣ ಉಪಕರಣಗಳನ್ನು ಕಾರ್ಯಾಚರಿಸದೇ ಅಪಾಯಕಾರಿ ತ್ಯಾಜ್ಯ ವಸ್ತುಗಳನ್ನು ಸುಡುವುದರಿಂದ ವಾಸನೆ ಬರುವ ಸಾಧ್ಯತೆ ಇರುತ್ತದೆ ಆದುದರಿಂದ ಈ ನಿಟ್ಟಿನಲ್ಲಿ ವಾಸನೆ ಮೂಲವನ್ನು ಪತ್ತೆಹಚ್ಚಿ ಅದನ್ನು ತಡೆಗಟ್ಟಲು ಅಗತ್ಯ ಕ್ರಮವನ್ನು ತುರ್ತಾಗಿ ಕೈಗೊಳ್ಳುವಂತೆ ದಿನಾಂಕ 08-12-2006 ರಂದು ಉದ್ದಿಮೆಯವರಿಗೆ ಸೂಚನೆ ನೀಡಲಾಗಿದೆ ಉದ್ದಿಮೆಯವರು

					ಅಗತ್ಯ ಕ್ರಮ ಕೈಗೊಂಡಿರುತ್ತಾರೆ ಹಾಗೂ ಪರಿಹರಿಸಲಾಗಿದೆ
24	ಕೈಗಾರಿಕೆಯಿಂದ ಕೆಟ್ಟ ವಾಸನೆ ಬರುತ್ತಿರುವ ಬಗ್ಗೆ ದೂರು	–	–	09–01–07	ಸದರಿ ದೂರಿನನ್ವಯ ಉದ್ದಿಮೆಯನ್ನು ದಿನಾಂಕ 17–01–2007 ಮತ್ತು 23–01–2007ರಂದು ಪರಿವೀಕ್ಷಣೆ ನಡೆಸಿ ಉದ್ದಿಮೆಗೆ ನೋಟೀಸ್ ಜಾರಿಗೊಳಿಸಿ ದೂರ್ವಾಸನೆಯನ್ನು ತಡೆಗಟ್ಟುವ ಬಗ್ಗೆ ಕ್ರಮ ಕೈಗೊಳ್ಳು ನಿರ್ದೇಶನ ನೀಡಲಾಗಿದೆ
25	–	–	ಪ್ಲೇಸೆಂಗ್ ಮತ್ತು ಟನಿಂಣ್ ಮಿಷನ್ ನಿಂದ ಶಬ್ದ ಮಾಲಿನ್ಯದ ಬಗ್ಗೆ	18–01–07	ಪರಿವೀಕ್ಷಣೆ ನಡೆಸಿ ಈ ಚಟುವಟಿಕೆಯು ಕೈಗಾರಿಕಾ ವಲಯದಲ್ಲಿದ್ದು ದೂರುದಾರರ ಮನೆ ಕೈಗಾರಿಕೆ ವಲಯದಲ್ಲೆ ಇರುವುದರಿಂದ ಕೈಗಾರಿಕೆ ಪ್ರದೇಶಕ್ಕೆ ನಿಬಂಧಿಸಿದ ಅನುಗುಣವಾಗಿ ಇರುವುದಾಗಿ

					ದೂರುದಾರರಿಗೆ ಪತ್ರ ಬರೆದು ಕಡತವನ್ನು ಮುಕ್ತಾಯ ಗೊಳಿಸಲಾಗಿದೆ
26	–	ಮೆ ಇಂಡನ್ ಫೀಲಾ ಉದ್ದಿಮೆಯಿಂದ ಹೊಬರುತ್ತಿರುವ ಕಲುಷಿತ ನೀರಿನ ಬಗ್ಗೆ	–	19–01–07	ಉದ್ದಿಮೆಯನ್ನು ಪರಿವೀಕ್ಷಣೆ ಮಾಡಲಾಯಿತ್ತು ಉದ್ದಿಮೆಯವರು ಕ್ರಮ ಕೈಗೊಂಡಿರುವುದರಿಂದ ಕಲುಷಿತ ನೀರು ಹೊರಹೊಗದಂತೆ ಸೂಚನೆ ನೀಡಿದ ನಂತರ ಕಲುಷಿತ ನೀರು ಹೊರಹೋಗುವುದನ್ನು ತಡೆಹಿಡಿಯಲಾಗಿದೆ
27	ಪ್ಲಾವುಡ್ ಉದ್ದಿಮೆಯಿಂದ ಹಾಗೂ ಸುತ್ತಲಿನ ಕೈಗಾರಿಕೆಗಳಿಂದ ತೊಂದರೆಯಾಗುತ್ತಿರುವ	–	–	13–01–07	ಪರಿವೀಕ್ಷಣೆ ನಡೆಸಿದ ಸಮಯದಲ್ಲಿ ದೂರುದಾರರಿಗೆ ಅಂತಹ ಯಾವುದೇ ತೊಂದರೆಯಾಗುತ್ತಿರುವುದು ಕಂಡು ಬಂದಿರುವುದಿಲ್ಲ

	ಬಗ್ಗೆ				ದೂರುದಾರರು ಮನೆಗಳು ಕೈಗಾರಿಕ ಪ್ರದೇಶದ ಬದಿಯಲ್ಲೇ ಇರುತ್ತದೆ
28	ಹೊಟಗಳ್ಳಿಯ ಸೋನೂ ಉದ್ದಿಮೆಯಿಂದ ವಾಯು ಮತ್ತು ಶಬ್ದ ಮಾಲಿನ್ಯದ ಬಗ್ಗೆ	–	–	19-02-07	ಸದರಿ ದೂರಿನನ್ವಯ ಪರಿವೀಕ್ಷಣೆ ನಡೆಸಿ ಉದ್ದಿಮೆದಾರರನ್ನು ಮೌಖಿಕ ವಿಚಾರಣೆಗೆ ಒಳಪಡಿಸಿ ಸೂಕ್ತ ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿದ ನಂತರ ಕಾರ್ಯಚರಣೆ - ನಡೆಸಲು ನಿರ್ದೇಶಿಸಲಾಯಿತ್ತು ಸದ್ಯದ ಪರಿಸ್ಥಿತಿಯಲ್ಲಿ ಉದ್ದಿಮೆಯು ಕಾರ್ಯಚರಣೆಯನ್ನು ಸ್ಥಗಿತ ಗೊಳಿಸಿದೆ
29	ಸಾಯಿ ಕಾರರ್ಟನ್ ಉದ್ದಿಮೆಯಿಂದ ವಾಯು ಮಾಲಿನ್ಯ	–	–	26-02-07	ಉದ್ದಿಮೆಗೆ ನೋಟಿಸ್ ಜಾರಿ ಮಾಡಿ ಉದ್ದಿಮೆಯು ಸೂಕ್ತ ಕ್ರಮ ಕೈಗೊಂಡಿರುತ್ತದೆ ಈ ದೂರನ್ನು

	ಉಂಟಾಗುತ್ತಿರುವ ಬಗ್ಗೆ				ಮುಕ್ತಾಯಗೊಳಿಸಲಾಗಿದೆ
30	–	–	ಕೆಸಿಮಾ ಪಾರ್ಕ್ ಜೂಸ್ ಸೆಂಟರ್‌ನಿಂದ ಶಬ್ದ ಮಾಲಿನ್ಯವಾ ಗುತ್ತಿರುವ ಬಗ್ಗೆ	26-02-07	ಈ ಬಗ್ಗೆ ಹೋಟೆಲ್‌ಗೆ ನೋಟೀಸ್ ಜಾರಿ ಮಾಡಲಾಗಿದೆ
31	ತಾರಸ್ ಮಿನರಲ್ಸ್‌ನಿಂದ ವಾಯು ಮಾಲಿನ್ಯ ಕುರಿತು	–	–	16-03-07	ಉದ್ದಿಮೆಯವರಿಗೆ ನೋಟೀಸ್ ಜಾರಿ ಮಾಡಿ ಕ್ರಮ ಕೈಗೊಳ್ಳಲಾಗಿದೆ
32	ಬನ್ನೂರು ರಸ್ತೆಯಲ್ಲಿರುವ ಕೋಳಿ ಫೀಡ್ಸ್ ಕಾರ್ಖಾನೆಯಿಂದ ವಾಯು ಮಾಲಿನ್ಯ ಕುರಿತು	–	–	23-03-07	ಈ ಬಗ್ಗೆ ಉದ್ದಿಮೆಗೆ ನೋಟೀಸ್ ಜಾರಿ ಮಾಡಿ ಸೂಕ್ತ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಲಾಗಿದೆ ಹಾಗೂ ಉದ್ದಿಮೆಯವರು ಕ್ರಮ ಕೈಗೊಂಡಿರುತ್ತಾರೆ

ಅನುಬಂಧ–2

ಪ್ರಾದೇಶಿಕ ಕಛೇರಿ, ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಉದ್ದಿಮೆಗಳಿಗೆ ನೀಡಿರುವ ಮುಚ್ಚುವ ಆದೇಶದ ವಿವರಗಳು

ಕ್ರಮ ಸಂಖ್ಯೆ	ಕಾರ್ಖಾನೆ /ಪ್ರಕರಣಗಳ ಹೆಸರು ಹಾಗೂ ವಿಳಾಸ	ಉಲ್ಲಂಘಿಸಿದ ನಿಯಮಗಳು			ಮಂಡಳಿಯುತೆಗೆದುಕೊಂಡಿರುವ ಕಾನೂನು ಕ್ರಮಗಳು
		ಜಲ ಕಾಯ್ದೆ	ವಾಯು ಕಾಯ್ದೆ	ಪರಿಸರ ಕಾಯ್ದೆ	
ವರ್ಷ 2004–05					
1	ಮೆ ಚಾಮುಂಡಿ ಡಿಸ್ಟಲರೀಸ್ ಪ್ರೈ, ಲಿ, ಮಲಿಯೂರು ಗ್ರಾಮ, ಬನ್ನೂರು ಹೋಬಳಿ, ತಿ ನರಸೀಪುರ ತಾಲ್ಲೂಕು, ಮೈಸೂರು ಜಿಲ್ಲೆ	ಹೌದು	ಹೌದು	–	ಪರಿಸರ ನಿಯಮಗಳನ್ನು ಉಲ್ಲಂಘಿಸಿದ ಕಾರಣ ಉದ್ದಿಮೆಗೆ ಜಲ ಹಾಗೂ ವಾಯು ಕಾಯ್ದೆಗಳಡಿಯಲ್ಲಿ ಮುಚ್ಚುವ ಆದೇಶಗಳನ್ನು ನೀಡಿರುತ್ತವೆ

ವರ್ಷ 2005–06					
1	ಮೆ ಕರ್ನಾಟಕ ಮೈನಿಂಗ್ ಶಾಂತಿಪುರ ಗ್ರಾಮ, ಹೆಚ್ ಡಿ ಕೋಟೆ, ಮೈಸೂರು	–	–	ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಕಾರ್ಯಾಚರಣೆ ಮಾಡುತ್ತಲ್ಲಿದ್ದುದ್ದರಿಂದ ಈ ಗಣಿಗಾರಿಕೆಗೆ ಜಲಕಾಯ್ದೆ, 1974 ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
2	ಮೆ ಕರ್ನಾಟಕ ಮೈನಿಂಗ್, ಹುನಗನಹಳ್ಳಿ ಗ್ರಾಮ, ಹೆಚ್ ಡಿ ಕೋಟೆ, ಮೈಸೂರು			ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಕಾರ್ಯಚರಣೆ ಮಾಡುತ್ತಲ್ಲಿದ್ದುದ್ದರಿಂದ ಈ ಗಣಿಗಾರಿಕೆಗೆ ಜಲಕಾಯ್ದೆ, 1974 ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
3	ಮೆ ದುರ್ಗ ಮೈನಿಂಗ್, ಐತ್ನತೊರವಳ್ಳಿ, ಹೆಚ್ ಡಿ ಕೋಟೆ, ಮೈಸೂರು	–	–	ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಕಾರ್ಯಚರಣೆ ಮಾಡುತ್ತಲ್ಲಿದ್ದುದ್ದರಿಂದ ಈ ಗಣಿಗಾರಿಕೆಗೆ ಜಲಕಾಯ್ದೆ, 1974 ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
4	ಮೆ ದುರ್ಗ ಮೈನಿಂಗ್, ತುರದಕಟ್ಟೆ ಹೆಚ್ ಡಿ ಕೋಟೆ, ಮೈಸೂರು	–	–	ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಕಾರ್ಯಚರಣೆ ಮಾಡುತ್ತಲ್ಲಿದ್ದುದ್ದರಿಂದ ಈ ಗಣಿಗಾರಿಕೆಗೆ ಜಲಕಾಯ್ದೆ, 1974 ರಡಿ

					ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
ವರ್ಷ 2006–07					
1	ಹೆಚ್ ಎಸ್ ಮಲ್ಲಪ್ಪ ಮಿನರಲ್ಸ್ ಮುಂಡೂರು ಗ್ರಾಮ ಕೆ ಆರ್ ನಗರ ತಾಲ್ಲೂಕು, ಮೈಸೂರು ಜಿಲ್ಲೆ	–	–	ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಗಣಿಗಾರಿಕೆಯನ್ನು ನಡೆಸುತ್ತಿರುವುದರಿಂದ ಜಲಕಾಯ್ದೆ, 1974 ಮತ್ತು ವಾಯು ಕಾಯ್ದೆ, 1981ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
2	ಹೆ ಎಚ್ ಶಿವಣ್ಣ, ಮಾಚಹಳ್ಳಿ ಗ್ರಾಮ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ	–	–	ಹೌದು	ಪರಿಸರ ವಿಮೋಚನೆ ಪತ್ರ ಪಡೆಯದೆ ಗಣಿಗಾರಿಕೆಯನ್ನು ನಡೆಸುತ್ತಿರುವುದರಿಂದ ಜಲಕಾಯ್ದೆ, 1974 ಮತ್ತು ವಾಯು ಕಾಯ್ದೆ, 1981ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
3	ಮಾಡ್ರನ್ ಸ್ಟೋನ್ ಕ್ರಷರ್ಸ್ ಸರ್ವೆ ನಂ–69/1, ಹುಂಸೂರು ರಸ್ತೆ, ಬೆಳವಾಡಿ ಗ್ರಾಮ, ಮೈಸೂರು ತಾಲ್ಲೂಕು ಮತ್ತು ಜಿಲ್ಲೆ	–	ಹೌದು	–	ಈ ಸ್ಟೋನ್ ಕ್ರಷರ್ಸ್ ಘಟಕವು ವಸತಿ ಪ್ರದೇಶದಲ್ಲಿದುದ್ದರಿಂದ ಹಾಗೂ ಅಗತ್ಯ ವಾಯು ಮಾಲಿನ್ಯ ನಿಯಂತ್ರಣ ಕ್ರಮಗಳನ್ನು ಅಳವಡಿಸಿಕೊಂಡಿರದಿದ್ದ ಕಾರಣ ಘಟಕಕ್ಕೆ ವಾಯು ಕಾಯ್ದೆಯಡಿಯಲ್ಲಿ 2004–05ರ

					ಸಾಲಿನಲ್ಲಿ ಸಮ್ಮತಿ ಪತ್ರವನ್ನು ತಿರಸ್ಕರಿಸಲಾಗಿತ್ತು ಸದರಿ ಉದ್ದಿಮೆಯ ಮೇಲೆ ದಿನಾಂಕ 12-08-2006 ರಂದು ಮೈಸೂರಿನ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿತ್ತು ಮಾನ್ಯ ನ್ಯಾಯಾಲಯವು ರೂ 6000/- ದಂಡವನ್ನು ಉದ್ದಿಮೆಯನ್ನು ವಿಧಿಸಿ ಆದೇಶವನ್ನು ಹೊರಡಿಸಿದೆ ಹಾಗೂ ಉದ್ದಿಮೆಯನ್ನು ಸದರಿ ಸ್ಥಳದಿಂದ ತೆಗೆಯಲಾಗಿದೆ
4	ಮೈಸೂರು ಮಹಾನಗರ ಪಾಲಿಕೆ, ಕಸಾಯಿ ಖಾನೆ, ಕೆಸರೆ, ಮೈಸೂರು	ಹೌದು	–	–	ಮೈಸೂರು ಮಹಾನಗರ ಪಾಲಿಕೆಯವರು ಕಾಸಾಯಿ ಖಾನೆಯಿಂದ ಹೊರಬರುವ ಕಲ್ಮಸತ್ಯಾಜ್ಯ ನೀರನ್ನು ವೈಜ್ಞಾನಿಕವಾಗಿ ಶುದ್ಧೀಕರಿಸದೇ ವಿಸರ್ಜನೆ ಮಾಡುತ್ತಿದುದರಿಂದ ಹಾಗೂ ಕಸಾಯಿಖಾನೆಯ ಘನತ್ಯಾಜ್ಯವನ್ನು ಸರಿಯಾದ ರೀತಿಯಲ್ಲಿ ವಿಲೇವಾರಿ ಮಾಡುತ್ತಿಲ್ಲವಾದುದರಿಂದ ಜಲಕಾಯ್ದೆ, 1974

					ರಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಮಾನ್ಯ ಜೆ ಎಂ ಎಫ್ ಸಿ ನ್ಯಾಯಾಲಯ, ಮೈಸೂರಿನಲ್ಲಿ ದಿನಾಂಕ 16-11-2006 ರಂದು ಹೂಡಲಾಗಿದೆ
5	ಮೈಸೂರು ಮಹಾನಗರ ಪಾಲಿಕೆ, ಮೈಸೂರು	ಹೌದು	–	–	ಮೈಸೂರು ಮಹಾನಗರ ಪಾಲಿಕೆಯವರು ಮೈಸೂರು ನಗರ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಕಲುಷಿತ ನೀರನ್ನು ವೈಜ್ಞಾನಿಕವಾಗಿ ಶುದ್ಧೀಕರಿಸದೇ ವಿಸರ್ಜನೆ ಮಾಡುತ್ತಿದುದರಿಂದ ಹಾಗೂ ತ್ಯಾಜ್ಯ ನೀರನ್ನು ಕೆರೆಗಳಿಗೆ ಹರಿಯಬಿಟ್ಟು ಮಾಲಿನ್ಯವನ್ನುಂಟು ಮಾಡುತ್ತಿದುದರಿಂದ ಜಲಕಾಯ್ದೆ, 1974 ರಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಮಾನ್ಯ ಜೆ ಎಂ ಎಫ್ ಸಿ ನ್ಯಾಯಾಲಯ, ಮೈಸೂರಿನಲ್ಲಿ ದಿನಾಂಕ 10-01-2007 ರಂದು ಹೂಡಲಾಗಿದೆ ಹಾಗೂ ಮೊಕದ್ದಮೆಯು ದಿನಾಂಕ 27-07-2007

					ರಂದು ವಿಚಾರಣೆಗೆ ಬರಲಿದೆ
6	ಮೆ // ಪರಶುರಾಮ ಟೆಲೆಫೇರ್ ಅಸೋಸಿಯೇಷನ್, ಬನ್ನೂರು ರಸ್ತೆ, ಭಂಗತಗಹಳ್ಳಿ, ವರುಣಾ ಹೋಬಳಿ, ಮತ್ತು ಜಿಲ್ಲೆ,	–	–	ಹೌದು	ಅಸೋಸಿಯೇಷನ್‌ನವರು ಜಲ ಮತ್ತು ವಾಯು ಕಾಯ್ದೆಯಡಿಯಲ್ಲಿ ಹಾಗೂ ಪರಿಸರ ವಿಮೋಚನಾ ಪತ್ರ ಪಡೆಯದೇ ವಸತಿ ಬಡಾವಣೆ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಿದ್ದುದರಿಂದ ಸದರಿ ಕಾಯ್ದೆಗಡಿಯಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ಮಾನ್ಯ ಜೆ ಎಂ ಎಫ್ ಸಿ ನ್ಯಾಯಾಲಯ, ಮೈಸೂರು ಇಲ್ಲಿ ದಿನಾಂಕ 27–09–2006 ರಂದು ಹೂಡಲಾಗಿದೆ

ಅನುಬಂಧ–2

ಪ್ರಾದೇಶಿಕ ಕಛೇರಿ, ಮೈಸೂರು ಜಿಲ್ಲೆ ವ್ಯಾಪ್ತಿಯಲ್ಲಿ ಉದ್ದಿಮೆಗಳ/ಸ್ಥಳೀಯ ಸಂಸ್ಥೆಗಳ ವಿರುದ್ಧ ಹೂಡಿರುವ ಮೊಕದ್ದಮೆಗಳು

ಕ್ರಮ ಸಂಖ್ಯೆ	ಕಾರ್ಖಾನೆ /ಪ್ರಕರಣಗಳ ಹೆಸರು ಹಾಗೂ ವಿಳಾಸ	ಉಲ್ಲಂಘಿಸಿದ ನಿಯಮಗಳು			ಮಂಡಳಿಯು ತೆಗೆದುಕೊಂಡಿರುವ ಕಾನೂನು ಕ್ರಮಗಳು
		ಜಲ ಕಾಯ್ದೆ	ವಾಯು ಕಾಯ್ದೆ	ಪರಿಸರ ಕಾಯ್ದೆ	

ವರ್ಷ 2004–05					
	ಯಾವುದೂ ಇಲ್ಲ				
ವರ್ಷ 2005–06					
1	ಮೆ, ಸಾದನಹಳ್ಳಿ ಫೆಲಸ್ಯೆಟ್ ಮೈನ್ಸ್, ಸಾದನಹಳ್ಳಿ ಗ್ರಾಮ, ಕೆ ಆರ್, ಎಸ್, ರಸ್ತೆ, ಮೈಸೂರು ತಾಲ್ಲೂಕು ಮತ್ತಿ ಜಿಲ್ಲೆ	–	–	ಹೌದು	2005–06 ನೇ ಸಾಲಿಗೆ ಸಮ್ಮತಿಯನ್ನು ತಿರಸ್ಕರಿಸಿದೆ, ಇದಲ್ಲದೇ ಈ ಗಣಿಗಾರಿಕೆಯ ವಿರುದ್ಧ ಮೈಸೂರು ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ 12–08–2006 ರಂದು ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ
ವರ್ಷ 2006–07					
1	ಎಸ್, ಎ, ಪ್ರೇಮಕುಮಾರ್, ಮಂಚಿಹಳ್ಳಿ ಗ್ರಾಮ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ	–	–	ಹೌದು	ಪರಿಸರ ವಿಮೋಚನಾ ಪತ್ರ ಪಡೆಯದೇ ಗಣಿಗಾರಿಕೆಯನ್ನು ನಡೆಸುತ್ತಿದ್ದರಿಂದ ಜಲ ಕಾಯ್ದೆ, 1974 ಮತ್ತು ವಾಯು ಕಾಯ್ದೆ, 1981 ರಡಿ ಹೆಚ್ ಡಿ ಕೋಟೆಯ ಜೆ ಎಂ ಎಫ್ ಸಿ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗಿದೆ
2	ವಿ ಶ್ರೀಧರ್ ಕಯನೈಟ್				ಪರಿಸರ ವಿಮೋಚನೆ ಪತ್ರ ಪಡೆಯದೇ

	ಮೈನ್ಸ್, ಚಾಮಲಪುರ ಗ್ರಾಮ, ಹೆಚ್ ಡಿ ಕೋಟೆ ತಾಲ್ಲೂಕು, ಮೈಸೂರು ಜಿಲ್ಲೆ	–	–	ಹೌದು	ಗಣಿಗಾರಿಕೆಯನ್ನು ನಡೆಸುತ್ತಿದ್ದರಿಂದ ಜಲ ಕಾಯ್ದೆ, 1974 ಮತ್ತು ವಾಯು ಕಾಯ್ದೆ, 1981 ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ
3	ಕೆ, ಶ್ರೀನಿವಾಸ ರಾವ್ ಮ್ಯಾಗ್ನಸೈಟ್ ಮೈನ್ಸ್, ಕಾಮಗೊಂಡನಹಳ್ಳಿ, ಹುಂಸೂರು ತಾಲ್ಲೂಕು, ಮೈಸೂರು ಜಿಲ್ಲೆ	–	–	–	ಪರಿಸರ ವಿಮೋಚನೆ ಪತ್ರ ಪಡೆಯದೇ ಗಣಿಗಾರಿಕೆಯನ್ನು ನಡೆಸುತ್ತಿದ್ದರಿಂದ ಜಲ ಕಾಯ್ದೆ, 1974 ಮತ್ತು ವಾಯು ಕಾಯ್ದೆ, 1981 ರಡಿ ಮುಚ್ಚುವ ಆದೇಶವನ್ನು ಜಾರಿಗೊಳಿಸಿದೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಮಾನ್ಯ ಉಪಾಧ್ಯಕ್ಷರೆ, ಮೈಸೂರು ನಗರ ಸಾಂಸ್ಕೃತಿಕ ನಗರ ನಿವೃತ್ತಿ ನಂತರ ಜನರು ಇಲ್ಲಿ ಶಾಂತಿಯಿಂದ ನೆಲೆಸಬೇಕು, ಅಲ್ಲಿಯ ಒಳ್ಳೆಯ ವಾತಾವರಣದಲ್ಲಿ ಬದುಕಬೇಕೆಂದು ಆಸೆ ಇಟ್ಟುಕೊಂಡು ಬಂದಿರತಕ್ಕಂಥ ಜನರ ಬವಣೆ ಬವಣೆಯಾಗಿಯೇ ಉಳಿದಿದೆ ಅಲ್ಲಿ ಪರಿಸರವಂತೂ ಇತ್ತೀಚೆಗೆ ತುಂಬಾ ಕೆಟ್ಟುಹೋಗಿದೆ ವಾಯು ಮಾಲಿನ್ಯ, ಜಲ ಮಾಲಿನ್ಯ, ಶಬ್ಧ ಮಾಲಿನ್ಯ, ಇವೆಲ್ಲವೂ ಕೂಡ ಅವರ ಬದುಕಿನಲ್ಲಿ ಬವಣೆಯನ್ನುಂಟು ಮಾಡಿ ಅವರು ಈಗ ಸಾವು-ಬದುಕಿನ ಮಧ್ಯೆ ಒದ್ದಾಡುತ್ತಿದ್ದಾರೆ ಮನುಷ್ಯನಿಗೆ ಆರೋಗ್ಯ, ಒಳ್ಳೆಯ ಬುದ್ಧಿ ಮತ್ತು ಗಾಳಿ, ಈ ಮೂರು ಕೂಡ ಜೀವನದ ವರದಾನಗಳು ಈ ವರದಾನಗಳು ಇಲ್ಲದೆ ಹೋದರೆ ಮನುಷ್ಯ ಬದುಕುವುದಾದರೂ ಹೇಗೆ? ಮೈಸೂರಿನಲ್ಲಿ ಒಂದು ಕಾಲಕ್ಕೆ ಹೊರಗಡೆಯವರೆಲ್ಲಾ ನಿವೃತ್ತಿಯಾದವರು ಬಂದು ನೆಲೆಸುತ್ತಿದ್ದರು ಈಗ ಮೈಸೂರು ಕೂಡ ಬೆಂಗಳೂರಿನ ತರಹ ಆಗುತ್ತಿದೆ ಅಲ್ಲಿ ಈಗ ಎಲ್ಲೆಲ್ಲಿ ಮನೆಗಳಿವೆಯೋ ಅಂಥ ಕಡೆಗಳಲ್ಲೂ ಕೂಡ ಫ್ಲೋರ್ ಮಿಲ್‌ಗೆ ಲೈಸೆನ್ಸ್ ಕೊಡುತ್ತಿದ್ದಾರೆ ಯಾವುದೇ ರೀತಿಯಾದಂಥ ಹಿಡಿತ ಲೈಸೆನ್ಸ್ ಕೊಡುವ ವಿಚಾರದಲ್ಲಿ ಇಲ್ಲವಾಗಿದೆ ನಿಖರವಾಗಿ ಎಂಥ ಕಡೆಗಳಲ್ಲಿ ಲೈಸೆನ್ಸ್ ಕೊಡಬೇಕೆನ್ನುವ ಬಗ್ಗೆ ಯೋಚನೆ ಮಾಡುವುದೇ ಇಲ್ಲ ಆದುದರಿಂದ ಈ ಬಗ್ಗೆ ಅರಣ್ಯ ಸಚಿವರು ಸರಿಯಾಗಿ ಗಮನಿಸಿ ಅದನ್ನು ತಡೆಗಟ್ಟಬೇಕು ಮೈಸೂರು ಹಾಗೂ ಬೆಂಗಳೂರಿನ ಪಾರಂಪರಿಕತೆಯನ್ನು ಉಳಿಸುವ ನಿಟ್ಟಿನಲ್ಲಿ ಪ್ರಾಮಾಣಿಕ ಪ್ರಯತ್ನವನ್ನು ಮಾಡಬೇಕು ಈ ಕಾರ್ಯವನ್ನು ಅವರು ಮಾಡುತ್ತಾರೋ ಇಲ್ಲವೋ ಎಂಬ ಬಗ್ಗೆ ಮಾನ್ಯ ಸಚಿವರು ನಮಗೆ ಸ್ಪಷ್ಟವಾಗಿ ಹೇಳಬೇಕು

ಶ್ರೀ ಸಿ ಚನ್ನಿಗಪ್ಪ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಹಿರಿಯ ಸದಸ್ಯರು ಒಳ್ಳೆಯ ಪ್ರಶ್ನೆಯನ್ನು ಕೇಳಿದ್ದಾರೆ ಅವರು ಹೇಳಿದ ಹಾಗೆ ಈಗಾಗಲೇ ಮೈಸೂರು ಜಿಲ್ಲೆಯಲ್ಲಿ ಪರಿಸರ ಮಾಲಿನ್ಯಕ್ಕೆ ಸಂಬಂಧಪಟ್ಟಂತೆ 32 ಕೇಸ್‌ಗಳಲ್ಲಿ ದೂರು ದಾಖಲಾಗಿದ್ದು ಅದರಲ್ಲಿ 6 ಕೇಸ್‌ಗಳನ್ನು ಕೋರ್ಟ್‌ಗೆ ಹಾಕಿದ್ದೇವೆ 9 ಕೇಸ್‌ಗಳಲ್ಲಿ ಅವುಗಳನ್ನು ಕ್ಲೋಸ್ ಮಾಡುವುದಕ್ಕೆ ಇವೊತ್ತು ಕ್ಲೋಸ್ ಆರ್ಡರ್ ಕೊಟ್ಟಿದ್ದೇವೆ ವಾಯು ಮಾಲಿನ್ಯ ಆಗಬಾರದು, ಜಲ ಮಾಲಿನ್ಯ ಆಗಬಾರದು, ಶಬ್ದ ಮಾಲಿನ್ಯ ಆಗಬಾರದೆಂದು ಈಗಾಗಲೇ ಈ ಬಗ್ಗೆ ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದೇವೆ ವೈಜ್ಞಾನಿಕವಾಗಿ ಇವೊತ್ತು ಮಾನ್ಯ ಸದಸ್ಯರು ಹೇಳಿದಂತೆ ಅಲ್ಲಿನ ಕಸಾಯಿಖಾನೆ ಮತ್ತು ಮಹಾನಗರಪಾಲಿಕೆಗೆ ನಾವು ನೋಟೀಸ್ ಕೊಟ್ಟಿದ್ದೇವೆ ಅಲ್ಲಿನ ಕಸಾಯಿಖಾನೆಯಿಂದ ಬರತಕ್ಕಂಥ ವಾಸನೆ ಮತ್ತು ಅಲ್ಲಿ ಏನು ಗಲೀಜು ಇತ್ತು ಅದನ್ನು ತೆಗೆಯಬೇಕೆಂದು ನೋಟಿಸ್ ಕೊಟ್ಟಿದ್ದೇವೆ ಅದೇ ರೀತಿ ಮಹಾನಗರ ಪಾಲಿಕೆ ಚರಂಡಿಗಳನ್ನು ಮುಚ್ಚಿಲ್ಲವೆಂದು ಹೇಳಿದ್ದರು ಅದರ ಬಗ್ಗೆ ಕೂಡ ನಾವು ಮಹಾನಗರಪಾಲಿಕೆಗೆ ಎಚ್ಚರಿಕೆಯನ್ನು ಕೊಟ್ಟಿದ್ದೇವೆ ಈಗ

ಅವರು ಕೂಡ ಈ ಕೆಲಸಗಳನ್ನು ಮಾಡಿಸುತ್ತಿದ್ದಾರೆ ಮಾನ್ಯ ಸದಸ್ಯರು ಏನು ಉತ್ತಮವಾದ ಪ್ರಶ್ನೆಯನ್ನು ನಾಗರಿಕರ ಸಲುವಾಗಿ ಕೇಳಿ ಸಲಹೆಯನ್ನು ಕೊಟ್ಟಿದ್ದಾರೋ ಆ ಪ್ರಕಾರ ಸರ್ಕಾರ ಈಗಾಗಲೇ ಕೆಲಸಗಳನ್ನು ಮಾಡಿಸುತ್ತಿದೆಯೆಂದು ಹೇಳಬಯಸುತ್ತೇನೆ

ಶ್ರೀ ಹೆಚ್ ಎಸ್ ಶಂಕರಲಿಂಗೇಗೌಡ ಮಾನ್ಯ ಉಪಾಧ್ಯಕ್ಷರೆ, ಮೈಸೂರಿನಲ್ಲಿ ಗಿಡ ಮರಗಳನ್ನು ನೆಡುವಾಗ ಒಳ್ಳೆಯ ಸಸಿಗಳನ್ನು ನೆಡಬೇಕಾಗಿದೆ ಇವು ಹೇಗಿರಬೇಕೆಂದರೆ ಈ ಸಸಿಗಳ ಬೇರು ಆಳದವರೆಗೂ ಹೋಗುವಂತಿರಬೇಕು ಮತ್ತು ಮುಂದೆ ಮರವಾದಾಗ ಅದರ ರೆಂಬೆಗಳು ಬಿದ್ದು ಹೋಗದೇ ಇರುವಂತೆ ಇರಬೇಕು ಮತ್ತು ಈ ಮರಗಳು ಹೆಚ್ಚು ವರ್ಷಗಳು ಇರುವಂತಿರಬೇಕು ಅಂಥ ಗಿಡಗಳನ್ನು ನೆಡಬೇಕೆಂದು ನನ್ನ ಸಲಹೆ

ಶ್ರೀ ಸಿ ಚನ್ನಿಗಪ್ಪ ಮಾನ್ಯ ಉಪಾಧ್ಯಕ್ಷರೆ,– ಮಾನ್ಯ ಸದಸ್ಯರ ಸಲಹೆಯಂತೆ ಬಹುವಾರ್ಷಿಕ ಮರಗಳನ್ನು ಈಗಾಗಲೇ ನಾಟಿ ಮಾಡಿದ್ದೇವೆ ಮೊನ್ನೆ ಮೈಸೂರಿನಲ್ಲಿ ಸುಮಾರು 30 ಎಕರೆ ಜಮೀನಿಗೆ ಸ್ಯಾನಿಟೀರಿಯಂ ಹಾಸ್ಟೆಟಲ್ನಲ್ಲಿ ಕಂಪ್ಲೀಟ್ ಕಾಂಪೌಂಡ್ ಹಾಕಿಸಿ ಅಲ್ಲಿ ಮಾನ್ಯ ದೇವೇಗೌಡರು, ಮಾನ್ಯ ಮಂತ್ರಿಗಳು ಮತ್ತು ಅಲ್ಲಿನ ನಾಗರಿಕರು ಮತ್ತು ಪೌರ ಕಾರ್ಮಿಕರು ಸೇರಿ ಅನೇಕ ರೀತಿಯ ಸಸಿಗಳನ್ನು ನೆಟ್ಟಿದ್ದೇವೆ ಅವೆಲ್ಲವೂ ಬಹುವಾರ್ಷಿಕ ಮರಗಳಾಗಿರುವ ಕಾರಣ ಅವುಗಳು 100 ರಿಂದ 500 ವರ್ಷಗಳವರೆಗೆ ಇರತಕ್ಕಂಥವುಗಳೇ ಆಗಿವೆ ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಆ ಕೆಲಸವನ್ನು ನಾವು ಮಾಡುತ್ತೇವೆ

ಗುಳೇದಗುಡ್ಡ ನಗರದಲ್ಲಿ ಜವಳಿ ಪಾರ್ಕ್ ನಿರ್ಮಿಸುವುದು

ವಿಧಾನ ಸಭಾ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ ರವರ ಚುಕ್ಕೆ ಗುರುತಿನ ಪ್ರ.ಸಂ 61ಕ್ಕೆ

ಕ್ರ. ಸಂ	ಜಿಲ್ಲಾ ಯೋಜನಾ ಘಟಕ	ಕೆರೆಗಳ ಸಂಖ್ಯೆ	ಅನುಷ್ಠಾನದ ವಿವಿಧ ಹಂತದಲ್ಲಿರುವ ಕೆರೆಗಳ ಸಂಖ್ಯೆ					
			ಯೋಜನಾ ಪೂರ್ವ ಹಂತ	ಯೋಜನಾ ಹಂತ	ಅನುಷ್ಠಾನ ಹಂತ	ಅನುಷ್ಠಾನೋತ್ತರ ಹಂತ	ಹಸ್ತಾಂತರ ಗೊಂಡ ಕೆರೆಗಳು	ಒಟ್ಟು
1	ಬಾಗಲಕೋಟೆ	36	2	–	19	11	4	36
2	ಬೀದರ್	36	11	–	14	6	5	36
3	ಚಿತ್ರದುರ್ಗ	72	13	1	41	15	2	72
4	ಹಾವೇರಿ	213	26	15	95	72	5	213
5	ಹೊಸಪೇಟೆ	94	9	2	49	24	10	94
6	ಕೋಲಾರ	572	68	33	313	146	12	572
7	ಚಿಂತಾಮಣಿ	457	24	10	273	138	12	457
8	ರಾಯಚೂರು	128	4	2	88	29	5	128
9	ತುಮಕೂರು	397	35	5	313	25	19	397
	ಒಟ್ಟು	2005	192	68	1205	466	74	2005

ಟಿಪ್ಪಣಿ. ಜಲ ಸಂವರ್ಧನೆ ಯೋಜನೆಗೆ ಪ್ರಸಕ್ತ ಸಾಲಿನಲ್ಲಿ ಒಟ್ಟು ರೂ 160 00 ಕೋಟಿ ಅನುದಾನವನ್ನು ನಿಗದಿಪಡಿಸಲಾಗಿದೆ ಪ್ರಗತಿಗೆ ಅನುಸಾರವಾಗಿ ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಲಾಗುತ್ತಿದೆ

ಕ್ರ.ಸಂ	ವಿಭಾಗ	ಜಿಲ್ಲೆ	ಬಿಡುಗಡೆಗೊಳಿಸಿದ ಮೊತ್ತ				ಒಟ್ಟು (ಜೂನ್ 2007 ಅಂತ್ಯದವರೆಗೆ)
			4702 ಇತರೆ ಕಾಮಗಾರಿಗಳಿಗಾಗಿ	ಕೇಂದ್ರ ನೆರವಿನ ಯೋಜನೆಯಡಿಯಲ್ಲಿ ಕೆರೆಗಳ ದುರಸ್ತಿ ಪುನರುಜ್ಜೀವನ ಮತ್ತು ಜೀರ್ಣೋದ್ಧಾರ	4711 ಪ್ರವಾಹ ನಿಯಂತ್ರಣ ಕಾಮಗಾರಿ	ನಬಾರ್ಡ್ ಕಾಮಗಾರಿಗಳು	
1	2	3	4	5	6	7	8
		ದಾವಣಗೆರೆ					0 00
13	ಶಿವಮೊಗ್ಗ	ಶಿವಮೊಗ್ಗ	4 00		11 00	5 70	20 70
14	ಮೈಸೂರು	ಮೈಸೂರು	28 22		18 58		46 80
		ಮಂಡ್ಯ					0 00
		ಚಾಮರಾಜನಗರ					0 00
15	ಹಾಸನ	ಹಾಸನ					0 00
		ಚಿಕ್ಕಮಗಳೂರು					0 00
16	ಮಂಗಳೂರು	ದಕ್ಷಿಣ ಕನ್ನಡ	250 00		20 00	90 00	360 00
		ಉಡುಪಿ	175 00		12 42	97 00	284 42
		ಕೊಡಗು	100 00				100 00
		ಒಟ್ಟು	2,507 01	126 74	108 50	3,219 31	5,961 56

ಅನುಬಂಧ–3

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 61 (ಆ) ಜಲ ಸಂವರ್ಧನೆ ಯೋಜನಾ ಸಂಘಕ್ಕೆ ಸಂಬಂಧಿಸಿದ ಮಾಹಿತಿ

ಕ್ರ.ಸಂ	ಜಿಲ್ಲಾ ಯೋಜನಾ ಘಟಕ	ಏಪ್ರಿಲ್ 2007		ಮೇ 2007		ಜೂನ್ 2007		
		ಕೆರೆಗಳ ಸಂಖ್ಯೆ	ಮೊತ್ತ ರೂ	ಕೆರೆಗಳ ಸಂಖ್ಯೆ	ಮೊತ್ತ	ಕೆರೆಗಳ ಸಂಖ್ಯೆ	ಮೊತ್ತ ರೂ	ತ್ರೈಮಾಸಿಕ ಒಟ್ಟು ಮೊತ್ತ ರೂ
1	ಬಾಗಲಕೋಟೆ							
2	ಬೀದರ್							
3	ಚಿತ್ರದುರ್ಗ	–	–	1	907,974	2	1,313,576	2,221,550
4	ಹಾವೇರಿ	–	–	21	93,330,127	–	0	93,330,127
5	ಹೊಸಪೇಟೆ	–	–	–	–	1	204,891	204,891
6	ಕೋಲಾರ	–	–	10	2,957,346	5	1,619,798	4,577,144
7	ಚಿಂತಾಮಣಿ	1	810,795	4	1,116,475	2	972,807	2,900,077
8	ರಾಯಚೂರು	–	–	1	87,000	1	593,700	680,700
9	ತುಮಕೂರು	–	–	20	7,152,888	1	313,796	7,466,684
	ಒಟ್ಟು	1	810,795	57	21,551,900	12	5,018,568	27,381,263

ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ · ಬಸವ ಕಲ್ಯಾಣ ತಾಲ್ಲೂಕುನಲ್ಲಿ ಸಣ್ಣ ನೀರಾವರಿ ಇಲಾಖೆಯಿಂದ ಕೆರೆಗಳನ್ನು ಮಾಡತಕ್ಕಂಥಾದ್ದಕ್ಕೆ acquire ಮಾಡಿಕೊಂಡಂಥ ಜಾಗಗಳ ದುಡ್ಡು ಇನ್ನೂ ರೈತರಿಗೆ ಮುಟ್ಟಿಲ್ಲ ಆ ದುಡ್ಡನ್ನು ಯಾವಾಗ ಮುಟ್ಟಿಸುತ್ತಾರೆ ಎನ್ನುವುದನ್ನು ಕ್ಲಿಯರ್ ಆಗಿ ಉಪ ಮುಖ್ಯಮಂತ್ರಿಗಳು ಹೇಳಬೇಕು ಅದೇ ರೀತಿ, ಬಸವ ಕಲ್ಯಾಣದಲ್ಲಿ ಮನ್ನಳ್ಳಿ ಟ್ಯಾಂಕ್ sanctionಆಗಿ ಸುಮಾರು 2 ವರ್ಷಗಳಾಗಿದೆ ಅದರ ಕಾಮಗಾರಿ ಇನ್ನೂ ಕೂಡ ಪ್ರಾರಂಭವಾಗಿಲ್ಲ ಅದನ್ನು ಯಾವಾಗ ಪ್ರಾರಂಭ ಮಾಡುತ್ತಾರೆ ಎನ್ನುವುದನ್ನೂ ಹೇಳಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ ನಿಮ್ಮ ಪ್ರಶ್ನೆಗೆ ನಾನು ಸವಿಸ್ತಾರವಾದ ಉತ್ತರವನ್ನು ಕೊಟ್ಟಿದ್ದೇನೆ ತಾವು ಉಪ ಪ್ರಶ್ನೆಯನ್ನು ಕೇಳಿರುವಂಥಾದ್ದಕ್ಕೆ ನಾನು ಹೇಳುವುದೇನೆಂದರೆ, ನಾನು ಈಗಾಗಲೇ ಹೇಳಿದಂತೆ, ಆದ್ಯತೆ ಮೇಲೆ ಹಣವನ್ನು ಬಿಡುಗಡೆ ಮಾಡಿ ಕೆಲಸವನ್ನು ಪ್ರಾರಂಭ ಮಾಡುತ್ತೇನೆ ಹೋದ ವರ್ಷದಿಂದ ಈ ವರ್ಷಕ್ಕೆ ಸ್ಪಿಲ್‌ಓವರ್ ವರ್ಕ್ಸ್ ಇದೆ ಅದಕ್ಕೆ ಹಣವನ್ನು ಕೊಟ್ಟುತ್ತಿದ್ದೇವೆ ಅದರ ಕಡೆ ನಾನು ಗಮನವನ್ನು ಕೊಡುತ್ತೇನೆ

ಇ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಬಸವರಾಜ್ ಎಸ್ ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖಾ ಸಚಿವರು) ಮಾನ್ಯ ಉಪಾಧ್ಯಕ್ಷರೆ, ದಿನಾಂಕ 23–07–2007 ರಂದು ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳ 11ನೇ ಪಟ್ಟಿಯಲ್ಲಿರುವ 93 ಪ್ರಶ್ನೆಗಳ ಪೈಕಿ 70 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ

ಉಪಾಧ್ಯಕ್ಷರು ಮಂಡಿಸಲಾಯಿತು

(ಅನುಬಂಧ–1)

2) ಅಧ್ಯಕ್ಷರೆ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ) ವಿಷಯ . ಪೌರ ಕಾರ್ಮಿಕರು ಮುಷ್ಕರ ನಡೆಸುತ್ತಿರುವ ಬಗ್ಗೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ · ಮಾನ್ಯ ಉಪಾಧ್ಯಕ್ಷರೆ, ಪೌರ ಕಾರ್ಮಿಕರ ಮುಷ್ಕರದ ಬಗ್ಗೆ ಪ್ರಸ್ತಾಪ ಮಾಡಲಿಕ್ಕೆ ನಾವು ಅಧ್ಯಕ್ಷರ ಹತ್ತಿರ ಅನುಮತಿಯನ್ನು ಕೇಳಿದ್ದೆವು ಪೌರ ಕಾರ್ಮಿಕರು ಒಂದು ವಾರದಿಂದ ಮುಷ್ಕರ ಮಾಡುತ್ತಿದ್ದಾರೆ ಎಲ್ಲ ನಗರಗಳೂ ಗಬ್ಬೆದ್ದು ಹೋಗಿವೆ ಅಲ್ಲಿ ಕಸ ಗುಡಿಸುವವರಿಲ್ಲ, ನೀರು ಬಿಡುವವರಿಲ್ಲ ಆ ವಿಷಯವನ್ನು ಚರ್ಚೆ ಮಾಡಲಿಕ್ಕೆ ದಯವಿಟ್ಟು ಅವಕಾಶ ಮಾಡಿಕೊಡಬೇಕು ಅವರು ಮುಷ್ಕರ ಹೂಡಿ ಒಂದು ವಾರವಾಯಿತು ಒಂದು ವಾರದಿಂದ ಆ ಸಮಸ್ಯೆ ಪರಿಹಾರವಾಗಿಲ್ಲ ನಮ್ಮ ನಗರಗಳೆಲ್ಲ ವಾಸನೆ ಹೊಡೆಯುತ್ತಿವೆ ಮಂತ್ರಿಗಳು, ಸರ್ಕಾರ ಏನು ಮಾಡುತ್ತಿದೆ ಎಂದು ಗೊತ್ತಾಗುತ್ತಿಲ್ಲ ಸಮಸ್ಯೆ ಪರಿಹಾರ ಮಾಡಿಲ್ಲ ಅವರು ಮುಷ್ಕರವನ್ನು ಮುಂದುವರೆಸಿದ್ದಾರೆ ಸರ್ಕಾರ ಅವರನ್ನು ಮಾತುಕತೆಗೆ ಕರೆಯುತ್ತಿಲ್ಲ ಸರ್ಕಾರ

ನಿದ್ದೆ ಮಾಡುತ್ತಿದೆಯೇ? ಲಕ್ಷಾಂತರ ಜನ ಪೌರ ಕಾರ್ಮಿಕರು ಮುಷ್ಕರ ಹೂಡಿದ್ದಾರೆ ಕುಡಿಯುವುದಕ್ಕೆ ನೀರಿಲ್ಲ ಕಸ ಹೊಡೆಯುತ್ತಿಲ್ಲ ಅಲ್ಲಿ ಜನರು ಏನಾಗಬೇಕು ಸರ್ಕಾರ ಏನು ಮಾಡುತ್ತಿದೆ? ಸರ್ಕಾರ ಇದೆಯೇ? ಸರ್ಕಾರ ಇವತ್ತು ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳಬೇಕು

ಶ್ರೀ ವಾಟಾಳ್ ನಾಗರಾಜ್ ಇದರ ಬಗ್ಗೆ ತಾವು ಇವತ್ತು ತೀರ್ಮಾನ ತೆಗೆದುಕೊಳ್ಳಬೇಕು ಪೌರ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸಬೇಕು

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಸಮಸ್ಯೆ ಪರಿಹಾರವಾಗಬೇಕು ನಗರಗಳಲ್ಲಿ ಒಂದು ಕೆಲಸವೂ ಆಗುತ್ತಿಲ್ಲ

(ಗೊಂದಲ)

ಉಪಾಧ್ಯಕ್ಷರು ನೀವು ಹೇಳಿದಿರಲ್ಲ ಅವರು ಏನು ಹೇಳುತ್ತಾರೆಂದು ಕೇಳಿ

(ಗೊಂದಲ)

ಉಪಾಧ್ಯಕ್ಷರು ಅವರಿಗೆ ಮಾತನಾಡಲು ಬಿಡುತ್ತೀರೋ, ಇಲ್ಲವೋ? ನೀವು ಹೇಳಿರುವುದು ಅರ್ಧವಾಗಿದೆ ಅವರು ಏನು ಹೇಳುತ್ತಾರೋ ಕೇಳೋಣ ಈ ರೀತಿ ಮಾಡಿದರೆ ಹೇಗೆ? ಅವರ ಉತ್ತರ ಬೇಡವೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ . ಸಮಸ್ಯೆಯನ್ನು ಬಗೆಹರಿಸುತ್ತೇವೆ ಎಂದು ಸ್ಪಷ್ಟವಾಗಿ ನೇರವಾಗಿ ಮಂತ್ರಿಗಳು ಹೇಳಬೇಕು

(ಗೊಂದಲ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ಅವರು ಒಂದು ವಾರದಿಂದ ಮುಷ್ಕರ ಮಾಡುತ್ತಿದ್ದಾರೆ ಸರ್ಕಾರ ಮಾಡುತ್ತಿದೆಯೇ? ಇವರು ಕಣ್ಣು ಮುಚ್ಚಿಕೊಂಡಿದ್ದಾರೆಯೇ?

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ ಪೌರ ಕಾರ್ಮಿಕರ ಬಗ್ಗೆ ಇವರಿಗೆ ಕರುಣೆ ಇಲ್ಲ ಬಹಳ ಬೇಜವಾಬ್ದಾರಿ ಇದು ಇದು ಒಳ್ಳೆಯದಲ್ಲ

(ಗೊಂದಲ)

ಶ್ರೀ ಬಿ ಆರ್ ಪಾಟೀಲ್ ಇವತ್ತು ನಗರಗಳಲ್ಲಿ ಕಸ ಹೊಡೆಯುವವರಿಲ್ಲ, ಲೈಟ್ ಹಚ್ಚುವವರಿಲ್ಲ ಇಡೀ ನಗರಸಭೆಗಳೆಲ್ಲ ಗಬ್ಬೆದ್ದು ನಾರುತ್ತಿವೆ ಜನರ ಆರೋಗ್ಯದ ಮೇಲೆ ಬಹಳ ಕೆಟ್ಟ ಪರಿಣಾಮ ಬೀರುತ್ತಿದೆ ಇಡೀ ರಾಜ್ಯದಲ್ಲಿ ಇವತ್ತು ಪೌರ ಕಾರ್ಮಿಕರು ಬೀದಿಗೆ ಬಂದು ಹೋರಾಟ ಮಾಡುತ್ತಿದ್ದಾರೆ

ಉಪಾಧ್ಯಕ್ಷರು ಪಾಟೀಲರೇ, opposition leader ಏನೋ ಹೇಳಬೇಕೆಂದು ನಿಂತಿದ್ದಾರೆ ಒಂದು ನಿಮಿಷ ಇರಿ

ಶ್ರೀ ಧರಸಿಂಗ್ ಇವತ್ತು ರಾಜ್ಯದಲ್ಲಿ ಎಲ್ಲ ಕಡೆಗಳಲ್ಲಿ ಪೌರ ಕಾರ್ಮಿಕರ ಮುಷ್ಕರ ಬಹಳಷ್ಟು ಪರಿಣಾಮಕಾರಿಯಾಗಿ ನಡೆಯುತ್ತಿದೆ ನಿನ್ನೆ ನಾನು ಗುಲ್ಬರ್ಗದಲ್ಲಿದ್ದಾಗ, ನೀರು ಬಿಡತಕ್ಕಂಥ ಕಾರ್ಮಿಕರು ಬಂದು ಪ್ರತಿಭಟನೆ ಮಾಡಿದ್ದಾರೆ ಪೌರಾಡಳಿತ ಸಚಿವರು ಸ್ವಲ್ಪ ತಿಳಿದುಕೊಳ್ಳಬೇಕು ಇದಕ್ಕೆ top priority ಕೊಡಬೇಕು ಮೊನ್ನೆ ರಾಜ್ಯದಲ್ಲಿ Government employee ಯವರ ಒಂದು ದೊಡ್ಡ ಸಮಾವೇಶವಾಯಿತು ದಿನಗೂಲಿ ನೌಕರರನ್ನು ಖಾಯಂ ಮಾಡತಕ್ಕಂಥ ಮಾತನ್ನು ಮುಖ್ಯಮಂತ್ರಿಗಳು ಹೇಳಿದರು, ಉಪ ಮುಖ್ಯಮಂತ್ರಿಗಳೂ ಹೇಳಿದರು ಖಾಯಂ ಮಾಡಲು ಎಲ್ಲಿ existing vacancy ಗಳಿವೆ ಎನ್ನುವುದನ್ನು ನೀವು ತಿಳಿದುಕೊಂಡು, ಇದನ್ನು ಮಾಡಲೇಬೇಕು ಎನ್ನುವ ರೀತಿಯಲ್ಲಿ ಮುಖ್ಯಮಂತ್ರಿಗಳ ಬಳಿಗೆ file ಹಿಡಿದುಕೊಂಡು ಹೋಗಬೇಕು You are the in-charge Minister ಇವತ್ತು ಎಲ್ಲ ಕಡೆಗಳಲ್ಲಿ ಪೌರ ಕಾರ್ಮಿಕರು ಇಷ್ಟು ಪ್ರತಿಭಟನೆ ಮಾಡುತ್ತಿದ್ದಾರೆ ಸರ್ಕಾರ ಸುಮ್ಮನಿರುವುದನ್ನು ನೋಡಿ ಸರ್ಕಾರ ಇದೆಯೋ, ಇಲ್ಲವೋ ಎನ್ನುವ ಮಾತುಗಳು ಬರುತ್ತಿವೆ ಈ ಬಗ್ಗೆ ಶ್ರೀರಾಮರೆಡ್ಡಿಯವರು, ವಾಟಾಳ್ ನಾಗರಾಜ್‌ರವರು, ಜಯಪ್ರಕಾಶ್ ಹೆಗ್ಡೆಯವರು, ರಾಜೇಂದ್ರನ್‌ರವರು ಎಲ್ಲರೂ ಮಾತನಾಡಿದರು ರಮೇಶ್ ಕುಮಾರ್‌ರವರು, ದೇಶಪಾಂಡೆ ಯವರು, ನಾವೆಲ್ಲರೂ ಮಾತನಾಡಿದ್ದೇವೆ ಅದಕ್ಕೆ ತಾವು ಇವತ್ತು ಉತ್ತರ ಕೊಡಲೇಬೇಕು ಒಂದು ತಿಂಗಳ ಒಳಗಾಗಿ ಆಗಬೇಕೆಂದು ನಾವು ಹೇಳಿದ್ದೇವೆ ನೀವು ಮಾಡದಿದ್ದರೆ ನಾವು ಪ್ರತಿಭಟನೆಯನ್ನು ಮುಂದುವರೆಸುತ್ತೇವೆ ಎಂದು ಪೌರ ಕಾರ್ಮಿಕರ ಮುಖಂಡರು ಮೈಸೂರಿನಲ್ಲಿ ಹೇಳಿದ್ದಾರೆ ಇವತ್ತು ಎಲ್ಲ ಕಡೆಗಳಲ್ಲಿ ಪ್ರತಿಭಟನೆ ನಡೆಯುತ್ತಿದೆ You have got the important portfolio ಇವತ್ತು ನಿಮಗೆ ಸಮಸ್ಯೆ ಅರ್ಥವಾಗುತ್ತಿಲ್ಲ 27 ವರ್ಷಗಳ ಹಿಂದೆ ನಾನೂ ಕೂಡ ಈ ಖಾತೆಯನ್ನು ನಿರ್ವಹಿಸಿದ್ದೇನೆ ಆಂಜನೇಯರವರನ್ನು ಕೇಳಿ ಆಗ ನಾನು ದಾವಣಗೆರೆಗೆ ಹೋಗಿ ಅಲ್ಲಿ ಏನೊಂದು ನಿರ್ಧಾರ ಮಾಡಿದ್ದೆವು ಎನ್ನುವುದನ್ನು ಕೇಳಿ ಎಲ್ಲರನ್ನೂ ಮಾತುಕತೆಗೆ ಕರೆಸಬೇಕು ಏನೇ ಸಮಸ್ಯೆಯಿರಲಿ ಯಡಿಯೂರಪ್ಪನವರು ಬರಲಿ, ಮುಖ್ಯಮಂತ್ರಿಗಳು ಬರಲಿ Chief Secretary ಯವರು ಏನು ಮಾಡುತ್ತಿದ್ದಾರೆ? ಅವರು ಮಲಗಿದ್ದಾರೆಯೇ? ಸದನಕ್ಕೆ ಮುಖ್ಯಕಾರ್ಯದರ್ಶಿಗಳು ಯಾವಾಗಲೂ ಬರಬೇಕು ಸದನದಲ್ಲಿ ಪ್ರಸ್ತಾಪ ಮಾಡತಕ್ಕಂಥಾದ್ದನ್ನು ಅವರು ನೋಡಬೇಕು ನಿಮ್ಮ ಪ್ರಧಾನ ಕಾರ್ಯದರ್ಶಿಗಳು ಯಾರು? ಯಾರು ಬಂದಿದ್ದಾರೆ? ನಿಮ್ಮ ಡೈರೆಕ್ಟರ್ ಎಲ್ಲಿದ್ದಾರೆ? ನನಗೆ ಎಲ್ಲ ಗೊತ್ತು Nobody is here ನಾವು ಪ್ರಸ್ತಾಪ ಮಾಡುತ್ತಿರುವಂಥಾದ್ದಕ್ಕೆ ತಾವು

ನಿಖರವಾದ ಉತ್ತರವನ್ನು ಕೊಡಲೇಬೇಕು ನಿಖರವಾದ ಉತ್ತರವನ್ನು ಕೊಡದಿದ್ದರೆ ನಾವು ಇಲ್ಲಿ ಕೂರಲಿಕ್ಕೆ ಆಗುವುದಿಲ್ಲ

ಶ್ರೀ ವಾಟಾಳ್ ನಾಗರಾಜ್ ಸರ್ಕಾರ ಇದನ್ನು ಪ್ರತಿಷ್ಟೆಯ ಪ್ರಶ್ನೆಯನ್ನಾಗಿ ಮಾಡಿಕೊಂಡರೆ ಆಗುವುದಿಲ್ಲ

ಶ್ರೀ ಆರ್ ವಿ ದೇಶಪಾಂಡೆ ಆ ದಿನ ಆ ಭಾಗದ ಮತ್ತು ಈ ಭಾಗದ ಎಲ್ಲ ಸದಸ್ಯರೂ ಸಮಸ್ಯೆಯನ್ನು ಬಗೆಹರಿಸಬೇಕೆಂದು ಒತ್ತಾಯ ಮಾಡಿದ್ದಾರೆ ಎಲ್ಲೆಲ್ಲಿ vacancy ಇವೆ, ಅವುಗಳನ್ನು immediate ತುಂಬಿ ಎಂದು ಹೇಳಿದ್ದೇವೆ 5th Pay commissionಅನ್ನು ತಾವು ಜಾರಿ ಮಾಡುತ್ತೇವೆ ಎಂದು ಹೇಳಿದಿರಿ ಎಲ್ಲೆಲ್ಲಿ post create ಮಾಡಬೇಕು, ಅದನ್ನು Deputy C Mರವರನ್ನು ಕೇಳಿ ಮಾಡಿ ಎಂದು ಹೇಳಿದೆವು ಕಳುಹಿಸಿ, ಮಾಡುತ್ತೇವೆ ಎಂದು ಹೇಳಿದರು ಇದು, ಇವತ್ತು, ನಾಳೆ ಅಥವಾ ಮತ್ತೊಂದು ದಿವಸ ಮಾಡುವ ಕೆಲಸವಲ್ಲ ಪೌರ ಕಾರ್ಮಿಕರು ಪ್ರತಿಯೊಂದು ಕ್ಷೇತ್ರಗಳಲ್ಲಿಯೂ ಬಂದು ನಮ್ಮನ್ನು ಭೇಟಿಯಾಗಿ ಮನವಿ ಕೊಟ್ಟಿದ್ದಾರೆ ಅವರದು genuine demands ಆಗಿವೆ ತಾವೂ ಮಾತು ಕೊಟ್ಟಿರಿ ತಮಗೂ ಅವರ ಬಗ್ಗೆ ಸಹಾನುಭೂತಿ ಇದೆ ಎನ್ನುವ ಮಾತನ್ನು ತಾವು ಹೇಳಿದಿರಿ ಹಾಗಾಗಿ ತಕ್ಷಣ ಒಂದು ಉತ್ತರ ಕೊಟ್ಟರೆ ಅವರು strike ವಾಪಸ್ಸು ತೆಗೆದುಕೊಳ್ಳುತ್ತಾರೆ ಇಡೀ ಸದನದ ಸದಸ್ಯರು ಬೆಂಬಲ ಕೊಡುತ್ತಾರೆ ಯಾರದೂ ಭಿನ್ನಾಭಿಪ್ರಾಯವಿಲ್ಲ

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಸಚಿವರು ಪ್ರತಿಷ್ಟೆಯ ಪ್ರಶ್ನೆ ಮಾಡಿಕೊಳ್ಳಬಾರದು ಪೌರಕಾರ್ಮಿಕರು ಅವರ ಜೀವನ, ಅವರ ಭದ್ರತೆ, ಅವರು ಮಾಡುವ ಕೆಲಸವನ್ನು ನೋಡಿದರೆ, ಕರುಣೆಗಿಂತ ಹೆಚ್ಚಾಗಿ ಅವರು ಕೆಲಸ ಎಷ್ಟು ಮಾಡಿದ್ದಾರೆ? ಯಾವ ರೀತಿ ಕೆಲಸ ಮಾಡುತ್ತಿದ್ದಾರೆ? ಎಂಬುದನ್ನು ನೋಡಿಯಾದರೂ ಅವರಿಗೆ ಎಲ್ಲಾ ರೀತಿಯ ಸವಲತ್ತುಗಳನ್ನು ಕೊಡಬೇಕು ಹೆಚ್ಚಿನ ಅನುಕೂಲ ಮಾಡಿಕೊಡಬೇಕು ಅದ್ಯಾವುದನ್ನೂ ಗಮನಿಸದೇ, ಅವರು ಇಷ್ಟು ದಿವಸ ಸತ್ಯಾಗ್ರಹ ಮಾಡುತ್ತಿದ್ದರೆ ಸರ್ಕಾರ ಮೌನವಾಗಿ ಸತ್ತ ಹಾಗೆ ಕುಳಿತರೆ ಅದು ಒಳ್ಳೆಯ ಸೂಚನೆ ಅಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಪೌರಕಾರ್ಮಿಕರ ಬಗ್ಗೆ ನಾನು ಮೊನ್ನೆ ಗುರುವಾರ ಪ್ರಶ್ನೆ ಕೇಳಿದ್ದೆ ಆಗ ಅದಕ್ಕೆ ಉತ್ತರ ಕೊಡುವ ಸಂದರ್ಭದಲ್ಲಿ ಬಹಳ ಸ್ಪಷ್ಟವಾಗಿ 'ಇವತ್ತು ಸಂಜೆಯೊಳಗೆ ನಾನು ಅವರ ಪದಾಧಿಕಾರಿಗಳ ಜೊತೆ ಚರ್ಚೆ ಮಾಡಿ ಸಮಸ್ಯೆ ಪರಿಹಾರ ಮಾಡಿಸುತ್ತೇನೆಂದು' ಸದನದಲ್ಲಿ ಉತ್ತರ ಕೊಟ್ಟು ಒಂದು ವಾರವಾಯಿತು ಇವತ್ತು ಪರಿಸ್ಥಿತಿ ಬಹಳ ಬಿಗಡಾಯಿಸಿದೆ ಮೊದಲ ಹಂತದಲ್ಲಿ ಅವರು ಕುಡಿಯುವ ನೀರನ್ನು ತಡೆಹಿಡಿಯುವುದಿಲ್ಲ ಬಿಡುತ್ತೇವೆ, ಬೇರೆ ಅಗತ್ಯ ಕೆಲಸಗಳನ್ನು ಮಾಡುತ್ತೇವೆಂದು ಹೇಳಿದರು ಇವರು ಯಾವಾಗ ಅವರ ಸಮಸ್ಯೆಯನ್ನು ಬಗೆಹರಿಸಲಿಲ್ಲವೋ,

ಈಗ ಅವರು ನೀರು ಬಿಡುವುದನ್ನು ಸಹ ನಿಲ್ಲಿಸಿಬಿಟ್ಟಿದ್ದಾರೆ ನೀರು ಕೂಡ ಬಿಡುತ್ತಿಲ್ಲ ಎಲ್ಲಾ ನಗರಗಳಲ್ಲಿ ಕುಡಿಯುವ ನೀರಿಗೆ ಹಾಹಾಕಾರ ಎದ್ದಿದೆ ಇದಕ್ಕೆ ಜವಾಬ್ದಾರರು ಯಾರು? ಈ ಸರ್ಕಾರಕ್ಕೆ ಜವಾಬ್ದಾರಿ ಇಲ್ಲವೇ? ನನಗೆ ಮೊನ್ನೆಯ ದಿವಸ ಉತ್ತರ ಕೊಟ್ಟವರು ಏನು ಮಾಡುತ್ತಿದ್ದಾರೆ?

ಶ್ರೀ ಸಿ ಟಿ ರವಿ :ಮಾನ್ಯ ಉಪಾಧ್ಯಕ್ಷರೆ, ಚಳುವಳಿ ಪ್ರಾರಂಭವಾಗಿ ಇವತ್ತಿಗೆ 8 ದಿವಸಗಳಾದವು Alternative ವ್ಯವಸ್ಥೆ ಮಾಡಲಿಕ್ಕೆ ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿ, ಅಧಿಕಾರ ಕೊಟ್ಟಿದ್ದೇವೆಂದು ಸರ್ಕಾರ ಹೇಳಿಕೆ ಕೊಟ್ಟಿದೆ ನಾನು ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರಿಗೆ ನಿನ್ನೆಯಿಂದ phone ಮಾಡುತ್ತಿದ್ದೇನೆ, phone switch off ಆಗಿದೆ ಅವರು ಮನೆಯಲ್ಲೂ ಇಲ್ಲ, office ನಲ್ಲೂ ಇಲ್ಲ ಕುಡಿಯುವ ನೀರಿಲ್ಲವೆಂದು ಜನರು ಬೀದಿಯಲ್ಲಿ ನಿಂತಿದ್ದಾರೆ ಅದಕ್ಕೆ ಏನು ವ್ಯವಸ್ಥೆ ಮಾಡುವುದು? ಯಾರದೋ ತಪ್ಪಿಗೆ ನಾವು ಆ ಜನರಿಗೆ ತಲೆ ಕೊಡಬೇಕು ಹೀಗೇನಾದರೂ ಇನ್ನೂ ಒಂದು ತಿಂಗಳು ಚಳುಚಳಿ ಮುಂದುವರೆದು, ಒಂದು ತಿಂಗಳು ಬಿಟ್ಟು ಚುನಾವಣೆ ಬಂದರೆ ನಾವು ನಾಮ ಹಾಕಿಕೊಳ್ಳಬೇಕಾಗುತ್ತದೆ ಹಾಗಾಗಿ ತಕ್ಷಣ ಕರೆದು ಸಮಸ್ಯೆ ಬಗೆಹರಿಸತಕ್ಕಂಥ ಕೆಲಸ ಮಾಡಬೇಕು ಜಿಲ್ಲಾಧಿಕಾರಿಗಳಿಗೆ ಜವಾಬ್ದಾರಿ ಕೊಟ್ಟಿದ್ದೇವೆಂದು ಹೇಳಿಕೆ ಕೊಟ್ಟರೆ ಸಾಲದು ಆ ಜಿಲ್ಲಾಧಿಕಾರಿ ಕೆಲಸ ಮಾಡಿಕೊಡುವ ಹಾಗೆ ನೋಡಿಕೊಳ್ಳಬೇಕಲ್ಲವೇ? ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರ phone not reachable ಎಂದು ಬರುತ್ತಿದೆ ಕೇಳಿದರೆ ಅವರು ಮನೆಯಲ್ಲೂ ಇಲ್ಲ, office ನಲ್ಲೂ ಇಲ್ಲ ನಮಗೆ ಅವರನ್ನು ಹುಡುಕುವುದೇ ಕಷ್ಟವಾಗಿದೆ

ಶ್ರೀ ಡಿ ಮಂಜುನಾಥ್ ನಮ್ಮ ಮನೆ ಮುಂದೆ ಬಂದು ಸತ್ಯಾಗ್ರಹ ಮಾಡುತ್ತಿದ್ದಾರೆ ನಾವೆಲ್ಲ ಇಲ್ಲಿಯೇ ಇದ್ದೇವೆ ಅಲ್ಲಿ ಹೋಗಿ ಕುಳಿತುಕೊಂಡು ಸಿಕ್ಕಾಬಟ್ಟೆ ಕೂಗುತ್ತಿದ್ದಾರೆ ಈಗ ಸದನದಲ್ಲಿ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಯಡಿಯೂರಪ್ಪನವರಿದ್ದಾರೆ ಅದಕ್ಕೆ ಏನಾದರೊಂದು ಇತಿಶ್ರೀ ಹಾಡಿಬಿಡಿ ಏನಾದರೂ ಮಾಡಿ ಅವರ ಮುಷ್ಕರ ನಿಲ್ಲುವ ಹಾಗೆ ಮಾಡಬೇಕು ಇಲ್ಲದೇ ಹೋದರೆ ನೀರು ನಿಲ್ಲಿಸಿದರೆ, ಕಸ ಗುಡಿಸದಿದ್ದರೆ ಇವತ್ತಿನ ಪರಿಸ್ಥಿತಿ ಏನಾಗಬಹುದು? ಅದೂ ಕೂಡ ನಮ್ಮ ಮನೆಯ ಮುಂದೆ ತೆಗೆದುಕೊಂಡು ಹೋಗಿ ಹಾಕುತ್ತಾರೆ ನಮ್ಮ ಮನೆ ಮುಂದೆ ಎಲ್ಲರೂ ಕುಳಿತುಬಿಟ್ಟಿದ್ದಾರೆ ಸಿಕ್ಕಾಬಟ್ಟೆ ನಮ್ಮನ್ನು ಟೀಕೆ ಮಾಡುತ್ತಾರೆ ಅದಕ್ಕೆ ಈಗ ದಯವಿಟ್ಟು ಒಂದು ಸ್ಪಷ್ಟವಾದ ಉತ್ತರವನ್ನು ಹೇಳಬೇಕು ಮಾನ್ಯ ಯಡಿಯೂರಪ್ಪನವರಿಗೆ ಮನವಿ ಮಾಡಿಕೊಳ್ಳುತ್ತಿದ್ದೇನೆ, ಇದಕ್ಕೇನಾದರೂ ಅತೀ ಶೀಘ್ರವಾಗಿ ತೀರ್ಮಾನ ತೆಗೆದುಕೊಳ್ಳಿ, ಇವತ್ತಿನ ದಿವಸ ಮುಷ್ಕರ ಮಾಡುತ್ತಿರುವವರು ಬಹಳಷ್ಟು ಎಲ್ಲ ಶಾಸಕರ ಮನೆ ಮುಂದೆ ಬಂದು ಕುಳಿತಿದ್ದಾರೆ ಇದನ್ನು ಹೇಗಾದರೂ ಮಾಡಿ ತಪ್ಪಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ

ಶ್ರೀ ಡಿ ಆರ್ ಪಾಟೀಲ್ ಮಾನ್ಯ ಉಪಾಧ್ಯಕ್ಷರೆ, ನಿನ್ನೆಯ ವರೆಗೆ ಕೇವಲ cleaning department ನವರು ಮಾತ್ರ strike ನಡೆಸುತ್ತಿದ್ದರು ನಿನ್ನೆಯಿಂದ ಕುಡಿಯುವ ನೀರನ್ನು ಸಹ ಬಂದ್ ಮಾಡಿದ್ದಾರೆ ಬೇರೆ ಯಾರೇ ಮುಷ್ಕರ ಮಾಡಿದರೂ ತಡೆದುಕೊಳ್ಳಬಹುದು ಆದರೆ, ಪೌರಕಾರ್ಮಿಕರು ಮುಷ್ಕರ ಮಾಡಿದರೆ, ಕುಡಿಯುವ ನೀರನ್ನು ಬಿಡುವವರು ಮುಷ್ಕರ ಮಾಡಿದರೆ ತಡೆದುಕೊಳ್ಳುವುದಕ್ಕಾಗುವುದಿಲ್ಲ ದಯವಿಟ್ಟು ಕೂಡಲೇ ಅವರನ್ನು ಕರೆದು ಅವರ ನ್ಯಾಯೋಜಿತ ಬೇಡಿಕೆಗಳನ್ನು ಈಡೇರಿಸಿ ನಾಳೆಯಿಂದ ಅವರು ಕೆಲಸಕ್ಕೆ ಹಾಜರಾಗುವ ಹಾಗೆ ಸರ್ಕಾರ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ

ಶ್ರೀ ಹೆಚ್ ಆಂಜನೇಯ ಮಾನ್ಯ ಉಪಾಧ್ಯಕ್ಷರೆ, ಪೌರಕಾರ್ಮಿಕರು ಮುಷ್ಕರವನ್ನು ಮಾಡುತ್ತಿದ್ದಾರೆ ಈಗಿನ ವಿರೋಧ ಪಕ್ಷದ ನಾಯಕರಾದಂಥ ಶ್ರೀಮಾನ್ ಧರ್ಮಸಿಂಗ್‌ರವರು ಕೂಡ ಹಿಂದೆ ಪೌರಾಡಳಿತ ಮಂತ್ರಿಗಳಾಗಿದ್ದರು ಆ ಸಂದರ್ಭದಲ್ಲಿ ಪೌರಕಾರ್ಮಿಕರ ನೇಮಕಾತಿಗಳಾದವು ಐ ಪಿ ಡಿ ಸಾಲಪ್ಪ ನವರ ವರದಿಯನ್ನು ಅಂಗೀಕರಿಸಿದರು ಅಂದಿನಿಂದ ಇಂದಿನವರೆಗೂ ಕೂಡ ಐ ಪಿ ಡಿ ಸಾಲಪ್ಪನವರ ವರದಿಯನ್ನು ಒಪ್ಪಿಕೊಂಡಿರುವ ಈ ಸರ್ಕಾರ ಜನಸಂಖ್ಯೆಗನುಗುಣವಾಗಿ ಮುಂದೆ ಬಂದಂಥ ಯಾವ ಸರ್ಕಾರಗಳೂ ಕೂಡ ಮಾಡಲಿಲ್ಲ ಜನಸಂಖ್ಯೆಗನುಗುಣವಾಗಿ ನೇಮಕಾತಿಯಾಗಿಲ್ಲ ಇವತ್ತು ಪೌರಕಾರ್ಮಿಕರನ್ನು ಯಾವ ರೀತಿ ಮಾಡುತ್ತಿದ್ದಾರೆಂದರೆ, ಎಲ್ಲಾ ನಗರಸಭೆಗಳಲ್ಲಿ ಜೀತಗಾರಿಕೆ ಆಗುತ್ತಿದೆ ಅವರ ಮೇಲೆ ಒಂದು ರೀತಿಯ ದಬ್ಬಾಳಿಕೆ ನಡೆಯುತ್ತಿದೆ ಇವತ್ತು ಸ್ವಚ್ಛತೆ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ಖಾಸಗಿ ವ್ಯಕ್ತಿಗಳು ಮಾಡುತ್ತಿದ್ದಾರೆ ಆ ನೌಕರರಿಗೆ ಯಾವುದೇ ರೀತಿಯ ಭದ್ರತೆ ಇಲ್ಲ ಇದೊಂದು ರೀತಿಯಲ್ಲಿ ಜೀತಗಾರಿಕೆಗೆ ಸರ್ಕಾರಗಳು ಉತ್ತೇಜನ ನೀಡಿದ ಹಾಗೆ ಇದೆ ಸ್ವಚ್ಛತೆ ಕೆಲಸವನ್ನು ಗುತ್ತಿಗೆ ಆಧಾರದ ಮೇಲೆ ಕೊಡುವುದನ್ನು ನಿಲ್ಲಿಸಬೇಕು ಎಷ್ಟು ಸಾವಿರ ಪೌರ ಕಾರ್ಮಿಕರ ಹುದ್ದೆಗಳು ಖಾಲಿ ಇವೆಯೋ ಅವೆಲ್ಲವನ್ನೂ ಭರ್ತಿ ಮಾಡಬೇಕು ಈಗ ಪೌರ ಕಾರ್ಮಿಕರ ಸಂಖ್ಯೆ ಕ್ಷೀಣಿಸಿದೆ ಪೌರ ಕಾರ್ಮಿಕರೇ ಇಲ್ಲ ಎಲ್ಲ ದಿನಗೂಲಿ ಕೆಲಸಗಾರರು ಈಗ ಪೌರಕಾರ್ಮಿಕರೆಂದರೆ ಎಲ್ಲ ಖಾಸಗಿ ವ್ಯಕ್ತಿಗಳ ಹತ್ತಿರ ಕೆಲಸ ಮಾಡುತ್ತಿರತಕ್ಕಂಥವರು ಎಲ್ಲಾ ನಗರಸಭೆಗಳಲ್ಲೂ ಕೂಡ ನಿವೃತಿ ಹೊಂದಿದ ನಂತರ ಪೌರ ಕಾರ್ಮಿಕರ ಮರು ನೇಮಕಾತಿ ಆಗುತ್ತಿಲ್ಲ ಇದರಿಂದ ಮಾನ್ಯ ಪೌರಾಡಳಿತ ಸಚಿವರಾಗಿರುವಂಥ ಶ್ರೀ ಆಲಂಗೂರು ಶ್ರೀನಿವಾಸ್‌ರವರು– ಇದೇನು ಬಹಳ ವರ್ಷಗಳ ಕಾಲ ಹರಿಜನರು, ಗಿರಿಜನರು, ಬಡವರು, ದುರ್ಬಲರು ಶೋಷಿತ ವರ್ಗದವರೇ ಕೆಲಸ ಮಾಡಿಕೊಂಡು ಬಂದಿರತಕ್ಕಂಥ ಈ ನೌಕರರೇನಿದ್ದಾರೆ, ಇವರ ಆರೋಗ್ಯವನ್ನು

ಉಪಾಧ್ಯಕ್ಷರು ಏನು ಮಾತನಾಡುತ್ತಿದ್ದೀರಿ? ಅವರು ಉತ್ತರ ಕೊಡಬೇಕೇ ಅಥವಾ ಬೇಡವೇ? ಸುಮ್ಮನೆ ಅದನ್ನು ಹೇಳಿಕೊಂಡು ಹೋಗುವುದರಲ್ಲಿ ಅರ್ಥ ಏನಿದೆ? ಅವರು ಹೌದು ಎನ್ನುತ್ತಾರೋ ಅಥವಾ ಇಲ್ಲ ಎಂದು ಹೇಳುತ್ತಾರೋ ಎನ್ನುವುದನ್ನು ಕೇಳೋಣ ಆ ಮೇಲೆ ಬೇಕಾದರೆ ಮಾತನಾಡಿ

ಶ್ರೀ ಹೆಚ್ ಆಂಜನೇಯ ಈಗ KCSR ಪ್ರಕಾರ ಸರ್ಕಾರಿ ನೌಕರರಿಗೆ ದೊರಕುವ ಎಲ್ಲಾ ಸವಲತ್ತುಗಳು ಕೂಡ ಪೌರ ಸೇವಾ ನೌಕರರಿಗೆ ದೊರಕಬೇಕು, ಪೌರಕಾರ್ಮಿಕರಿಗೆ ದೊರಕಬೇಕು ಅದು ನಮ್ಮ ಆಗ್ರಹವಾಗಿದೆ ದಯಮಾಡಿ ಸರ್ಕಾರ ಮುಷ್ಕರ ನಿರತ ನೌಕರರು ಮತ್ತು ಅವರ ಮುಖಂಡರನ್ನು ಕರೆದು ಸಮಸ್ಯೆ ಬಗೆಹರಿಸಬೇಕು, ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸಬೇಕೆಂದು ಈ ಮೂಲಕ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತೇನೆ

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಪೌರಾಡಳಿತ ಸಚಿವರಲ್ಲಿ ಕೇಳುವುದೇನೆಂದರೆ, ಹಣಕಾಸಿನ ಬಗ್ಗೆ ಹೇಳುತ್ತೇನೆ ಪೌರಕಾರ್ಮಿಕರಿಗೆ ಈಗಾಗಲೇ ತಾವು 12th Finance ನಲ್ಲಿ ಮತ್ತು second SFC ಯಲ್ಲಿ ಈಗಾಗಲೇ ನೌಕರಸ್ಥರಿಗೆ ಹಣ ಕೊಡುತ್ತಿದ್ದೀರಿ ಖಾಯಂ ಮಾಡಲಿಕ್ಕೆ ನಿಮಗೆ ಅಂಥ ತೊಂದರೆ ಏನು? ಇಲ್ಲಿ ಅಂಥ ಹೆಚ್ಚಿನ ಹಣಕಾಸಿನ ತೊಂದರೆ ಇಲ್ಲ ನಿಮಗೆ ಮನಸ್ಸಿಲ್ಲ, ರಾಜಕೀಯ ಇಚ್ಛಾಶಕ್ತಿ ಇಲ್ಲವೆಂದು ನನಗನ್ನಿಸುತ್ತದೆ Second Finance Commission recommendation ಪ್ರಕಾರ ಅವರಿಗೆ ಹಣ ಕೊಡುತ್ತಿದ್ದೀರಿ 12th Finance recommendation ಪ್ರಕಾರ ಅವರಿಗೆ ಹಣ ಕೊಡುತ್ತಿದ್ದೀರಿ ಖಾಯಂ ಮಾಡಲಿಕ್ಕೆ ಸ್ವಲ್ಪ ಹೆಚ್ಚಿನ ಬೇಕಾಗಬಹುದು ಅದನ್ನು ಮಾಡಬಾರದೇಕೆ? ಇದೇನೋ ಬಹಳಷ್ಟು ತೊಂದರೆ ಇಲ್ಲ ಅದಕ್ಕೆ ಬೇಗನೇ ಇವರನ್ನು ಖಾಯಂಗೊಳಿಸಿ ಈ ಮುಷ್ಕರವನ್ನು ಅವರು ಹಿಂತೆಗೆದುಕೊಳ್ಳುವ ಹಾಗೆ ಮಾಡಬೇಕು ಅದಕ್ಕೆ ಸ್ಪಷ್ಟವಾದ ಉತ್ತರ ಕೊಡಬೇಕು ಇದಕ್ಕೆ ಹಣಕಾಸಿನ ತೊಂದರೆ ಇದ್ದರೆ ಮಾನ್ಯ ಉಪಮುಖ್ಯಮಂತ್ರಿಗಳು ಹೇಳಲಿ ಹೇಳಬೇಕಾಗುತ್ತದೆ ಹೇಳದೇ ಅವರು ಸುಮ್ಮನೆ ಮೌನವಹಿಸಿದರೆ ಏನು ಮಾಡುವುದಕ್ಕಾಗುತ್ತದೆ?

(ಗೊಂದಲ)

ಶ್ರೀ ಸಿ ಟಿ ರವಿ ಮಾನ್ಯ ಉಪಾಧ್ಯಕ್ಷರೆ, ರಾಜಕೀಯ ಇಚ್ಛಾಶಕ್ತಿ ಇದ್ದವರು ಅಭಿಪ್ರಾಯ ವ್ಯಕ್ತಪಡಿಸಿರುವುದು ಅಷ್ಟರಲ್ಲಿಯೇ ಇದೆ ನೀವೆಲ್ಲ ಮಾಡಿದ್ದರೆ ಈ problems ಬರುತ್ತಲೇ ಇರಲಿಲ್ಲ

(ಗೊಂದಲ)

ಶ್ರೀ ಕೆ ಶ್ರೀನಿವಾಸ ಗೌಡ ಪಟ್ಟಣಗಳಲ್ಲಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ ಇವತ್ತು strike ಏನು ಮಾಡುತ್ತಿದ್ದಾರೆ ಅವರು panel boardಗಳನ್ನು ಸಹ ಬಿಚ್ಚಿಕೊಂಡು ಹೋಗಿದ್ದಾರೆ ಇದುವರೆಗೂ ಕೂಡ ಗುಂಪಾಗಿ ನಮ್ಮ ಮನೆ ಹತ್ತಿರ ಜನ ಬಂದು ನೀರಿಲ್ಲ, ನೀರಿಲ್ಲ ಎಂದು ಹೇಳುತ್ತಿದ್ದಾರೆ ಅದು ಅವರಿಗೂ ಗೊತ್ತಿದೆ ಯಾವ ರೈಲು ಬಿಟ್ಟರೋ ಗೊತ್ತಿಲ್ಲ ಕೋಲಾರ ರೈಲ್ವೆ ಲೈನ್ ಅನ್ನು board-gauge ಮಾಡದೇ ಇನ್ನೂ meter gauge ನಲ್ಲಿಯೇ ಇದೆ ಇನ್ನು board-gauge ಮಾಡಿಲ್ಲ, ಅಲ್ಲಿ ಇವರು ರೈಲು ಬಿಟ್ಟರು ಈ ದಿನಗೂಲಿ ನೌಕರರಿಗೆ ಸಂಬಂಧಪಟ್ಟ ಕಡತವನ್ನು finance ಗೆ ಕಳುಹಿಸಿದ್ದೇವೆ, ಅದು ಬರುತ್ತಿದ್ದ ಹಾಗೆ ನಾನೆಲ್ಲ ಮಾಡಿಬಿಡುತ್ತೇನೆಂದು ಹೇಳಿದರು ಶ್ರೀರಾಮರೆಡ್ಡಿಯವರು 'ಹೀಗೆಲ್ಲ ಆಗಿದೆಯಲ್ಲಾ ನಗರಸಭೆಗಳಲ್ಲಿ ಮುಷ್ಕರ ಮಾಡುತ್ತಿದ್ದಾರೆ,' ಎಂದು ಹೇಳಿದಾಗ, ಆವತ್ತು ಈ ಮನೆಯಲ್ಲಿ ಈ ನಿಮ್ಮ ಉತ್ತರ ಬಂದಿದ್ದು ನಾವೆಲ್ಲ, 'ಎಲ್ಲ ಆಗಿಹೋಗಿದೆ, ಇದನ್ನೆಲ್ಲ ಮಂತ್ರಿಗಳು ಹೇಳಿಬಿಟ್ಟಿದ್ದಾರೆ ಎಂದು ನಾನು ಮುಷ್ಕರ ನಿರತರನ್ನು ಕರೆದು ಹೇಳಿದರೆ, ಇವರ ರೈಲು ಅಲ್ಲಿಯೇ ನಿಂತುಹೋಗಿದೆ ಅದು ಸರಿಯಾಗಿ ಮುಂದಕ್ಕೆ ಹೋಗಿಲ್ಲ

ಶ್ರೀ ಜಿ ವಿ ಶ್ರೀರಾಮರೆಡ್ಡಿ . ರೈಲಿಗೆ diesel ಎಲ್ಲ ಮುಗಿದುಬಿಟ್ಟಿದೆ ಅದಕ್ಕಾಗಿ ಅದು ಅಲ್ಲಿಯೇ ನಿಂತುಬಿಟ್ಟಿದೆ

ಶ್ರೀ ಕೆ ಶ್ರೀನಿವಾಸಗೌಡ · ಈ ವಿಧಾನಸಭೆಯಲ್ಲಿ ಈ ತರಹ ಹೇಳಿಕೆ ಕೊಡವಂಥ ಅಗತ್ಯ ನಿಮಗೇನಿತ್ತು? ಆಗಲಿಲ್ಲವೆಂದರೆ ಇಂಥಿಂಥದ್ದು ಆಗಲಿಲ್ಲವೆಂದು ಹೇಳಬೇಕು ಎಲ್ಲ ಓದಿದಿರಿ ಅಲ್ಲಿಗೂ 'ಇದೆಲ್ಲ ಏಕ್ರೀ ಹೇಳಬೇಕೆಂದು' ಅಧ್ಯಕ್ಷರು ಹೇಳಿದರು ಇಲ್ಲ, ಹೇಳಬೇಕೆಂದು ಅದೂ ಕೂಡ ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡಿದ ವಿಷಯಕ್ಕೆ ಉತ್ತರ ಕೊಟ್ಟರು ಇಡೀ ರಾಜ್ಯದ ಪಟ್ಟಣಗಳಲ್ಲಿ ಕುಡಿಯುವ ನೀರಿಗೆ ಕಷ್ಟವಾಗಿದೆ ಇವತ್ತು ನೀವು ದಿನಗೂಲಿ ನೌಕರರನ್ನಯ ಖಾಯಂ ಮಾಡುತ್ತಿರೋ, ಏನು ಮಾಡುತ್ತೀರೋ, ನೀರು ಕೊಡುವಂಥ ಕೆಲಸ ಅರ್ಜೆಂಟಾಗಿ ಮಾಡಿ, ದಿನಗೂಲಿ ನೌಕರರನ್ನೂ ಸಹ ಖಾಯಂ ಮಾಡುವಂಥ ಕೆಲಸ ದಯವಿಟ್ಟು ಮಾಡಿ, ಮತ್ತೆ ರೈಲು ಬಿಡದೇ ಮಾಡಿ ಎಂದು ಹೇಳಿದೆ

ಉಪಾಧ್ಯಕ್ಷರು : ರೈಲೇನು ಬಿಡುವುದಿಲ್ಲ ಎಲ್ಲಾ ರೆಡಿ ಮಾಡಿಕೊಂಡಿದ್ದಾರೆ, ಉತ್ತರ ಹೇಳಿ

ಶ್ರೀ ಆರ್ ಶ್ರೀನಿವಾಸ್ (ಪೌರಾಡಳಿತ ಸಚಿವರು) ಬಹುಶಃ ರೈಲು ಬಿಟ್ಟು ಬಿಟ್ಟು ರೂಢಿಯಾಗಿರುತಕ್ಕಂಥವರಿಗೆ ರೈಲು ಬಿಡುವುದು ಗೊತ್ತಿರುತ್ತದೆ ಬಹುಶಃ ಆ ಕಡೆ ಇರತಕ್ಕಂಥವರಿಗೆ ರೈಲು ಬಿಡುವುದು ಬಹಳ ಜಾಸ್ತಿಯಾಗಿದೆ ಆದರೆ, ನಾವು ರೈಲು ಬಿಡುವ ಜನವಲ್ಲ ನಾವು ರೈಲು ಬಿಡುವ ಮಾತಲ್ಲ

ಡಾ ಎಂ ಸಿ ಸುಧಾಕರ್ ನೀವು ರೈಲು ಬಿಡುವುದಿಲ್ಲ ರೀಲ್ ಬಿಡುತ್ತೀರಿ ಅಷ್ಟೆ

ಶ್ರೀ ಆರ್ ಶ್ರೀನಿವಾಸ್ ಇಷ್ಟು ವರ್ಷಗಳ ಕಾಲ ಇವರೆಲ್ಲ ನೀತಿ ಹೇಳತಕ್ಕಂಥ ಜನ ಯಾರು ಕೂಡ ಇವರನ್ನು ಖಾಯಂ ಮಾಡುವುದಾಗಲಿ, ಅಲ್ಲ ಇವರಿಗೆ ಸರಿಯಾದ ರೀತಿಯಲ್ಲಿ ಸಂಬಳ ಕೊಡುವುದಕ್ಕೆ ಕೂಡ ಸುಮಾರು 50 ವರ್ಷಗಳಾದರೂ ಆ ಕಾನೂನು ತಂದಿರಲಿಲ್ಲ ಮೊನ್ನೆ ತಾನೇ ಹೇಳಿದ ಹಾಗೆ, ಮಾನ್ಯ ಅಧ್ಯಕ್ಷರೆ, ನಿಮ್ಮ ಸ್ಥಾನದಲ್ಲಿ ಮಾನ್ಯ ರಮೇಶ್ ಕುಮಾರ್ ರವರು ಕುಳಿತ್ತಿದ್ದರು ನಾವು ಮೊಟ್ಟಮೊದಲಿಗೆ ಅವರಿಗೆ ಖಾಯಂ ಆಗಿ ಪ್ರತಿ ತಿಂಗಳು ಸಂಬಳ ಕೊಡುವ ಹಾಗೆ ಮಾಡಿರುವ ಕೀರ್ತಿ ನಮ್ಮ ಸರ್ಕಾರದ್ದು ಎಂದು ಹೇಳುವುದಕ್ಕೆ ಇಚ್ಚಿಸುತ್ತೇನೆ ಇದುವರೆವಿಗೂ ಯಾರೂ ಮಾಡಿಲ್ಲ

ಶ್ರೀ ಕೆ ಶ್ರೀನಿವಾಸಗೌಡ ಆಗ ಪಟೇಲ್‌ರ ಸರ್ಕಾರ ಇತ್ತು ಆಗ ನಾವು ಕೂಡ ಅಲ್ಲಿಯೇ ಇದ್ದೆವು

ಶ್ರೀ ಆರ್ ಶ್ರೀನಿವಾಸ್ . ಇಷ್ಟು ವರ್ಷ ನಿಮ್ಮ ಸರ್ಕಾರವೇ ಇತ್ತು ಆ ಅವಧಿಯಲ್ಲಿ ಒಬ್ಬರನ್ನು ನೀವು ಖಾಯಂ ಮಾಡುವುದಕ್ಕೆ ಆಗಲಿಲ್ಲ ಇಷ್ಟೆಲ್ಲಾ ಹೇಳತಕ್ಕಂಥ ಜನ, ಅವರೂ ಸತತವಾಗಿ ಈ ಬೇಡಿಕೆಗಳನ್ನಿಟ್ಟುಕೊಂಡು ಹೋರಾಟ ಮಾಡಿಕೊಂಡೇ ಬಂದಿದ್ದರು ಇಷ್ಟಾದರೂ ಅವರ ಬಗ್ಗೆ ಚಿಂತನೆ ಮಾಡುತ್ತಿರಲಿಲ್ಲ, ಅವರಿಗೆ ಯಾವ ವೇತನವೂ ಇಲ್ಲ ಆದರೆ ಇವತ್ತಿನ ದಿನ ಅವರ ಬೇಡಿಕೆ ಏನು ಇದೆ ಆ ಎಲ್ಲಾವನ್ನೂ ಕೂಡ ನಾವು ಪೂರ್ತಿಗೊಳಿಸಿದ್ದೇವೆ ದಿನಗೂಲಿ ನೌಕರರ ಬಗ್ಗೆ ಸಭೆ ಕರೆದಿಲ್ಲವೆಂದು ಹೇಳಿದರು ನಾನು ಹಾಗೂ ಸಂಬಂಧಪಟ್ಟ ಡೈರೆಕ್ಟರ್‌ರವರು, ಅಧಿಕಾರಿಗಳು 5ನೇ ತಾರೀಖಿನ ದಿವಸ ಒಂದು ಸಭೆಯನ್ನು ಕರೆದಿದ್ದೇವೆ ನಾನು 6ನೇ ತಾರೀಖಿನಂದು ಸಭೆ ಕರೆದಿದ್ದೇನೆ ಇಡೀ ರಾಜ್ಯಾದ್ಯಂತವಿರುವ ಎಲ್ಲಾ ಪದಾಧಿಕಾರಿಗಳ ಜೊತೆಗೆ ಏನೇನು ಆಗಬೇಕೆನ್ನುವುದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿದ್ದೇವೆ ಅವರಿಗೂ ಕೂಡ ಇವರಲ್ಲಿ ಕೆಲವು ನ್ಯೂನತೆಗಳಿವೆಂದು ಹೇಳಿದ್ದೇವೆ, ನನಗೆ ಸ್ವಲ್ಪ ಎರಡು ತಿಂಗಳು ಅವಕಾಶ ಕೊಡಿ ಎಂದು ಹೇಳಿದ್ದೇವೆ ಮುಷ್ಕರ ನಡೆಯುತ್ತಿರುವಾಗಲೂ ಕೂಡ 18 ನೇ ತಾರೀಖಿನ ದಿವಸವೂ ಅವರೂ ಕೂಡ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿದ್ದೇನೆ ಅವರದ್ದು ಒಂದೇ ಒಂದು ಸಮಸ್ಯೆಯಿರುವುದು, ದಿನಗೂಲಿ ನೌಕರರನ್ನು ಖಾಯಂ ಮಾಡುವುದು ಇದೊಂದೇ ಪ್ರಶ್ನೆ ಉಳಿದವೆಲ್ಲವನ್ನು ಕೊಡುವ ವ್ಯವಸ್ಥೆಯಾಗಿದೆ ಇದು ಯಾವ ರೀತಿಯಲ್ಲಿ ಮಾಡಬೇಕೆಂದುಯೋಚಿಸಿದಾಗ ಇದರಲ್ಲಿ ಸ್ವಲ್ಪ ನ್ಯೂನತೆ ಇದೆ ಈಗ ದಿನಗೂಲಿ ನೌಕರರು ಎಂದು ಹೇಳಿದರೆ, ಸುಪ್ರೀಂ ಕೋರ್ಟ್ ಕೊಟ್ಟಿರುವ ವ್ಯವಸ್ಥೆಯಲ್ಲಿ ಹತ್ತು ವರ್ಷಗಳ ಕಾಲ ಸತತವಾಗಿ ಏನು ಸೇವೆಯನ್ನು ಸಲ್ಲಿಸಿರುತ್ತಾರೆ, ಅವರನ್ನು

ಖಾಯಂಗೊಳಿಸಬೇಕೆನ್ನುವ ರೀತಿಯಲ್ಲಿ ಈಗಾಗಲೇ ಅವರನ್ನು ಖಾಯಂಗೊಳಿಸಲಾಗಿದೆ ಮಿಕ್ಕವರನ್ನು ಖಾಯಂಗೊಳಿಸತಕ್ಕಂಥ ವ್ಯವಸ್ಥೆಗೆ, ಅವರೇನು ಬೇರೆಯವರನ್ನು ಖಾಯಂ ಮಾಡಬೇಡಿ ಎಂದು ಹೇಳಿಲ್ಲ ಅವರನ್ನು ಖಾಯಂ ಮಾಡಬೇಕಾದರೆ ಎಲ್ಲಾ ಅಂಶಗಳನ್ನು ಪರಿಶೀಲನೆ ತೆಗೆದುಕೊಂಡು, ಕ್ಯಾಬಿನೇಟ್ ಸಬ್ ಕಮಿಟಿನಲ್ಲಿ ಚರ್ಚಿಸುತ್ತೇವೆ 6000 ಜನ ನೌಕರರು ಇದ್ದಾರೆ ಇಷ್ಟು ಜನರನ್ನು ಒಂದೇ ಸಲ ಮಾಡುವುದಕ್ಕೆ ಒಂದು ಪದ್ಧತಿ ಬೇಕಾಗುತ್ತದೆ ಹಣಕಾಸಿನ ವ್ಯವಸ್ಥೆಯನ್ನು ತೆಗೆದುಕೊಂಡು, ಸ್ಯಾಂಕ್ಷನ್ಡ್ ಪೋಸ್ಟ್ ಇದೆ, ನಾನು ಇಲ್ಲವೆಂದು ಹೇಳಲಿಲ್ಲ ಆದರೂ ಕೂಡ ಇದಕ್ಕೆ ವ್ಯವಸ್ಥಿತವಾಗಿ ಯಾವ ರೀತಿ ಮಾಡಬೇಕು, ಯಾವ ರೀತಿಯಾಗಿ ಯಾರ್ಯಾರನ್ನು ಆಯ್ಕೆ ಮಾಡಬೇಕು ಇದರಲ್ಲಿ ಇನ್ನೊಂದು ರೋಸ್ಟರ್ ಸಿಸ್ಟಂ ಇದೆ ಕೆಲವು ಸಂದರ್ಭಗಳಲ್ಲಿ ಈ ರೋಸ್ಟರ್ ಸಿಸ್ಟಂನ್ನು ಅಳವಡಿಸಿಕೊಳ್ಳಬೇಕಾಗುತ್ತದೆ ನೀವು ಹೇಳವುದನ್ನು ನಾನು ಒಪ್ಪಿಕೊಳ್ಳುತ್ತೇನೆ ಬಹುತೇಕವಾಗಿ ಇದರಲ್ಲಿ ಎಲ್ಲಾ ನೌಕರರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರು ಇದ್ದರೂ ಕೆಲವು ಸಂದರ್ಭದಲ್ಲಿ ಬೇರೆ ಜನಾಂಗದವರನ್ನು ಕೂಡ ಗಣನೆಗೆ ತೆಗೆದುಕೊಳ್ಳಬೇಕಾಗುತ್ತದೆ ಈ ಎಲ್ಲಾ ನ್ಯೂನತೆಗಳಿಂದಾಗಿ ನಾನು ಅವರನ್ನು ಕೇಳಿಕೊಳ್ಳುತ್ತಿದ್ದೇನೆ ಎರಡು ತಿಂಗಳ ಕಾಲಾವಕಾಶ ಮಾಡಿಕೊಡಿ ಇದನ್ನು ಪರಿಗಣಿಸಿ ಖಂಡಿತವಾಗಿ ನಿಮ್ಮೆಲ್ಲರನ್ನೂ ಖಾಯಂ ಮಾಡುವ ವ್ಯವಸ್ಥೆಯನ್ನು ಮಾಡುತ್ತೇವೆಂದು, ನಾನು ಪದಾದಿಕಾರಿಗಳಿಗೆ ಹೇಳಿದ್ದೇನೆ ಅವರು ಯಾವುದೋ ಒಂದು ಉದ್ದೇಶವಿಟ್ಟುಕೊಂಡು, ಯಾವುದೋ ಹಿನ್ನೆಲೆಯಲ್ಲಿ ಅಧವಾ ಈ ಸರ್ಕಾರಕ್ಕೇನು ಒಳ್ಳೆಯ ಹೆಸರು ಬರುತ್ತಿದೆ, ಎಲ್ಲಿ ನೋಡಿದರೂ ಕೂಡ ಕೋಟಿಗಟ್ಟಲೆ ಹಣ ಕೊಟ್ಟುಬಿಟ್ಟಿದ್ದಾರೆ, ಎಲ್ಲಿಗೆ ಹೋದರೂ ಅಭಿವೃದ್ಧಿ ಕೆಲಸ ನಡೆಯುತ್ತಿದೆ, ಇದನ್ನೆಲ್ಲ ನೋಡಿ ಈ ವ್ಯವಸ್ಥೆಯನ್ನು ಮಾಡುತ್ತಿದ್ದಾರೆಯೇ ಹೊರತು ಬೇರೇನೂ ಇಲ್ಲ ನೀವು ಯಾವತ್ತಾದರೂ ನಿಮ್ಮ ಮುನಿಸಿಪಾಲಿಟಿಗಳಲ್ಲಿ ಇಷ್ಟೊಂದು ಹಣ ಬರುವುದನ್ನು ನೋಡಿದಿರಾ? 20 ರಿಂದ 50 ಲಕ್ಷ ರೂಪಾಯಿ ಬರುತ್ತಿತ್ತು ಈಗ 2–3 ಕೋಟಿ ಬರುತ್ತಿದೆ ಗೌರವಾನ್ವಿತ ಸದಸ್ಯರಾದ ಶ್ರೀನಿವಾಸ ಗೌಡರು ರೈಲು ಬಿಡುತ್ತಿದ್ದಾರೆಂದು ಹೇಳಿದರು ಆರು ಕೋಟಿ ಬಂದಿದೆ, ಯಾವಾತ್ತಾದರೂ ಆರು ಕೋಟಿ ರೂಪಾಯಿ ಬಂದಿರುವುದನ್ನು ಇವರು ನೋಡಿದ್ದಾರಾ? ರೈಲು ಬಿಡುವ ಜನ ಆರು ಕೋಟಿ ನೋಡಿದ್ದಾರಾ? ಈ ರೈಲು ಬಿಟ್ಟು ಆ ಜನರಿಗೆ ಅನ್ಯಾಯ ಮಾಡಿದವರು ಅವರು

ಶ್ರೀ ಕೆ ಶ್ರೀನಿವಾಸ ಗೌಡ : ಈಗ ಇನ್ನೊಂದು ರೈಲು ಬಿಡುತ್ತಿದ್ದಾರೆಂದು ಹೇಳಬೇಕಾಗುತ್ತದೆ

(ಗೊಂದಲ)

ಶ್ರೀ ಎನ್ ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು) . ಮಂತ್ರಿಗಳೇ ಇದು ಸಮರ್ಪಕವಾದ ಉತ್ತರವಲ್ಲ ಈಗಾಗಲೇ ನಮ್ಮ ಎಲ್ಲಾ ಹಿರಿಯ ಶಾಸಕರು ಹೇಳಿದ್ದಾರೆ ಎಲ್ಲಾ ರಾಜ್ಯದಲ್ಲಿ ಇವತ್ತಿನ ದಿವಸ ಸ್ವಚ್ಛೆಯಾಗುತ್ತಿಲ್ಲ, ನೀರು ಸಿಗುತ್ತಿಲ್ಲ, ನಿಮ್ಮ port Folio ಅಂಧದ್ದು ಎರಡು ತಿಂಗಳಾದ ಮೇಲೆ ಎಂದು ಹೇಳುತ್ತೀರಿ ಆ ವಿಚಾರ ಬೇರೆ ನೀವೇನು ಮೊನ್ನೆ ಶುಕ್ರವಾರ ನಾನು ಎತ್ತಿದ ಪ್ರಶ್ನೆಗೆ ಉತ್ತರ ಹೇಳಿದಿರಿ, ಈಗ ಅದನ್ನೇ ರಿಪೀಟ್ ಮಾಡುತ್ತಿದ್ದೀರಿ ಈ ಮಧ್ಯೆದಲ್ಲಿ ಎರಡು ದಿನಗಳ ಕಾಲ ಏನು ಮಾಡಿದ್ದೀರಿ? ಮಾತುಕತೆ ಮಾಡಿದ್ದೀರಾ? ಮಾಡತಕ್ಕಂಧ ವ್ಯವಸ್ಥೆ ಮಾಡಿದ್ದೀರಾ? ಅರ್ಧದಷ್ಟನ್ನಾದರೂ ನೀವು ತೆಗೆದುಕೊಳ್ಳಬೇಕಲ್ಲವೇ? ಎಲ್ಲಿ ಕ್ಲಿಯರ್ ವೇಕೆನ್ಸಿ ಇದೆ you have to take decision ಇದಕ್ಕೇನು ಕ್ಯಾಬಿನೆಟ್ ಅಪ್ರೂವಲ್ ಬೇಕಾಗಿಲ್ಲ ನಾವು ಹಿಂದೆ ಮಾಡಿದ್ದೇವೆ ಇದಕ್ಕೆ ನೀವು top priority ಕೊಟ್ಟು war-footing ರೀತಿಯಲ್ಲಿ ಕೆಲಸ ಮಾಡುವ ರೀತಿಯಲ್ಲಿ you have to take decision ಸಂಪುಟದ ಸಭೆಯಾಯಿತು, ಅಲ್ಲಿ ನೀವು ಪ್ರಸ್ತಾಪಿಸಲಿಲ್ಲ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡಲಿಲ್ಲ ಇದು ಮಹತ್ವದ ವಿಚಾರ, ಎಲ್ಲಾ ಕಡೆಗೆ ಪೌರ ಕಾರ್ಮಿಕರು ಕೆಲಸ ಮಾಡುತ್ತಿಲ್ಲ, ಹೀಗಾಗಿ ಸ್ವಚ್ಛತೆಯಾಗಿತ್ತಿಲ್ಲ, ಇವರು ಬಗ್ಗುವ ರೀತಿಯಲ್ಲಿ ಕಾಣುತ್ತಿಲ್ಲ, ಇವರಿಗೆ ನಾವು ರಿಯಾಯಿತಿ ಕೊಡಬೇಕೆಂದು ಹೇಳಿ ನೀವು ನಿರ್ಧಾರ ತೆಗೆದುಕೊಳ್ಳಬೇಕು ನೀವು ನಿನ್ನೆ ಏನು ಹೇಳಿದಿರಿ ಅದೇ ರೀತಿಯಾಗಿ ಇವತ್ತು ರಿಪೀಟ್ ಮಾಡುತ್ತಿದ್ದೀರಿ ಇದರಲ್ಲಿ ನಾವೇನು ರಾಜಕಾರಣ ಮಾಡತಕ್ಕಂಧದಿಲ್ಲ ನಾವು ಇದರಲ್ಲಿ ರಾಜಕೀಯ ಮಾಡುವುದಿಲ್ಲ ಇವತ್ತು ನಿಮ್ಮ ಶ್ರೀನಿವಾಸ ಗೌಡರವರೇನಾದರೂ ರಾಜಕೀಯ ಮಾಡಬಹುದು, ಅವರು ನಿಮ್ಮ ಜಿಲ್ಲೆಗೆ ಸಂಬಂಧಪಟ್ಟವರು, ನೀವು ಅವರನ್ನು ಕೇಳಿ ನಾವು ರಾಜ್ಯದ ಹಿತದೃಷ್ಟಿಯಿಂದ ನಮ್ಮ ಕೆಲಸವನ್ನು ನಾವು ಮಾಡುತ್ತಿದ್ದೇವೆ That is your duty ನಿಮಗೆ ಜವಾಬ್ದಾರಿ ಇದೆ, ಇದರಲ್ಲಿ ನೀವು ಆ ಕೆಲಸ ಮಾಡುತ್ತಿಲ್ಲವೆನ್ನುವ ಅಪಾದನೆ ಮಾಡಬೇಕಾಗುತ್ತದೆ, ಸರಿಯಾದ ರೀತಿಯಲ್ಲಿ ಉತ್ತರ ಕೊಡಿ ಇವತ್ತು ಸರ್ಕಾರ ಇದರ ಬಗ್ಗೆ ಎನಾದರೂ ಕ್ರಮ ತೆಗೆದುಕೊಂಡು, ಎಲ್ಲರೂ ತಮ್ಮ ತಮ್ಮ ಡ್ಯೂಟಿ ಮೇಲೆ ಹಾಜರಾಗುವಂತೆ ಆದೇಶ ಕೊಡಬೇಕು

ಶ್ರೀ ಆರ್ ಡಿ ಪಾಟೀಲ್ ತಾವೀಗ ಮುನಿಸಿಪಾಲಿಟಿಗೆ ಸಾಕಷ್ಟು ಹಣ ಬರುತ್ತದೆ, ಇದಕ್ಕೆ ನಮ್ಮ ಸರ್ಕಾರ ಕಾರಣ ಎನ್ನುವ ಮಾತನ್ನು ಹೇಳಿದಿರಿ ಹಿಂದೆ ಕಾಂಗ್ರೆಸ್ ಸರ್ಕಾರವಿದ್ದಾಗ Second State Finance Commission ಅನ್ನು ನೇಮಿಸಿತು ಅದರ ಶಿಫಾರಸ್ಸುಗಳನ್ನು ಧರ್ಮಸಿಂಗ್ ರವರ ಸರ್ಕಾರ ಒಪ್ಪಿ, ಸಿದ್ದರಾಮಯ್ಯ ನವರು ಹಣಕಾಸಿನ ಸಚಿವರಾಗಿದ್ದಾಗ ಅದನ್ನು ಚಾಲೂ ಮಾಡಿದರು ನಿಮ್ಮವರು ಅದನ್ನು ಮುಂದುವರಿಸಿಕೊಂಡು ಹೋಗುತ್ತಿದ್ದೀರಿ ಆ ಶಿಫಾರಸ್ಸು ಪ್ರಕಾರ ದುಡ್ಡು ಬರುತ್ತದೆ

ಶ್ರೀ ಜಿ ಎ ಶ್ರೀರಾಮರೆಡ್ಡಿ ಮಾನ್ಯ ಮಂತ್ರಿಗಳು ಹೇಳಿದಂಥ ಒಂದಂಶವನ್ನು ನಾವು ಕೂಡ ಒಪ್ಪುತ್ತೇವೆ ದಿನಗೂಲಿ ನೌಕರರನ್ನು ಖಾಯಂ ಮಾಡಬೇಕಾದರೆ, ಕೆಲವು ಕಾನೂನಿನ ಸಮಸ್ಯೆಗಳಿವೆ ಇವುಗಳನ್ನು ಪರಿಹರಿಸಬೇಕಾಗುತ್ತದೆಂದು ಅವರೇನು ಹೇಳುತ್ತಿದ್ದಾರೆ, ಅದನ್ನು ಒಪ್ಪಬೇಕಾಗುತ್ತದೆ ಆದರೆ ಪ್ರಶ್ನೆ ಇರುವುದು ಏನೆಂದರೆ, ಅವರನ್ನು ಇವರು ಕರೆದು ಅದರ ಬಗ್ಗೆ ಮನದಟ್ಟು ಮಾಡಿಕೊಡಬೇಕಲ್ಲವೇ ? ಉಳಿದ ಬೇಡಿಕೆಗಳನ್ನು ಪರಿಹಾರ ಮಾಡುತ್ತೇವೆ, ಇದು ಒಂದಕ್ಕೆ ಕಾನೂನು ತೊಡಕು ಇದೆ, ಇದನ್ನು ಪರಿಹಾರ ಮಾಡಬೇಕಾದರೆ ಸ್ವಲ್ಪ ಕಾಲಾವಕಾಶಬೇಕೆಂದು ಮನವರಿಕೆ ಮಾಡಬೇಕಲ್ಲವೆ? ಖಾಯಂ ಮಾಡುವ ಸಂದರ್ಭದಲ್ಲಿ, ನಿಂತ ಕಡೆ ಖಾಯಂ ಮಾಡುವುದಕ್ಕೆ ಯಾವುದೇ ಸರ್ಕಾರಕ್ಕೆ ಆಗುವುದಿಲ್ಲ ನೀವು ಇದ್ದರೂ ಆಗುವುದಿಲ್ಲ ಯಾರು ಇದ್ದರೂ ಆಗುವುದಿಲ್ಲ ನಿಂತ ಕಡೆ ಇವರನ್ನು ಖಾಯಂ ಎಂದು ಆರ್ಡರ್ ಹೊರಡಿಸಲಿಕ್ಕೆ ಆಗುವುದಿಲ್ಲ ಅದನ್ನು ಎಲ್ಲರೂ ಒಪ್ಪುತ್ತಾರೆ ಆದರೆ, ಇಲ್ಲಿ ಪ್ರಶ್ನೆಯಿರುವುದು ನೀವು ಅವರನ್ನು ಕರೆದು ಮಾತುಕತೆಗೆ ಕೂಡಿಸಿ ಅವರ ಜೊತೆಯಲ್ಲಿ ಮಾತನಾಡಬೇಕಲ್ಲವೇ?

ಶ್ರೀ ವಾಟಾಳ್ ನಾಗರಾಜ್ ಈ ವಿಚಾರದಲ್ಲಿ ಮಾನ್ಯ ಹಣಕಾಸಿನ ಸಚಿವರು ಮೌನವಾಗಿರುವುದು ಬೇಡ ಇದು ಬಹಳ ದೊಡ್ಡ ಗಂಭೀರವಾದ ಪರಿಸ್ಥಿತಿ ಹಣಕಾಸಿನ ಸಚಿವರು ಇದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕೆಂದು ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ

ಶ್ರೀ ಬಿ ಎಸ್ ಯಡಿಯೂರಪ್ಪ(ಉಪ ಮುಖ್ಯಮಂತ್ರಿಗಳು) . ಆಡಳಿತ ನಡೆಸಿದಂಥ ಸ್ನೇಹಿತರು ಈಗ ಅಲ್ಲಿ ಕುಳಿತಿದ್ದಾರೆ ಸದಸ್ಯರು ಮಾತನಾಡುವ ಕಾಲದಲ್ಲಿ ರಾಜಕೀಯ ಇಚ್ಚಾಶಕ್ತಿಯಿಲ್ಲವೆಂದು ಹೇಳಿದರು ಇದು ರಾಜಕೀಯ ಭಾಷೆ ನೀವು ಹೇಳಿ ಪರವಾಗಿಲ್ಲ ನಮಗೆ ರಾಜಕೀಯ ಇಷ್ಟಾಶಕ್ತಿಯಿದ್ದುದ್ದರಿಂದಲೇ ಅವರು ಕೊಟ್ಟಂಥ ಸುಮಾರು 14 ಬೇಡಿಕೆಗಳಲ್ಲಿ 8 ಬೇಡಿಕೆಗಳನ್ನು ಪೂರ್ತಿಗೊಳಿಸಿದ್ದೇವೆ ಎರಡನೆಯದು 15–20 ದಿವಸಗಳ ಈಚೆಗೆ ಡೈಲಿವೇಜಸ್ ನಲ್ಲಿದ್ದವರನ್ನು ಖಾಯಂ ಮಾಡುವುದಕ್ಕೆ ಆ ಚೌಕಟ್ಟಿನಲ್ಲಿದ್ದಂಥ ಸುಮಾರು 1226 ಜನರನ್ನು ಖಾಯಂಗೊಳಿಸಿ 15 ದಿವಸಗಳ ಹಿಂದೆ ಆರ್ಡರ್ ಇಶ್ಯೂ ಮಾಡಿದ್ದೇವೆ ಇನ್ನು 4051 ಜನ ಇದ್ದಾರೆ ಇಲ್ಲಿ ಸುಪ್ರೀಂಕೋರ್ಟಿನ ಪ್ರಶ್ನೆ ಬರುತ್ತದೆ ಗೌರವಾನ್ವಿತ ಸದಸ್ಯರು ಹೇಳಿದಂತೆ, ಆ ಚೌಕಟ್ಟಿನಲ್ಲಿ ಎಲ್ಲವನ್ನು ನಮ್ಮ ಕಣ್ಣುಮುಂದೆ ಇಟ್ಟುಕೊಂಡು, ರೋಸ್ಟರ್, ಮತ್ತೊಂದು, ಇದರ ಆಧಾರದ ಮೇಲೆ ಮಾಡಬೇಕಾಗುತ್ತದೆ ಇಲ್ಲಾಂದ್ರೆ ನೀವೇನೆ ನಾಳೆ ಯಾವ ಆಧಾರದ ಮೇಲೆ ಮಾಡಿದಿರಿ ಎಂದು ಕೇಳುತ್ತೀರಿ ಇಲ್ಲಿ ಒಬ್ಬರನ್ನೇ ಮಾಡುವ ಪ್ರಶ್ನೆಯಲ್ಲ ತಮಗೆ ಗೊತ್ತಿರುವ ಹಾಗೆ ನಾನು ಬಾಯಿ ಮುಚ್ಚಿಕೊಂಡು ಕುಳಿತಿಲ್ಲ ಸಂಬಂಧಪಟ್ಟ ಸಚಿವರು ಇದ್ದಾರೆ ಅವರು

ಮಾತನಾಡುತ್ತಾರೆಂದು ನಾನು ಕುಳಿತಿದ್ದೆ ನೀವೇ ಕುಳಿತಿರಬೇಕು, ಹೆಚ್ಚಿಗೆ ಮಾತನಾಡಬಾರದು ಎಂದು ಹೇಳಿದಿರಿ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಬೇರೆ ವಿಚಾರಕ್ಕೆ ನೀವು ಸ್ವಲ್ಪ ಸುಮ್ಮನಿರಿ ಎಂದು ಹೇಳಿದೆವು ಯಡಿಯೂರಪ್ಪನವರು ಮುಖ್ಯಮಂತ್ರಿಯಾಗುವವರೆಗೆ ಸುಮ್ಮನಿರಿ ಎಂದು ಹೇಳಿದೆವು

ಶ್ರೀ ವಾಟಾಳ್ ನಾಗರಾಜ್ . ಯಡಿಯೂರಪ್ಪನವರು ಮೌನಕ್ಕೆ ಶರಣರಾಗಿರುವುದು ನಮ್ಮಿಂದಲ್ಲ ನೀವು ಮಾತನಾಡಬೇಡಿ ಎಂದು ನಾವು ಯಾವತ್ತು ಹೇಳಿಲ್ಲ ನೀವು ಯಾವುದೋ ಉದ್ದೇಶಕ್ಕೆ ಮೌನವಾಗಿದಿರಿ, ಸಂತೋಷ, ನೀವು ಮೌನವಾಗಿರಿ ಎಂದು ಹೇಳಿದೆವು ಅದು ಬಿಟ್ಟರೆ ಬೇರೆ ಮಾತಿಲ್ಲ

ಶ್ರೀ ಬಿ ಎಸ್ ಯಡಿಯೂರಪ್ಪ (ಹಣಕಾಸು ಇಲಾಖೆ ಸಚಿವರು) : ಮಾನ್ಯ ಉಪಾಧ್ಯಕ್ಷರೆ, 5ನೇ ವೇತನ ಆಯೋಗದ ಶಿಫಾರಸ್ಸುಗಳು ಈ ಪೌರಕಾರ್ಮಿಕರಿಗೂ ಕೂಡ ಅನ್ವಯ ವಾಗುತ್ತದೆ ಸರ್ಕಾರ ಇದನ್ನು ಈಗಾಗಲೇ ಅಕ್ಸೆಪ್ಟ್ ಮಾಡಿಕೊಂಡಿದೆ ಮತ್ತೆ SFC ಗ್ರಾಂಟ್‌ನಲ್ಲಿ 25 ಕೋಟಿ ರೂಪಾಯಿಗಳನ್ನು ಸಹ ತೆಗೆದಿಟ್ಟಿದ್ದೇವೆ ಮತ್ತೆ ಮಾನ್ಯ ಹಿರಿಯ ಸದಸ್ಯರುಗಳಿಗೆ ಈ ಸಂದರ್ಭದಲ್ಲಿ ಭರವಸೆ ಕೊಡುವುದಕ್ಕೆ ಇಷ್ಟಪಡುವುದೇನೆಂದರೆ, ಪೌರಕಾರ್ಮಿಕರ ಮುಖಂಡರನ್ನು ಕರೆಸಿ ಸಂಬಂಧಪಟ್ಟ ಸಚಿವರ ಜೊತೆ ಮಾತನಾಡುತ್ತೇವೆ ಇವತ್ತಿನ ದಿವಸ ಕುಡಿಯುವ ನೀರಿನ ಸಮಸ್ಯೆ ಮತ್ತು ಸ್ವಚ್ಚತೆಯ ಸಮಸ್ಯೆ ಸಾರ್ವಜನಿಕರಲ್ಲಿ ಉಂಟಾಗಿದೆ ಅವರು ಸರ್ಕಾರದ ಗಮನಕ್ಕೆ ತರುವುದಕ್ಕೋಸ್ಕರ ಬಹಳ ವರ್ಷಗಳಿಂದ ನ್ಯಾಯುತವಾದ ಸತ್ಯಾಗ್ರಹವನ್ನು ಮಾಡಿಕೊಂಡು ಬರುತ್ತಿದ್ದಾರೆ ಇದು ಸರ್ವೆಸಾಮಾನ್ಯವಾಗಿರತಕ್ಕಂಥದ್ದಾಗಿದೆ ಇವತ್ತಿನ ದಿವಸ ಹಗಲು-ರಾತ್ರಿ ದುಡಿಯುತ್ತಿರುವ ಈ ನೌಕರರು ಕೇವಲ 4000 ಸಂಬಳವನ್ನು ತೆಗೆದುಕೊಳ್ಳುತ್ತಾರಷ್ಟೆ ಈಗ ಬಾಕಿ 4558 ಜನ ನೌಕರರು ಉಳಿದುಕೊಂಡಿದ್ದಾರೆ ಸುಪ್ರೀಂ ಕೋರ್ಟ್ ನೀಡಿರುವ ಆದೇಶ ಮತ್ತು ರೋಸ್ಟರ್ ಪದ್ಧತಿಯನ್ನು ನೋಡಿಕೊಂಡು ವಿವರವಾದಂಥ ಮಾಹಿತಿಗಳನ್ನು ಪಡೆಯುತ್ತಿದ್ದೇವೆ ಆದ್ದರಿಂದ ಈ ಮನೆಯ ಮೂಲಕ ಪೌರಕಾರ್ಮಿಕರಲ್ಲಿ ವಿನಂತಿ ಮಾಡುವುದೇನೆಂದರೆ, ಸಂಬಂಧಪಟ್ಟಂಥ ಸಚಿವರು ಅವರ ಜೊತೆ ಮಾತನಾಡುತ್ತಾರೆಂದು ಮತ್ತು ಕಾನೂನು ಚೌಕಟ್ಟಿನೊಳಗೆ ಅವರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ನಾವು ಬದ್ಧರಿದ್ದೇವೆ ಆದ್ದರಿಂದ, ನಾಗರೀಕರ ಹಿತದೃಷ್ಟಿಯಿಂದ ಪೌರಕಾರ್ಮಿಕರು ಸತ್ಯಾಗ್ರಹವನ್ನು ಕೈಬಿಟ್ಟು ಕೆಲಸಕ್ಕೆ ಹೋಗಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ ಅವರ ಜೊತೆ ಚರ್ಚೆಮಾಡುವಂಥ ಕಾಲದಲ್ಲಿ ಪ್ರತಿಪಕ್ಷದ ನಾಯಕರುಗಳನ್ನು ನಾನು ಕರೆಸುತ್ತೇನೆ ಮತ್ತೆ ಮಾನ್ಯ ಸಚಿವರೂ ಕೂಡ ಇರುತ್ತಾರೆ. ಆ ಸಂದರ್ಭದಲ್ಲಿ

ನೀವೂ ಕೂಡ ಸಲಹೆಗಳನ್ನು ಕೊಡಿ ಈ ಜನರ ಸಮಸ್ಯೆಗಳನ್ನು ಬಗೆಹರಿಸಿ ಅವರು ನೆಮ್ಮದಿಯಿಂದ ನಮ್ಮ ಉದ್ದೇಶವಾಗಿದೆ ಅನೇಕ ಜ್ವಲಂತ ಸಮಸ್ಯೆಗಳು ಅವತ್ತಿನ ದಿವಸ ಬಗೆಹರಿಸುವುದಕ್ಕೆ ಆಗಲಿಲ್ಲ ಆಗ ರಾಜಕೀಯ ಇಚ್ಚಾಶಕ್ತಿ ಇರಲಿಲ್ಲ ಈಗ ನಾವು ಒಂದೊಂದೇ ಬಗೆಹರಿಸಿಕೊಂಡು ಬಂದಿದ್ದೇವೆ ದಿನಗೂಲಿ ನೌಕರರ ಬಗ್ಗೆ ಕೂಡ ಪರಿಶೀಲನೆ ಮಾಡುತ್ತಿದ್ದೇವೆ ಮುಂದಿನ ದಿವಸಗಳಲ್ಲಿ ಇದರ ಬಗ್ಗೆ ಪರಿಶೀಲನೆ ಮಾಡಿ ಸುಪ್ರೀಂ ಕೋರ್ಟ್‌ನ ಆದೇಶ ಚೌಕಟ್ಟಿನೊಳಗೆ ನಿಮ್ಮನ್ನೆಲ್ಲಾ ಕರೆದು ಮಾತನಾಡುತ್ತೇವೆ ಇದರ ಬಗ್ಗೆ ನಾವು open mindನಲ್ಲಿದ್ದೇವೆ ಆದ್ದರಿಂದ, ದಯಮಾಡಿ ಪೌರಕಾರ್ಮಿಕರು ಸಹಕರಿಸಬೇಕೆಂದು ತಮ್ಮ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ

ಶ್ರೀ ಎನ್ ಧರ್ಮಸಿಂಗ್ 50 ವರ್ಷಗಳಿಂದ ಕಾಂಗ್ರೆಸ್ ಪಕ್ಷ ಏನು ಮಾಡಿತ್ತೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳುತ್ತಿರುತ್ತಾರೆ, ಮತ್ತೆ ತಾವೂ ಕೂಡ ಇದನ್ನೆ ಹೇಳಿಕೊಂಡು ಬರುತ್ತಿದ್ದೀರಿ ನಮ್ಮ ಕಾಲದಲ್ಲಿ 5ನೇ ವೇತನ ಆಯೋಗವನ್ನು ರಚನೆ ಮಾಡಿ ಮಾನ್ಯ ಗೋಪಾಲರೆಡ್ಡಿಯವರನ್ನು ಇದಕ್ಕೆ ಅಧ್ಯಕ್ಷರನ್ನಾಗಿ ಮಾಡಲಾಗಿತ್ತು ಅವರು ವರದಿ ಕೂಡ ಕೊಟ್ಟಿದ್ದಾರೆ ವರದಿ ಕೊಟ್ಟ ಮೇಲೆ ಮೊನ್ನೆ ದಿವಸದ ಬಜೆಟ್‌ನಲ್ಲಿ 561 ಕೋಟಿ ರೂಪಾಯಿಗಳನ್ನು ಇಡಲಾಗಿದೆ ಎಂದು ತಾವು ಹೇಳಿದ್ದೀರಿ ನಾನು ಇದರ ಬಗ್ಗೆ ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿಲ್ಲ ಅಂತಿಮವಾಗಿ ಎಲ್ಲೆಲ್ಲಿ ಹಣವನ್ನು ಒದಗಿಸಿದ್ದೀರಿ ಎಂಬುದು ಮತ್ತು ಇದಕ್ಕೆ ಯಾವ ರೀತಿಯಾಗಿ resource mobilization ಮಾಡಿದ್ದೀರಿ ಎನತಕ್ಕಂಥದು ಬಹಳ ಘಹನವಾದಂಥ ವಿಚಾರವಾಗಿದೆ ಇದರ ಬಗ್ಗೆ ಡಿಮಾಂಡ್ ಮೇಲೆ ಚರ್ಚೆಯಾಗುವಂಥ ಸಂದರ್ಭದಲ್ಲಿ ಮಾತನಾಡುತ್ತೇವೆ ಆದರೆ, ನಾವು ಈಗ ಕೇಳುವುದೇನೆಂದರೆ, ಪೌರ ಕಾರ್ಮಿಕರು ಎಷ್ಟು ದಿವಸದಿಂದ ಕೆಲಸ ಮಾಡುತ್ತಿದ್ದಾರೆ? ಈ ರಾಜ್ಯದ ಜನತೆಗೆ ಎಲ್ಲ ಗೊತ್ತಿದೆ ಎಷ್ಟು ದಿವಸಗಳಿಂದ ನಾವು ಸಮಾಧಾನವಾಗಿ ಇರುವುದಕ್ಕೆ ಸಾಧ್ಯ? ಈ ರೀತಿಯಾದಾಗ ನಾವು ಕೇಳಬಾರದೇ?

ಶ್ರೀ ಬಿ ಎಸ್ ಯಡಿಯೂರಪ್ಪ : ನೀವು ಇತ್ತಕಡೆ ಇದ್ದರೆ ಏನು ಮಾಡುತ್ತಿದ್ದೇರೆಂಬುದನ್ನು ಹೇಳಿ, ಅದನ್ನು ನಾವು ಮಾಡುವುದಕ್ಕೆ ಸಿದ್ದರಿದ್ದೇವೆ

ಶ್ರೀ ಎನ್ ಧರ್ಮಸಿಂಗ್ ನಾವು ಮಾಡಿದ್ದೇವೆ

ಶ್ರೀ ಬಿ ಎಸ್ ಯಡಿಯುರಪ್ಪ ತಾವು ಎಲ್ಲಿ ಮಾಡಿದ್ದೀರಿ?

ಶ್ರೀ ಎನ್ ಧರ್ಮಸಿಂಗ್ : ಈ ಪೌರಕಾರ್ಮಿಕರ ಬಗ್ಗೆ ಈಗಾಗಲೇ ಮಾಡಿದ್ದಂಥ ಸಾಲಪ್ಪನವರ ಸಮಿತಿ ಏನಾಗಿದೆ? ಆಗ ಮಾನ್ಯ ಬಸವಲಿಂಗಪ್ಪನವರು ಮಾಡಿದ್ದರು ಮತ್ತೆ ಮಾನ್ಯ ದೇವರಾಜು ಅರಸುರವರ ಕಾಲದಲ್ಲಿ ಮತ್ತು ಮಾನ್ಯ ಗುಂಡುರಾವ್‌ರವರ ಕಾಲದಲ್ಲಿಯೂ ಕೂಡ ಮಾಡಲಾಗಿತ್ತು ಎಷ್ಟು ದಿವಸದಿಂದ ಪೌರಕಾರ್ಮಿಕರು ಮುಷ್ಕರ ಮಾಡುತ್ತಿದ್ದಾರೆ

ಇವರಿಗೋಸ್ಕರ ಎಷ್ಟು ಹಣ ವೆಚ್ಚವಾಗುತ್ತದೆ? ನೀವು ಅವರಿಗೆ ಕೊಡತಕ್ಕಂಥ ಹಣ ಎಷ್ಟು? ನೀವು ಈ ಕೆಲಸ ಮಾಡಿದರೆ ನಿಮಗೆ ಒಳ್ಳೆಯ ಹೆಸರು ಬರುತ್ತದೆ ನಮಗೇನು ಬರುವುದಿಲ್ಲ ನಾವೆಲ್ಲಾ ಜನಪ್ರತಿನಿಧಿಗಳಾಗಿದ್ದೇವೆ ಇವತ್ತಿನ ದಿವಸ ನಮ್ಮಗಳ ಮತಕ್ಷೇತ್ರದಲ್ಲಿ ಬಹಳಷ್ಟು ಸಮಸ್ಯೆಗಳಾಗುತ್ತಿವೆ ಕುಡಿಯುವ ನೀರಿನ ಮತ್ತು ಸ್ವಚ್ಛತಾ ಸಮಸ್ಯೆಗಳ ಬಗ್ಗೆ ಈಗಾಗಲೇ ಮಾನ್ಯ ಡಿ ಆರ್ ಪಾಟೀಲ್‌ರವರು ಹೇಳಿದ್ದಾರೆ ಇವತ್ತಿನ ದಿವಸ ಪೌರಕಾರ್ಮಿಕರು ಮಾಡುತ್ತಿರುವ ಮುಷ್ಕರ ಬಹಳ ಮಹತ್ವವಾದದು ಇವರ ಬಗ್ಗೆ ಸಂಪುಟದಲ್ಲಿ ಸರ್ಕಾರ ಏನು ಚರ್ಚೆಮಾಡಿದೆ ಎನ್ನತಕ್ಕಂಥದು ನಮಗೆ ಗೊತ್ತಾಗಿದೆ ಆದ್ದರಿಂದ, ಪೌರಕಾರ್ಮಿಕರ ಇಲಾಖೆಯ ಖಾತೆಯನ್ನು ಹೊಂದಿರುವ ಮಾನ್ಯ ಶ್ರೀನಿವಾಸ್ ರವರ ನೆರವಿಗೆ ತಾವು ಬರಬೇಕು ಇದರ ಬಗ್ಗೆ ಒಂದು ತೀರ್ಮಾನ ತೆಗೆದುಕೊಳ್ಳುವುದಕ್ಕೆ 2 ತಿಂಗಳು ಬೇಕಾಗಿಲ್ಲ ಇದರ ಬಗ್ಗೆ ಸರ್ಕಾರ ನಿಖರವಾದಂಥ ಒಂದು ಉತ್ತರವನ್ನು ಕೊಡಬೇಕು ತಾವು ಉಪಮುಖ್ಯ ಮಂತ್ರಿ ಹಾಗೂ ಹಣಕಾಸಿನ ಸಚಿವರಾಗಿದ್ದೀರಿ ಆದ್ದರಿಂದ, ಇವರ ಬಗ್ಗೆ ಏನು ಮಾಡಲಾಗುತ್ತದೆಂದು ಸ್ಪಷ್ಟವಾದ ಉತ್ತರವನ್ನು ತಾವು ಈ ಸದನಕ್ಕೆ ಮತ್ತು ರಾಜ್ಯದ ಜನತೆಗೆ ಕೊಡಬೇಕು

ಶ್ರೀ ಜಿ ವಿ ಶ್ರೀರಾಮರೆಡ್ಡಿ ಇದರ ಬಗ್ಗೆ ತೀರ್ಮಾನ ಮಾಡಲು ಕ್ಯಾಬಿನೆಟ್ ಸಬ್ ಕಮಿಟಿಯನ್ನು ಮಾಡಿದ್ದೀರಿ ಇದಕ್ಕೆ ಕ್ಯಾಬಿನೆಟ್ ದರ್ಜೆ ಸಚಿವರನ್ನು ಅಧ್ಯಕ್ಷರನ್ನಾಗಿ ಕೂಡ ಮಾಡಿದ್ದೀರಿ ಈ ಕ್ಯಾಬಿನೆಟ್ ಸಬ್ ಕಮಿಟಿ ಸಭೆ ಸೇರಿತ್ತೆ? ಮತ್ತೆ ಇದರ ಬಗ್ಗೆ ಚರ್ಚೆ ನಡೆಸಿ ಕ್ಯಾಬಿನೆಟ್ ಸಬ್ ಕಮಿಟಿ ವರದಿಯನ್ನು ಕೊಟ್ಟಿದೆಯೇ? ಏಕೆಂದರೆ ಪತ್ರಿಕೆಯಲ್ಲಿ ಒಂದು ಸುದ್ದಿಯನ್ನು ಓದಿದೆ ಅದೇನೆಂದರೆ, ಕ್ಯಾಬಿನೆಟ್ ಕಮಿಟಿಯ ಅಧ್ಯಕ್ಷರಾಗಿರತಕ್ಕಂಥ ಮಾನ್ಯ ರೇವಣ್ಣನವರನ್ನು ಅವರ ನೌಕರರ ಪ್ರತಿನಿಧಿಗಳು ಭೇಟಿ ಮಾಡಿ ಕೇಳಿದಂಥ ಸಂದರ್ಭದಲ್ಲಿ, ನನಗೂ ಆ ಸಮಸ್ಯೆಗೂ ಸಂಬಂಧವಿಲ್ಲ, ಮತ್ತೆ ಆ ಕಮಿಟಿ ಸಭೆ ಸೇರಿಲ್ಲವೆಂದು ಹೇಳಿದ್ದಾರೆ ಈ ವಿಷಯ ಪತ್ರಿಕೆಯಲ್ಲಿ ವರದಿ ಕೂಡ ಆಗಿದೆ ಇದು ನಿಜವೋ ಅಥವಾ ಸುಳ್ಳೋ ಎನ್ನತಕ್ಕಂಥದು ನನಗೆ ಗೊತ್ತಿಲ್ಲ ಕ್ಯಾಬಿನೆಟ್ ಸಬ್ ಕಮಿಟಿಯನ್ನು ರಚನೆ ಮಾಡಿ ಅವರು ವರದಿ ಕೊಟ್ಟಿದ್ದಾರೆಯೋ ಅಥವಾ ಇಲ್ಲವೋ ಎನ್ನತಕ್ಕಂಥದನ್ನು ತಾವು ಇದುವರೆಗೆ ಹೇಳಲಿಲ್ಲ ಒಂದು ವೇಳೆ ಕ್ಯಾಬಿನೆಟ್ ಸಬ್ ಕಮಿಟಿಯವರು ವರದಿ ಕೊಡದಿದ್ದರೆ ಅದಕ್ಕೆ ನೀವೇ ಜವಾಬ್ದಾರಿಯಾಗುತ್ತೀರಿ ತಕ್ಷಣ ಸಮಸ್ಯೆ ಪರಿಹಾರವಾಗುವುದಕ್ಕೆ ನಾನು ಈಗ ತಮಗೆ ಹೇಳುವುದೇನೆಂದರೆ, ಕ್ಯಾಬಿನೆಟ್ ಸಬ್ ಕಮಿಟಿಯ ವರದಿಯನ್ನು ತರಿಸಿಕೊಳ್ಳತ್ತೀರೋ ಅಥವಾ ಆ ಕಮಿಟಿಯನ್ನು ರಿವೈಸ್ ಮಾಡಿ ಮತ್ತೆ ಹೊಸ ಕಮಿಟಿಯನ್ನು ಮಾಡತಕ್ಕಂಥದು ನಿಮಗೆ ಬಿಟ್ಟಂಥ ವಿಚಾರ ಆದರೆ, ತಕ್ಷಣಕ್ಕೆ ಸಮಸ್ಯೆ ಪರಿಹಾರವಾಗಬೇಕಾದರೆ, ತಾವು ಈ ಸದನಕ್ಕೆ ಒಂದು ಆಶ್ವಾಸನೆಯನ್ನು

ಕೊಡಬೇಕಾಗುತ್ತದೆ, ಅದೇನೆಂದರೆ, ಈಗ ಇರತಕ್ಕಂಥ ಸಮಸ್ಯೆಗಳನ್ನು ಮತ್ತು ಕಾನೂನು ತೊಡಕುಗಳನ್ನು ಪರಿಹಾರ ಮಾಡಿಕೊಂಡು ನಾವು ಇಷ್ಟು ದಿವಸದಲ್ಲಿ ನಿಮ್ಮೆಲ್ಲರನ್ನೂ ಖಾಯಂ ಮಾಡುತ್ತೇವೆಂಬ ಒಂದು ಸ್ಪಷ್ಟವಾದಂಥ ಭರವಸೆಯನ್ನು ಅವರಿಗೆ ಈ ಸದನದ ಮುಖಾಂತರ ಕೊಡಬೇಕು ಅದನ್ನು ಬಿಟ್ಟು ನಾವು ಪರಿಶೀಲನೆ ಮಾಡುತ್ತೇವೆ, ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಿದರೆ ಅವರು ಒಪ್ಪುವುದಿಲ್ಲ ಕಾನೂನು ತೊಡಕುಗಳು ಈ ರೀತಿಯಾಗಿವೆ, ಅವುಗಳನ್ನು ಪರಿಹಾರ ಮಾಡುವುದಕ್ಕೆ ಇಷ್ಟು ದಿವಸ ಸಮಯ ಬೇಕಾಗುತ್ತದೆ ಮತ್ತೆ ಇಷ್ಟು ದಿವಸದೊಳಗೆ ಗ್ಯಾರಂಟಿಯಾಗಿ ನಿಮ್ಮನ್ನೆಲ್ಲಾ ಖಾಯಂ ಮಾಡುತ್ತೇವೆಂಬ ಆಶ್ವಾಸನೆಯನ್ನು ಕೊಡಿ ಕೇವಲ ಬರೀ ಮಾತಿನಲ್ಲಿ ಹೇಳಿದರೆ ಆಗುವುದಿಲ್ಲ

ಶ್ರೀ ಎಸ್ ರಾಜೇಂದ್ರನ್ . ಮಾನ್ಯ ಉಪಾಧ್ಯಕ್ಷರೆ, ಬೋಗಸ್ ನೇಮಕಾತಿ ಆಗುತ್ತದೆಂದು ಸರ್ಕಾರ ಇದರ ಬಗ್ಗೆ ಯೋಚನೆ ಮಾಡುತ್ತಿದೆ ಎಂದು ನಮಗೆಲ್ಲರಿಗೂ ಸಹ ಗೊತ್ತಿದೆ ಅಧ್ಯಕ್ಷರ ಮುಖಾಂತರ 10 ಜನ ಉಪಾಧ್ಯಕ್ಷರ ಮುಖಾಂತರ 20 ಬೋಗಸ್ ನೇಮಕಾತಿಯಾಗಬಹುದು ಮತ್ತೆ ಕಾನೂನು ಬಿಟ್ಟು ನೇಮಕಾತಿಯಾಗುತ್ತದೆಂದು ಇದನ್ನು ಮಾಡುವುದಕ್ಕೆ ನಿಮಗೆ ಕಷ್ಟವಾಗಿದೆ ಆದ್ದರಿಂದ, ನೀವು ಅವರ ಮುಖಂಡರನ್ನು ಕರೆದು ನಾವು ಈ ರೀತಿಯಾದ ಕಾನೂನಿನಡಿಯಲ್ಲಿ ನೇಮಕಾತಿ ಮಾಡುತ್ತೇವೆ, ನಿಮ್ಮ ಬೋಗಸ್ ನೇಮಕಾತಿಗಳನ್ನು ನಾವು ಒಪ್ಪಿಕೊಳ್ಳುವುದಿಲ್ಲವೆಂದು ನೇರವಾಗಿ ಹೇಳಿ ಇಲ್ಲದಿದ್ದರೆ, 10 ಜನ ಇದ್ದರೆ ಅವರು 30 ಜನರಿದ್ದೇವೆಂದು ಹೇಳುತ್ತಾರೆ ಅಧ್ಯಕ್ಷರ ಕಡೆಯಿಂದ 20, ಉಪಾಧ್ಯಕ್ಷರ ಕಡೆಯಿಂದ 25 ಜನರಿಗೆ ಶಿಫಾರಸ್ಸು ಬಂದರೆ ಹೇಗೆ ಮಾಡುವುದಕ್ಕೆ ಬರುತ್ತದೆ? ಈ ರೀತಿಯಾಗಿ ಮಾಡುವುದಕ್ಕೆ ಬರುವುದಿಲ್ಲ ಕಾನೂನು ಪ್ರಕಾರ ಈ ರೀತಿಯಾಗಿ ಮಾಡುತ್ತೇವೆಂದು ಮತ್ತೆ ತಾವು ಈ ರೀತಿಯಾಗಿ ಹೋದರೆ ನಾವು ಒಪ್ಪಿಕೊಳ್ಳುವುದಿಲ್ಲವೆಂದು ನೇರವಾಗಿ ಹೇಳಿ

ಶ್ರೀ ಹೆಚ್ ಆಂಜನೇಯ ಮಾನ್ಯ ಉಪಾಧ್ಯಕ್ಷರೆ, ಪೌರಕಾರ್ಮಿಕರನ್ನು ಖಾಯಂ ಮಾಡಿಕೊಳ್ಳುವ ಕೆಲಸ ಆಗಬೇಕು 25 ವರ್ಷಗಳಿಂದ ಪೌರಕಾರ್ಮಿಕರ ಹುದ್ದಗೆ ನೇಮಕಾತಿ ಮಾಡಿಕೊಂಡಿಲ್ಲ ಆದ್ದರಿಂದ, ಈಗ ಎಷ್ಟು ಹುದ್ದೆಗಳು ಖಾಲಿ ಇವೆಯೋ ಅಷ್ಟು ಹುದ್ದೆಗಳನ್ನು ತುಂಬತಕ್ಕಂಥ ಕೆಲಸ ಆಗಬೇಕು

ಶ್ರೀ ಬಿ ಎಸ್ ಯಡಿಯೂರಪ್ಪ ಮಾನ್ಯ ಉಪಾಧ್ಯಕ್ಷರೆ, ಇಲ್ಲಿ 2–3 ಪ್ರಶ್ನೆಗಳಿವೆ ಸುಮಾರು 16 ರಿಂದ 17 ಸಾವಿರ ದಿನಗೂಲಿ ಮೇಲೆ ಕೆಲಸ ಮಾಡುತ್ತಿರುವ ನೌಕರರಿಗೆ ಸಂಬಂಧಪಟ್ಟಂಥ ವಿಷಯವಾಗಿದೆ ಸುಪ್ರೀಂ ಕೋರ್ಟ್‌ನ ತೀರ್ಮಾನದ ಪ್ರಕಾರ ನಾವು ರೆಗ್ಯುಲರೈಸ್ ಮಾಡಬೇಕಾಗುತ್ತದೆ

ಸುಪ್ರೀಂ ಕೋರ್ಟ್ ತೀರ್ಮಾನದ ಮಾಡುವ ಸಂದರ್ಭದಲ್ಲಿ ಕೆಲವು ನಿಬಂಧನೆಗಳನ್ನು ಹಾಕಿದೆ ಅದ್ಯಾವುದೆಂದರೆ, ರೋಸ್ಟರ್‌ನ್ನು ನೋಡಬೇಕು As on the date of appointment ನಿಂದ vacancy ಡಿಟೇಲ್ಸ್ ಇರಬೇಕೆಂದು ಹೇಳಿರುವಂಥ ವಿಚಾರಗಳು ಮುಖ್ಯಮಂತ್ರಿಯಾಗಿದಂಥ ಸನ್ಮಾನ್ಯ ಧರ್ಮಸಿಂಗ್‌ರವರಿಗೆ ಇದೆಲ್ಲಾ ಗೊತ್ತಿದೆ ಇಲ್ಲಿ ಕೇವಲ ಪೌರಕಾರ್ಮಿಕರೊಬ್ಬರು ಇಲ್ಲ, ಎಲ್ಲಾ ವರ್ಗದ ನೌಕರರು ಇದ್ದಾರೆ ಬಾಕಿ ಉಳಿದಿರತಕ್ಕಂಥ 4051 ಜನ ಪೌರಕಾರ್ಮಿರನ್ನು 24 ಗಂಟೆಯೊಳಗೆ ಖಾಯಂ ಮಾಡುವುದಕ್ಕೆ ನಾವು ಸಿದ್ದರಿದ್ದೇವೆ ಆದರೆ, ಈ ಸಮಸ್ಯೆ ಸುಮಾರು 16 ರಿಂದ 17 ಸಾವಿರ ಜನರಿಗೆ ಸಂಬಂಧಪಟ್ಟಿರತಕ್ಕಂಥದು ಕ್ಯಾಬಿನೆಟ್ ಸಬ್ ಕಮಿಟಿ ಮಾಡಿರತಕ್ಕಂಥದು ನಿಜ ಸದರಿ ಕಮಿಟಿ ಸಭೆ ಸೇರಿ ಅದನ್ನು ಬಗೆಹರಿಸುವಂಥ ಪ್ರಯತ್ನವನ್ನು ಮಾಡುತ್ತೇವೆಂದು ಈ ಮನೆಯಲ್ಲಿ ನಾನು ಭರವಸೆ ಕೊಟ್ಟಿದೆ ಹಣಕಾಸಿನ ಪ್ರಶ್ನೆಯಿಂದ ಇದಾಗಿಲ್ಲ ಸುಪ್ರೀಂ ಕೋರ್ಟ್‌ನ ಆದೇಶದ ಚೌಕಟ್ಟಿನಲ್ಲಿ ನಾವು ಮಾಡಬೇಕಾಗುತ್ತದೆ ಆದ್ದರಿಂದ, ನಾನು ಮತ್ತೊಮ್ಮೆ ಗೌರವಾನ್ವಿತ ಸದಸ್ಯರುಗಳಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಆದಷ್ಟು ಬೇಗ ಕ್ಯಾಬಿನೆಟ್ ಸಬ್ ಕಮಿಟಿ ಸಭೆ ಸೇರಿ ಇದರ ಬಗ್ಗೆ ವಿವರವಾಗಿ ಚರ್ಚೆ ಮಾಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಬಿಚ್ಚು ಮನಸ್ಸಿನಿಂದ ಇದ್ದೇವೆ ಆ ಕಡೆಗೆ ನಾವು ಗಮನವನ್ನು ಕೊಡುತ್ತೇವೆಂದು ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಬಿ ಆರ್ ಪಾಟೀಲ್ : ಮಾನ್ಯ ಉಪಾಧ್ಯಕ್ಷರೆ, ಮಳೆ ಬಂದು ಎಲ್ಲಾ ಕಡೆ ನೀರು ನಿಂತಿದೆ ಕಾಲರ ಅಥವಾ ಮತ್ತೊಂದು ರೋಗ ಹರಡಬಹುದು ಆದ್ದರಿಂದ, ತಕ್ಷಣ ಪರ್ಯಾಯ ಕ್ರಮದ ಕಡೆಗೆ ಸರ್ಕಾರ ಯೋಚನೆ ಮಾಡಬೇಕು ಇಲ್ಲದಿದ್ದರೆ ಇದನ್ನು ನಿಯಂತ್ರಣ ಮಾಡುವುದಕ್ಕೆ ಆಗುವುದಿಲ್ಲ ಇದರಿಂದ ಬಹಳ ದೊಡ್ಡ ಅನಾಹುತವಾಗುತ್ತದೆ ಮಹಾರಾಷ್ಟ್ರ ಗಡಿಯಲ್ಲಿ ಈಗಾಗಲೇ ಕಾಲರ ಬಂದಿದೆ ಇದೇನಾದರೂ ಹೆಚ್ಚು ಪರಿಣಾಮವಾದರೆ ನಮ್ಮ ಕಡೆ ಯಾರು ಉಳಿಯುವುದಿಲ್ಲ ಆದ್ದರಿಂದ, ಇದಕ್ಕೆ ಪರ್ಯಾಯ ವ್ಯವಸ್ಥೆಯನ್ನು ಸರ್ಕಾರ ತಕ್ಷಣ ಮಾಡಬೇಕೆಂದು ಕೇಳುತ್ತಿದ್ದೇನೆ

ಉಪಾಧ್ಯಕ್ಷರು ಮಾನ್ಯ ಹೆಚ್ ಎನ್ ಮಹದೇವ ಪ್ರಸಾದ್ ರವರು ಒಂದು ಹೇಳಿಕೆಯನ್ನು ನೀಡುತ್ತಾರೆ

3 ಹೇಳಿಕೆ

ವಿಷಯ ಡಾ ಬಂಜಗೆರೆ ಜಯಪ್ರಕಾಶ್‌ರವರು ರಚಿಸಿರುವ **"ಅನುದೇವಾ ಹೊರಗಣವನು"** ಎಂಬ ಕೃತಿಯನ್ನು ಸರ್ಕಾರ ಮುಟ್ಟುಗೋಲು ಹಾಕಿಕೊಂಡಿರುವ ಬಗ್ಗೆ

ಶ್ರೀ ಹೆಚ್ ಎನ್ ಮಹದೇವಪ್ರಸಾದ್ (ಕನ್ನಡ ಮತ್ತು ಸಂಸ್ಕೃತಿ ಸಚಿವರು) ಮಾನ್ಯ ಉಪಾಧ್ಯಕ್ಷರೆ,

ಡಾ ಬಂಜಗೆರೆ ಜಯಪ್ರಕಾಶ್ ಎಂಬ ಲೇಖಕರು 'ಬಸವಣ್ಣನ ಜಾತಿ ಮೂಲದ ವಿಶ್ಲೇಷಣೆ ಎಂದು' **ಅನುದೇವಾ ಹೊಗಣವನು'** ಎಂಬ ಕೃತಿಯನ್ನು ರಚಿಸಿದ್ದು, ಬಸವಣ್ಣನವರು ಮತ್ತು ಅವರ ಮನೆತನದ ಚರಿತ್ರೆ ಮತ್ತು ಚಾರಿತ್ರ್ಯಗಳಿಗೆ ಕಳಂಕ ತರುವಂತಹ ವಿಷಯಗಳು ಈ ಕೃತಿಯಲ್ಲಿರುವೆಂದು ನಾನಾ ಭಾಗಗಳಲ್ಲಿರುವ ಬಸವ ಭಕ್ತರ ಭಾವನೆಗಳಿಗೆ ಇದು ತೀವ್ರ ನೋವುಂಟು ಮಾಡಿರುವ ಕಾರಣ ಈ ಕೃತಿಯನ್ನು ಕೂಡಲೇ ಮುಟ್ಟುಗೋಲು ಹಾಕಬೇಕೆಂದು ಒತ್ತಾಯಿಸಿ ಅಖಿಲ ಭಾರತ ವೀರಶೈವ ಮಹಾಸಭಾ, ಮತ್ತಿತರ ಸಂಘಟನೆಗಳು ಸರ್ಕಾರಕ್ಕೆ ಮನವಿ ಮಾಡಿದ್ದ ಹಿನ್ನೆಲೆಯಲ್ಲಿ ಕೃತಿಯ ಸತ್ಯಾಸತ್ಯತೆಯನ್ನು ಪರಾಮರ್ಶಿಸಿ ಸರ್ಕಾರಕ್ಕೆ ವರದಿ ಮಾಡಲು, ಐದು ಜನ ಹಿರಿಯ ಸಾಹಿತಿ, ಸಂಶೋಧಕರನ್ನೊಳಗೊಂಡ **ಸತ್ಯಶೋಧನಾ ಸಮಿತಿಯನ್ನು** ರಚಿಸಲಾಗಿತ್ತು

ಸಮಿತಿಯ ಸದಸ್ಯರೆಲ್ಲಾ ಪ್ರತ್ಯೇಕ ಅಭಿಪ್ರಾಯ ನೀಡಿದ್ದು, ಅದರಂತೆ ಪ್ರೊ.ಚಂದ್ರಶೇಖರ ಪಾಟೀಲ ಮತ್ತು ಪ್ರೊ.ಬರಗೂರು ರಾಮಚಂದ್ರಪ್ಪ ಅವರು ಲೇಖಕರ, ಆಶಯ, ವಿವಾದಿತ ವಿಷಯಗಳ ಬಗ್ಗೆ ಮುಕ್ತ ಚರ್ಚೆಗೆ ಅವಕಾಶ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಯ ಬಗ್ಗೆ ತಿಳಿಸಿದ್ದಾರೆ ಡಾ ಎಂ ಎಂ ಕಲಬುರ್ಗಿ ಮತ್ತು ಡಾ ಮ ನ ಜವರಯ್ಯ ಅವರು ಕೃತಿಯಲ್ಲಿನ ಪ್ರಸ್ತಾಪಗಳು ಆಧಾರರಹಿತವಾಗಿರುವುದಾಗಿಯೂ, ಚಾರಿತ್ರ್ಯಹರಣವಾಗಿದ್ದು, ಆಕ್ಷೇಪಕರವಾಗಿ ಇರುವುದಾಗಿಯೂ ಸ್ಪಷ್ಟಪಡಿಸಿದ್ದಾರೆ

ಈ ಕೃತಿಯಲ್ಲಿ ಅನೇಕ ಸಂಬಂಧವಿಲ್ಲದ ಅಸಂಗತ, ಆಧಾರರಹಿತವಾದ ವಿಷಯಗಳನ್ನು ಅನಗತ್ಯವಾಗಿ ಪ್ರಸ್ತಾಪಿಸಿ ಸಾರ್ವಜನಿಕರಲ್ಲಿ ಇಲ್ಲದ ಅನುಮಾನಗಳನ್ನು ಸೃಷ್ಟಿಸಿರುವುದನ್ನು ಗಮನಿಸಲಾಗಿದೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಮಾನ್ಯ ಉಪಾಧ್ಯಕ್ಷರೆ, ಇವರಲ್ಲಿ ಒಂದು ವಿಚಾರ, ಸಮಿತಿಯನ್ನು ಇವರು ರಚನೆ ಮಾಡಿದರು ಆ ಸಮಿತಿ ತನ್ನ ವರದಿಯನ್ನು ಕೊಟ್ಟಿದೆ ವರದಿಯ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ ಎಂದು ಹೇಳಿರುವುದು ಸರಿ ಆದರೆ ಅಲ್ಲಿರತಕ್ಕಂಥ ಸದಸ್ಯರುಗಳು ಏನೇನು ಅಭಿಪ್ರಾಯಗಳನ್ನು ಹೇಳೀದ್ದಾರೆಂದು ಸದನಕ್ಕೆ ತಿಳಿಸತಕ್ಕಂಥದ್ದಾಗಲಿ, ಅದನ್ನು ಬಹಿರಂಗ ಪಡಿಸತಕ್ಕಂಥ ಕ್ರಮವಾಗಲಿ ಸರಿಯಾದಂಥ ಕ್ರಮ ಅಲ್ಲ ಏಕೆಂದರೆ ಒಂದು ಸಮಿತಿಯಲ್ಲಿ ಹಲವಾರು ಜನ ಸದಸ್ಯರು ಇರುತ್ತಾರೆ ಅವರವರ ಅಭಿಪ್ರಾಯಗಳನ್ನು ಅವರು ಹೇಳುತ್ತಾರೆ, ಆದರೆ ಇದು ಸರಿಯಲ್ಲ

ಉಪಾಧ್ಯಕ್ಷರು ಅವರು ಮುಟ್ಟುಗೋಲು ಹಾಕಿಕೊಂಡಿರುತ್ತದೆಂದು statement ಮಾಡಿದ ಮೇಲೆ ಚರ್ಚೆಗೆ ಎಲ್ಲಿ ಅವಕಾಶವಿದೆ

(ಮುಂದಕ್ಕೆ)

ಶ್ರೀ ಜಿ ವಿ ಶ್ರೀರಾಮರೆಡ್ಡಿ ನಾಳೆ ದಿವಸ ಕಮಿಟಿಯಲ್ಲಿ ಇರುವವರು ಇಂತಹ ಅಭಿಪ್ರಾಯ ಕೊಟ್ಟಿದ್ದಾರೆಂದು ಅವರ ಮೇಲೆ ಗಲಾಟೆ ಎಬ್ಬಿಸತಕ್ಕಂಥ ಕೆಲಸವನ್ನು ಸರ್ಕಾರ ಮಾಡುತ್ತಿದೆ ಸದಸ್ಯರು ವರದಿಯನ್ನು ಕೊಟ್ಟಿದ್ದಾರೆ, ಸರ್ಕಾರಕ್ಕೆ ಅದರ ಮೇಲೆ ಏನಾದರೂ ತೀರ್ಮಾನವನ್ನು ತೆಗೆದುಕೊಳ್ಳತಕ್ಕಂಥ ಅಧಿಕಾರ ಇದೆ ಆದರೆ ಸಮಿತಿಯ ಒಳಗಡೆ ಚರ್ಚೆಯಾಗಿರತಕ್ಕಂಥ ವಿಚಾರಗಳು ಏನಿದೆ, ಒಬ್ಬೊಬ್ಬರದ್ದು ಒಂದೊಂದು ಅಭಿಪ್ರಾಯ ಇರುತ್ತದೆ ಆ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆಂದು ಹೇಳತಕ್ಕಂಥದ್ದು ಏನು ಅದು ಸರಿಯಾದಂಥದ್ದು ಅಲ್ಲ ಅದು ಅಪಾಯಕಾರಿ ಇದು ನಿಮಗೆ ಗೊತ್ತಾಗುವುದಿಲ್ಲ ಅದು ಪ್ರಜಾಪ್ರಭುತ್ವದ ನಿಯಮಗಳಿಗೆ ವಿರುದ್ಧವಾಗಿರತಕ್ಕಂಥದ್ದು ಸಮಿತಿಯಲ್ಲಿರುವ ಹಲವಾರು ಸದಸ್ಯರು ಬೇರೆ ಬೇರೆ ಅಭಿಪ್ರಾಯಗಳನ್ನು ಹೇಳಿರುತ್ತಾರೆ ಅದನ್ನು ಕ್ರೋಢೀಕರಿಸಿ ನೀವು ತೀರ್ಮಾನವನ್ನು ತೆಗೆದುಕೊಳ್ಳಿ ಆ ಸದಸ್ಯರು ಹೀಗೆ ಅಭಿಪ್ರಾಯಗಳನ್ನು ಹೇಳಿದ್ದಾರೆಂದು ಹೇಳಿದರೆ, ನಾಳೇ ದಿವಸ ಅವರ ವಿರುದ್ಧ ಪ್ರತಿಭಟನೆ ಮಾಡುವುದಕ್ಕೆ ನೀವೇ ಅವಕಾಶ ಮಾಡಿಕೊಡುತ್ತೀರಿ ಇದು ಸರಿಯಾದಂಥ ಕ್ರಮವಲ್ಲ

ಉಪಾಧ್ಯಕ್ಷರು ನಿಮ್ಮ ಅಭಿಪ್ರಾಯವನ್ನು ನೀವು ಹೇಳಿದ್ದೀರಿ ನಿಮ್ಮ ಹೇಳಿಕೆ ಮುಗಿಯಿತು ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳುತ್ತೀರಿ?

ಶ್ರೀ ಜಿ ವಿ ಶ್ರೀರಾಮರೆಡ್ಡಿ : ನಾನು ವಾಕ್‌ಔಟ್ ಮಾಡುತ್ತೇನೆ

(ಈ ಹಂತದಲ್ಲಿ ಶ್ರೀ ಜಿ ವಿ ಶ್ರೀರಾಮರೆಡ್ಡಿ ಯವರು ಘೋಷಣೆ ಕೂಗುತ್ತಾ ಸಭಾತ್ಯಾಗ ಮಾಡಿದರು)

ಶ್ರೀ ಎಸ್ ಎಸ್ ಪಾಟೀಲ್ ಸರ್ಕಾರದ ಕ್ರಮ ಸರಿ ಇದೆ

(ಗೊಂದಲ)

ಶ್ರೀ ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು) ಮಾನ್ಯ ಉಪಾಧ್ಯಕ್ಷರೆ, ಯಾವುದೇ ಸಮಿತಿಯಲ್ಲಿ ಚರ್ಚೆಯಾಗಿರುವುದನ್ನು ಬಹಿರಂಗಗೊಳಿಸಬಾರದು ಎನ್ನತಕ್ಕಂಥದ್ದು ಅವರ ವಾದ ನಾನು ಹೇಳತಕ್ಕಂಥದ್ದು ಇಷ್ಟೆ ಇವತ್ತು ಏನೊಂದು ವಾದ ವಿವಾದ ರಾಜ್ಯದಲ್ಲಿ ನಡೆಯುತ್ತಿದೆ ನಡೆಯತಕ್ಕಂಥ ಕಾಲದಲ್ಲಿ ಇಷ್ಟು ತಡವಾಗಿ ಸರ್ಕಾರ ಏನು ತೀರ್ಮಾನ ತೆಗೆದುಕೊಂಡಿದೆ ಅದು ಸರಿಯಾದದ್ದು ಅಲ್ಲ ಇವತ್ತು ಪ್ರಗತಿಪರವಾಗಿ ಕೆಲವು ಜನರು ಇದ್ದಾರೆ ಇವತ್ತು ಬಸವಣ್ಣನವರ ಬಗ್ಗೆ ಹೇಳಬೇಕಾದರೆ, 12ನೇ ಶತಮಾನದಲ್ಲಿ he was a great Revolutionary ಮತ್ತೊಂದು ಏನೆಂದರೆ, ಒಂದು ಸಮಾಜದ ರೀತಿ ನೀತಿ ರೂಢಿವಾದದ ಬಗ್ಗೆ ಒಂದು ಬಂಡೆಬ್ಬಿಸಿದ್ದಾರೆ ನಾನು ಮಾಸ್ಕೋಗೆ ಹೋದಾಗ ಅಲ್ಲಿರುವ Masco Patrick Lumamba University ಯಲ್ಲಿ ಬಸವ Philosophy ಮೇಲೆ ಅಧ್ಯಯನ ಮಾಡತಕ್ಕಂಥ ವಿದ್ಯಾರ್ಥಿಗಳನ್ನು ಕೂಡ ನೋಡಿದ್ದೇನೆ ಕಾರ್ಲ್ ಮಾರ್ಕ್ಸ್ ಏನು Das capital 18ನೇ ಶತಮಾನದಲ್ಲಿ

ಬಸವಣ್ಣನವರ ಪ್ರೇರಣೆ ತೆಗೆದುಕೊಂಡು ಬರೆದಿದ್ದಾರೆ ಇವತ್ತು ವಿನಾಕಾರಣವಾಗಿ 8 ಶತಮಾನ ಆದ ನಂತರ ಅವರ ಬಗ್ಗೆ ಮತ್ತೊಬ್ಬರು ವಾದ ಮಾಡತಕ್ಕಂಥದ್ದು ಮತ್ತು ಜನರ ಮನಸ್ಸಿನಲ್ಲಿ ಗೊಂದಲ ಉಂಟು ಮಾಡತಕ್ಕಂಥದ್ದು ತಪ್ಪು ಇದಕ್ಕೆ immediately ಈ ಸರ್ಕಾರ ಇದರ ಬಗ್ಗೆ reaction ಕೊಡಬೇಕಾಗಿತ್ತು. ಸರ್ಕಾರ ನಮ್ಮನ್ನೆಲ್ಲಾ ಕರೆಸಿ ಮಾತನಾಡಬೇಕಾಗಿತ್ತು ಇವತ್ತು ಒಂದು ಸಮಿತಿ ಮಾಡಿ ಅಲ್ಲಿ ಚರ್ಚೆಯಾಗಿ ಇವತ್ತು ಏನು ಸರ್ಕಾರ ಒಂದು ತೀರ್ಮಾನಕ್ಕೆ ಬಂದಿದೆ ಅದರೂ ಬಹಳ ತಡವಾಗಿ ಬಂದಿದ್ದಾರೆ ಇವರಿಗೆ ಏನು ನಡೆಯುತ್ತಿದೆ ಎನ್ನುವುದರ ಬಗ್ಗೆ ಮತ್ತು ಜನರ ಬಗ್ಗೆ ಯಾರ್ಯಾರು ಮಹಾತ್ಮರಾಗಿದ್ದಾರೆ ಯಾರ್ಯಾರು ಏನೇನು ಕೆಲಸ ಕಾರ್ಯಗಳನ್ನು ಮಾಡಿದ್ದಾರೆಂದು ಅರಿವು ಸರ್ಕಾರಕ್ಕೆ ಇಲ್ಲ ಒಟ್ಟಾರೆ ಹೊತ್ತಾಗಿ ಕೂಡ ಒಂದು ತೀರ್ಮಾನಕ್ಕೆ ಬಂದಿದ್ದಾರೆನ್ನುವ ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ

ಶ್ರೀ ಪಿ ಜಿ ಆರ್ ಸಿಂಧ್ಯಾ(ಕನಕಪುರ) . ಮಾನ್ಯ ಉಪಾಧ್ಯಕ್ಷರೆ, ತಡವಾಗಿಯಾದರೂ ಸರ್ಕಾರ ಈ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಂಡಿರುವಂಥದ್ದನ್ನು ಮೊದಲನೆಯದಾಗಿ ನಾನು ಸ್ವಾಗತವನ್ನು ಮಾಡುತ್ತೇನೆ, ಕಾರಣ, ರಾಜ್ಯದಲ್ಲಿ ಜನಗಳ ಮನಸ್ಸನ್ನು ಕದಡತಕ್ಕಂಥ ಮತ್ತು ಸಾಮರಸ್ಯವನ್ನು ಹಾಳು ಮಾಡತಕ್ಕಂಥ ಕೃತಿ ಇದು ಎನ್ನುವುದನ್ನು ನಾನು ಸ್ವತಃ ಓದಿ ಮನಗಂಡಿದ್ದೇನೆ ನಾನು ಈ ಸಂದರ್ಭದಲ್ಲಿ ಸರ್ಕಾರ ಮಾಡಿರತಕ್ಕಂಥ ಕ್ರಮವನ್ನು ಸ್ವಾಗತ ಮಾಡಿ ಇದರ ಜೊತೆಗೆ 25ನೇ ತಾರೀಖು ಅಖಿಲ ಭಾರತ ವೀರಶೈವ ಮಹಾಸಭಾದವರು ಮತ್ತು ಅನೇಕ ರಾಜ್ಯದ ಮಠಾಧಿಪತಿಗಳು ಬೆಂಗಳೂರು ಚಲೋ ಎನ್ನುವ ಸತ್ಯಾಗ್ರಹವನ್ನು ಮಾಡಬೇಕೆಂದು ಅವರು ಒಂದು ನಿಯೋಜನೆಯನ್ನು ಮಾಡಿದ್ದಾರೆ ಈ ಸಂದರ್ಭದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಈ ಮಠಾದೀಶರನ್ನು ಮತ್ತು ಈ ವೀರಶೈವ ಮಹಾಸಭಾದ ಪದಾಧಿಕಾರಿಗಳನ್ನು ಈ ಮುಷ್ಕರವನ್ನು ನಿಲ್ಲಿಸಲಿಕ್ಕೆ ಮನವಿ ಮಾಡಿಕೊಳ್ಳಬೇಕೆಂದು ನಾನು ಅವರಲ್ಲಿ ವಿನಂತಿಯನ್ನು ಮಾಡುವುದರ ಜೊತೆಗೆ ಈ ಹೋರಾಟವನ್ನು ಮಾಡುವ ಸಂದರ್ಭದಲ್ಲಿ ಪೊಲೀಸ್‌ನವರು ಕೆಲವೊಬ್ಬರ ಮೇಲೆ ಕೇಸ್‌ಗಳನ್ನು ಹಾಕಿದ್ದಾರೆ ಆ ಕೇಸ್‌ಗಳನ್ನು ಕೂಡ ವಿತ್‌ಡ್ರಾ ಮಾಡಬೇಕೆಂದು ನಾನು ಒತ್ತಾಯವನ್ನು ಮಾಡುತ್ತೇನೆ ಈ ಸರ್ಕಾರದ ಅನೇಕ ಆಜ್ಞೆಗಳು ಎಲ್ಲರ ಕಾಲದಲ್ಲಿಯೂ ಕಾರ್ಯಾಚರಣೆಗೆ ಬರತಕ್ಕಂಥದ್ದು ಬಹಳ ಅನುಮಾನ ಇವತ್ತು ಸರ್ಕಾರ ಕೃತಿಯನ್ನು ಮುಟ್ಟುಗೋಲು ಹಾಕಿಕೊಂಡಿದ್ದೇವೆಂದು ಹೇಳಿದ್ದಾರೆ, ಮುಟ್ಟುಗೋಲು ಎಂದರೆ ಏನು? ಅಂದರೆ ಅಂಗಡಿಗಳಲ್ಲಿ ಪುಸ್ತಕಗಳನ್ನು ಮಾರುವುದು ಅಷ್ಟೇನಾ? ಮತ್ತು ಬೇರೆ ಏನು ಎನ್ನುವುದು ಸಹಿತ ಗೊತ್ತಾಗಬೇಕಾಗುತ್ತದೆ ಈಗ ಇದರಲ್ಲಿ ಒಂದು ಸ್ವಾಗತಾರ್ಹ

ವಿಚಾರವೇನೆಂದರೆ ಮಾನ್ಯ ಬಂಜಗೇರಿ ಜಯಪ್ರಕಾಶ್‌ರವರು ನಮ್ಮ ಊರಿನವರು ನನ್ನ ಕ್ಷೇತ್ರದಲ್ಲಿ ಬರತಕ್ಕಂಥ ಹಾರೋಹಳ್ಳಿ ಗ್ರಾಮದ ನಿವಾಸಿಗಳಾಗಿ ಕಳೆದ 15 ವರ್ಷಗಳಿಂದ ಇವರು ಇದ್ದಾರೆ ಅವರು ವಿಷಾದವನ್ನು ವ್ಯಕ್ತಪಡಿಸಿ ಯಾರ ಮನಸನ್ನು ಸಹಿತ ನೋವು ಮಾಡತಕ್ಕಂಥ ಉದ್ದೇಶ ನನಗೆ ಇರಲಿಲ್ಲ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ ಮಾನ್ಯ ವಿರೋಧ ಪಕ್ಷದ ನಾಯಕರಾದ ಧರ್ಮಸಿಂಗ್‌ರವರು ಹೇಳಿರತಕ್ಕಂಥ ಎಲ್ಲಾ ವಿಚಾರಗಳನ್ನು ಒಪ್ಪತಕ್ಕಂಥದ್ದು ಬಸವಣ್ಣನವರ ಬಗ್ಗೆ ಅಲ್ಲ, ಇಲ್ಲಿ ಮುಖ್ಯವಾಗಿ ಇರತಕ್ಕಂಥದ್ದು ಬಸವಣ್ಣನವರ ಮೂಲದ ಬಗ್ಗೆ ಕೂಡ ನಾವು ಮಾತನಾಡಬಾರದೆಂದು ಹೇಳುವುದಿಲ್ಲ ಆದರೆ ಮಾತನಾಡತಕ್ಕಂಥ ಸಂದರ್ಭದಲ್ಲಿ ಕೆಲವರ ಭಾವನೆಗಳಿಗೆ ಧಕ್ಕೆ ಬರುವ ರೀತಿಯಲ್ಲಿ ಬರೆದಿದ್ದಾರೆ, ಇದು ಬಹಳ ಪ್ರಮುಖವಾದಂಥದ್ದು ಇದರ ಬಗ್ಗೆ ನಿದ್ದೆ ಮಾಡುತ್ತಿದ್ದ ಸರ್ಕಾರ ಈಗಲಾದರೂ ಎಚ್ಚೆತ್ತುಕೊಂಡು ಈಗ ಮಾಡಿರತಕ್ಕಂಥದ್ದನ್ನು ನಾನು ಸ್ವಾಗತ ಮಾಡುತ್ತೇನೆ

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಶ್ರೀರಾಮರೆಡ್ಡಿಯವರು ಏನು ಹೇಳಿದರು ಒಂದು ನಿಮಿಷ ಉಪಾಧ್ಯಕ್ಷರೆ, ಸಮಿತಿಗೆ ಸದಸ್ಯರನ್ನು ನೇಮಕ ಮಾಡಿದ್ದಾರೆ ಯಾವ್ಯಾವ ಸದಸ್ಯರು ಏನೇನು ಹೇಳಿದರು ಎಂದು ಬಹಿರಂಗ ಮಾಡಬಾರದು ಇದರಲ್ಲಿ ಸರ್ಕಾರವೇ ಎತ್ತಿಕಟ್ಟಿದಂತಾಗಿದೆ ಈ ಸಾಹಿತಿ ಹೀಗೆ ಹೇಳಿದ್ದಾರೆ ಎಂದು ಹೇಳುವುದು ಸರಿಯಾದುದು ಅಲ್ಲ

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ಸಮಿತಿಯ ಒಟ್ಟಾರೆ ಅಭಿಪ್ರಾಯವನ್ನು ತಾವು ಹೇಳಬೇಕು ಇನ್ನು ಎರಡನೆಯದಾಗಿ ಹೇಳುವುದಾದರೆ, ಸರ್ಕಾರದವರು ಹೇಳುವುದಕ್ಕೆ ಮುಂಚೆಯೇ ಶ್ರೀ ಬಂಜಗೆರೆಯವರು ಅದನ್ನು ಹಿಂತೆಗೆದು ಕೊಂಡಿದ್ದಾರೆ ಸರ್ಕಾರ ಇಲ್ಲಿ ಪ್ರಕಟ ಮಾಡುವುದಕ್ಕೆ ಮುಂಚೆಯೇ ಬಂಜಗೆರೆಯವರೆ ತಮ್ಮ ನಿರ್ಧಾರವನ್ನು ಹೇಳಿ ವಾಪಸ್ಸು ತೆಗೆದುಕೊಂಡಿದ್ದಾರೆ

(ಗೊಂದಲ)

ಹಿರಿಯ ಸದಸ್ಯರನ್ನು ಬರಗೂರು ರಾಮಚಂದ್ರಪ್ಪನವರು ಏನು ಹೇಳಿದ್ದಾರೆ ಎಂಬುದನ್ನು ಇಲ್ಲಿ ಹೇಳಬಾರದು

ಶ್ರೀ ಎಸ್ ಎಸ್ ಪಾಟೀಲ್ . ಅದರಲ್ಲಿ ಹಿಂದೆ ತೆಗೆದುಕೊಳ್ಳುವ ಮಾತಿಲ್ಲ ಸುಮ್ಮನೆ ಹೇಳುತ್ತಿದ್ದಾರೆ

ಉಪಾಧ್ಯಕ್ಷರು ತಾವುಗಳೆಲ್ಲರೂ ಕುಳಿತುಕೊಳ್ಳಿ ಇದರ ಮೇಲೆ ಸುಮ್ಮನೆ ಏತಕ್ಕಾಗಿ ಚರ್ಚೆ ಮಾಡುತ್ತೀರಿ

ಶ್ರೀ ಎಸ್ ಎಸ್ ಪಾಟೀಲ್ . ಸುಪ್ರೀಂಕೋರ್ಟಿನ ಹೇಳಿಕೆ ಪ್ರಕಾರ ಅವರ ಮೇಲೆ ಕ್ರಿಮಿನಲ್ ಕೇಸ್‌ನ್ನು ಹಾಕಿ ಮಾನ್ಯ ಯಡಿಯೂರಪ್ಪನವರೆ ನೀವೇ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು

ಉಪಾಧ್ಯಕ್ಷರು ಉಪಮುಖ್ಯಮಂತ್ರಿಗಳೆ ತಾವು ಹೇಳಿ

ಶ್ರೀ ಬಿ ಎಸ್ ಯಡಿಯೂರಪ್ಪ (ಉಪಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು) ಮಾನ್ಯ ಉಪಾಧ್ಯಕ್ಷರೆ, ಅಖಿಲಭಾರತ ವೀರಶೈವ ಸಮಾಜದ ಅಧ್ಯಕ್ಷರಲ್ಲಿ ಮತ್ತೆ ಸಾಧುಸಂತರುಗಳಲ್ಲಿ ನಾನು ವಿನಂತಿಯನ್ನು ಮಾಡಿಕೊಳ್ಳುತ್ತೇನೆ ಈಗಾಗಲೇ ಈ ಪುಸ್ತಕವನ್ನು ಮುಟ್ಟುಗೋಲು ಹಾಕಿಕೊಂಡಿರುವುದರಿಂದ ಈ ಒಂದು ಹೋರಾಟವನ್ನು ಕೈಬಿಡಬೇಕು ಚಳುವಳಿ ಅಗತ್ಯವಿಲ್ಲವೆಂಬ ವಿನಂತಿಯನ್ನು ಮಾಡುವುದರ ಜೊತೆಗೆ ಸರ್ಕಾರದ ಕಡೆಯಿಂದ ಸ್ವಲ್ಪ ತಡವಾಗಿದೆ ನಾವು ಇನ್ನು ಮುಂಚೆ ಮಾಡಬೇಕಾಗಿತ್ತು ತಮ್ಮ ಸಲಹೆಯನ್ನು ನಾವು ಒಪ್ಪಿಕೊಳ್ಳುತ್ತೇವೆ ಇನ್ನು ಮುಂದೆ ಈ ರೀತಿಯ ಪ್ರಮುಖವಾದ ವಿಷಯಗಳು ಈ ನಾಡಿನ ಜನರ ಮನಸ್ಸನ್ನು ಕಲಕುವಂತಹ, ಅವರು, ಯಾರೇ ಇರಬಹುದು, ಅದಕ್ಕೆ ಅವಕಾಶ ಕೊಡದಂತೆ ಕಟ್ಟೆಚ್ಚರವನ್ನು ವಹಿಸುತ್ತೇವೆ ಇವತ್ತು ನೀವೆಲ್ಲರೂ ಸಹಕಾರವನ್ನು ಕೊಟ್ಟಿದಕ್ಕಾಗಿ ನಾನು ತಮಗೆಲ್ಲರಿಗೂ ಅಭಿನಂದನೆಯನ್ನು ಸಲ್ಲಿಸಿ ಈ ಚಳುವಳಿಯನ್ನು ಕೈಬಿಡಬೇಕೆಂದು ವೀರಶೈವ ಸಮಾಜದ ಅಧ್ಯಕ್ಷರಿಗೆ ತಿಳಿಬಯಸುತ್ತೇನೆ

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಉಪಾಧ್ಯಕ್ಷರೆ,

ಉಪಾಧ್ಯಕ್ಷರು . ಆಯಿತಲ್ಲಾ ಉತ್ತರವನ್ನು ಕೊಟ್ಟ ಮೇಲೆ ಮತ್ತೇ ಏನು ಹೇಳುತ್ತೀರಿ?

ಶ್ರೀ ಕೆ ಶ್ರೀನಿವಾಸಗೌಡ . ಇದು ಬಹಳ ಗಹನವಾದ ವಿಷಯವಾಗಿದೆ ಬಹಳ ಲೇಟಾಗಿ ಆದರೂ ವಾಪಸ್ಸು ತೆಗೆದುಕೊಂಡಿದ್ದಾರೆ ಆ ಪುಸ್ತಕದಲ್ಲಿ ಡಾ ಅಂಬೇಡ್ಕರ್ ಹಾಗೂ ಕೆ ವಿ ಪುಟ್ಟನವರನ್ನು ಬ್ರಾಹ್ಮಣರಿಗೆ ಹುಟ್ಟಿದ್ದಾರೆಂದು ಬರೆದಿದ್ದಾರೆ ಬುದ್ದಿವಂತರೆಲ್ಲರೂ ಬ್ರಾಹ್ಮಣರಿಗೆ ಹುಟ್ಟಿದ್ದಾರೆಯೇ? ನಾನು ಆ ಪುಸ್ತಕವನ್ನು ಓದಿದ್ದೇನೆ

(ಗೊಂದಲ)

ಡಾ ಬಿ ಆರ್ ಅಂಬೇಡ್ಕರ್ ಅಂತ ಒಬ್ಬ, ಕೆ ವಿ ಪುಟ್ಟಪ್ಪನವರಂತ ಒಬ್ಬರ ಬಗ್ಗೆ ಈ ತರಹ ಬರೆದರೆ ನಾಳೆ ದಿನ ಯಾರಾದರೂ ನಮ್ಮ ಮಕ್ಕಳು ಬುದ್ದಿವಂತರಾದರೆ ಇವರು ಅವರಿಗೆ ಹುಟ್ಟಿದ್ದಾರೆಂದರೆ ಏನಿದು ಪರಿಸ್ಥಿತಿ ಇಂತಹವರನ್ನು ನಿಜವಾಗಿಯೂ ಜೈಲಿಗೆ ಹಾಕಬೇಕು

ಉಪಾಧ್ಯಕ್ಷರು . ಮಾನ್ಯ ವಿರೋಧ ಪಕ್ಷದ ನಾಯಕರು ತಾವು ಏನು ಹೇಳುತ್ತೀರಿ?

ಶ್ರೀ ಕೆ ಆರ್ ರಮೇಶ್ ಕುಮಾರ್ ಮಾನ್ಯ ಉಪಾಧ್ಯಕ್ಷರೆ, ಅವರು ಪುಸ್ತಕವನ್ನು ಬರೆದರು, ಕೆಲವರೆಲ್ಲರೂ ಆ ಬಗ್ಗೆ objection ಮಾಡಿದರು ಅವರೆಲ್ಲರಿಗೂ hurt ಆಗಿದೆ ಸಮಾಜದಲ್ಲಿ ಕೆಲವರಿಗೆ hurt ಆಗುವುದು ಸಹಜ ಪುನಃ ನಾನು ಅದಕ್ಕೆ ಬೆಂಕಿಹಚ್ಚುವುದಕ್ಕೆ ಪ್ರಯತ್ನ ಮಾಡುವುದಿಲ್ಲ ಆದರೆ ಎಲ್ಲೋ ಒಂದು ಕಡೆಗೆ, ಇವೆಲ್ಲವೂ ದಾಖಲೆಗಳಲ್ಲಿ ಉಳಿಯುತ್ತವೆ Constituent Assembly ಒಳಗಡೆ ಒಂದೊಂದು ಅರ್ಟಿಕಲ್‌ಗಳನ್ನು ಕೂಡ ಪಾಸ್ ಮಾಡಬೇಕಾದರೆ, ಅದರ ಬಗ್ಗೆ ಸವಿಸ್ತಾರವಾಗಿ ಚರ್ಚೆ ಮಾಡಿ ಪರ ಮತ್ತು ವಿರೋಧ ಎಲ್ಲಾ ಮಾಡಿ ಅಮೇಲೆ ಒಂದೊಂದು ಅರ್ಟಿಕಲ್‌ಗಳನ್ನು clear ಮಾಡಿದ್ದಾರೆ Article 32ನ್ನು clear ಮಾಡಬೇಕಾಗಿದ್ದರೆ, ಡಾ ಬಿ ಆರ್ ಅಂಬೇಡ್ಕರ್‌ರವರು ಏನು ಹೇಳಿದ್ದಾರೆ, ವಿಶೇಷವಾಗಿ Article 32 ಬಗ್ಗೆ ಸ್ವಲ್ಪ ಮಾನ್ಯ ಮಂತ್ರಿಗಳು ಅಥವಾ ಸರ್ಕಾರದಲ್ಲಿ ಯಾರಾದರೂ ಆಸಕ್ತಿ ಇದ್ದವರು Constituent Assembly proceedings ತೆಗೆಸಿ ಓದಬೇಕು ಕೊಯಿಮಿನಿಯವರು ನಡೆಸಿದಂತೆ ನಾವು ಸರ್ಕಾರವನ್ನು ನಡೆಸುವುದಕ್ಕಾಗುವುದಿಲ್ಲ ಸದನದಲ್ಲಿ ಎಲ್ಲಾ ವಿಚಾರದಲ್ಲಿ ನಮ್ಮೆಲ್ಲರಿಗೂ ಒಂದೇ ರೀತಿಯ ಅಭಿಪ್ರಾಯವಿರಬೇಕಾದರೆ ಅದು ಆಗುವುದಿಲ್ಲ ಶ್ರೇಣಿಕೃತ ಸಮಾಜ, ಹಿಂದೂ ಸಮಾಜದಲ್ಲಿ ಅಸಮಾನತೆಗಳು ಇವೆ ಎನ್ನತಕ್ಕಂಹ ಕಾರಣದಿಂದಲೇ ಹೋರಾಟ ನಡೆಯುತ್ತಿರುವಂತಹದ್ದು ಶ್ರೇಣಿಕೃತ ಸಮಾಜ ಆಗದೇ ಇದ್ದರೆ ಅದು ಬಸವತತ್ವದ ಆಧಾರದ ಮೇಲೆ ಇದ್ದಂತಹ ಹಿಂದೂ ಸಮಾಜ ಆಗಿದ್ದರೆ ನಮಗೆ ಈ ಗತಿಯೂ ಬರುತ್ತಾ ಇರಲಿಲ್ಲ ಈ ಅಭಿಪ್ರಾಯವನ್ನು ವ್ಯಕ್ತಪಡಿಸತಕ್ಕಂಧಹದ್ದನ್ನು ಮೊದಲ್ಗೊಂಡು ಎಲ್ಲವೂ ಕೂಡ ಅಲ್ಲಿಂದಲೇ ಪ್ರಾರಂಭವಾಗುತ್ತದೆ ನೀವು ಮುಟ್ಟುಗೋಲು ಹಾಕಿಕೊಳ್ಳುತ್ತೇವೆಂದು ತೀರ್ಮಾನ ಮಾಡಿದ್ದೀರಿ ಮುಟ್ಟುಗೋಲು ಎನ್ನುವಂತಹ ಪದ ಇದೆಯಲ್ಲಾ ಇದು ಶೋಭೆ ತರುವುದಿಲ್ಲ ಪ್ರಜಾಪ್ರಭುತ್ವ ವ್ಯವಸ್ಥೆಗೆ ಇದು ಶೋಭೆ ತರುವುದಿಲ್ಲ ಆತ ಪಶ್ಚಾತ್ತಾಪ ಪಟ್ಟುಕೊಂಡು ಹಿಂದಕ್ಕೆ ತೆಗೆದುಕೊಂಡಿದ್ದಾರೋ, ಭಯ ಬಿದ್ದು ಹಿಂದಕ್ಕೆ ತೆಗೆದುಕೊಂಡಿದ್ದಾರೋ ಆತನು ಒಂದು ಹೇಳಿಕೆಯನ್ನು ಕೊಟ್ಟಿದ್ದಾನೆ ಆದರೆ ಒಬ್ಬ ಮನುಷ್ಯನಿಗೆ ಅವನ ಅಭಿಪ್ರಾಯಕ್ಕೆ ಅವನು ನಿಂತುಕೊಳ್ಳುವುದಕ್ಕೆ ಅದಲ್ಲೆ ಮುಕ್ತವಾದಂತಹ ವಾತಾವರಣವನ್ನು ಇರಬೇಕು ನಾವು ಒಂದು fear create ಮಾಡಿ terror create ಮಾಡಿದರೆ ಕತ್ತು ಹಿಸುಕುತ್ತೇವೆಂದು ಹೇಳಿ ಒಬ್ಬ ಮನುಷ್ಯನಿಗೆ ಹೆದರಿಸಿ ಒಂದು ಅಭಿಪ್ರಾಯಕ್ಕೆ ಬಂದರೆ ಅದು ಸರಿಯಲ್ಲ

ಶ್ರೀ ಎಸ್ ಎಸ್ ಪಾಟೀಲ್ : ಮಾನ್ಯ ರಮೇಶ್‌ಕುಮಾರ್‌ರವರು ಮಾತನಾಡಿದ ನಂತರ ನಮಗೂ ಕೂಡ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ

ಶ್ರೀ ಕೆ ಆರ್ ರಮೇಶ್‌ಕುಮಾರ್ ಅವರಿಗೂ ಮಾತನಾಡುವುದಕ್ಕೆ ಅವಕಾಶವನ್ನು ಕೊಡಿ ನಾನು ಏನು ಹೇಳುತ್ತೇನೆಂದರೆ, ಯಾರದೋ ಮನಸ್ಸು ನೋಯಿಸಬೇಕೆಂಬ ಉದ್ದೇಶ ನಮ್ಮದು ಅಲ್ಲ ಅಂದರೆ ನಾನು ಸಂವಿಧಾನಕ್ಕೆ ಅಷ್ಟೇ ಸೀಮಿತವಾಗಿ ಹೇಳುತ್ತೇನೆ Article 32ನಲ್ಲಿ ಪ್ರತಿಯೊಬ್ಬ ಮನುಷ್ಯನಿಗೂ ತನ್ನದೇ ಆದಂತಹ ವಿಚಾರ ಧಾರೆ ಹಾಗೂ ವ್ಯಕ್ತಿ ಸ್ವಾತಂತ್ರ ಇರುವುದರಿಂದ ಅದಕ್ಕೆ ಮುಕ್ತವಾದ ವಾತಾವರಣವಿರಬೇಕು ಅಷ್ಟಕ್ಕೆ ಮಾತ್ರ ನಾನು ಹೇಳುತ್ತೇನೆ ನಾವು ಯಾರನ್ನೋ ಮೆಚ್ಚಿಸುವುದಕ್ಕೆ ಏನೇನೋ ಮಾಡುವುದಕ್ಕೆ ಹೀಗೆಲ್ಲಾ ಕೊಟ್ಟುಬಿಟ್ಟರೆ ಹಾಗಾದರೆ ನಂಜುಂಡಪ್ಪನವರ ಕಮೀಷನ್ ಮೇಲೆ ಹೀಗೆ ಆಯಿತು ವೆಂಕಟಸ್ವಾಮಿಯವರ ಕಮಿಷನ್ ರಿಪೋರ್ಟ್ ಕೊಟ್ಟಾಗ ಅದಕ್ಕೂ ಕೂಡ ಹೀಗೆ ಆಯಿತು ಬಾಯಿಗೆ ಬಂದಂತೆ ಗೋಡೆಗಳ ಮೇಲೆಲ್ಲಾ ಬರೆದರು ಒಬ್ಬರು ಗೊಲ್ಲರು ಸಮಾಜದಲ್ಲಿ ಹುಟ್ಟಿದಂತಹವನಿಗೆ ತಮ್ಮದೇ ಆದಂತಹ ಸ್ವಭಾವಗಳು ಇರುತ್ತವೆ ತಾನು ಅನುಭವಿಸಿದಂತಹ ನೋವು ಇರುತ್ತದೆ ಅದಕ್ಕೆ ತನ್ನ ವರದಿಯಲ್ಲಿ ತಮಗೆ ಅವಕಾಶ ಸಿಕ್ಕಿದಾಗ ತನ್ನ ಅಧಿಕಾರ ವ್ಯಾಪ್ತಿಯೊಳಗಡೆ ಆತನು ಒಂದು ವರದಿಯನ್ನು ಕೊಡುತ್ತಾನೆ ಬಲಾಡ್ಯರದೆ ಸಮಾಜ ಆಗಬೇಕು, ಪ್ರಬಲರಸ್ಥರದೇ ಕೂಗು ಆಗಬೇಕು, ನಡೆಯತಕ್ಕಂತಹವನ್ನದೇ ದೇಶ ಆಗಬೇಕಾದರೆ ವಾಪಸ್ಸು ನಾವು ಹಿಂದಕ್ಕೆ ಹೋಗುತ್ತೇವಷ್ಟೇ, ಮುಂದಕ್ಕೆ ಹೋಗುವುದಿಲ್ಲ ಅಷ್ಟನ್ನು ಹೇಳಿ ನಾನು ಕುಳಿತುಕೊಳ್ಳುತ್ತೇನೆ

ಶ್ರೀ ಜೆ ಸಿ ಮಾಧುಸ್ವಾಮಿ(ಚಿಕ್ಕನಾಯಕನಹಳ್ಳಿ) : ಮಾನ್ಯ ಉಪಾಧ್ಯಕ್ಷರೆ, ನಾವ್ಯಾರು ಮಾತನಾಡಬಾರದು ಅಂದುಕೊಂಡಿದ್ದೇವು ಅಭಿವ್ಯಕ್ತ ಸ್ವಾತಂತ್ರ್ಯ Article 32ನಲ್ಲಿದೆ ಅದು ಮುಕ್ತವಾಗಿದೆ ಆದರೆ ಯಾವುದಾದರೂ ಮೂಲವನ್ನು ಭೇಧಿಸುವುದಕ್ಕೆ ಹೊರಟಾಗ, ಯಾರಿಗಾದರೂ right to worship ಪ್ರಶ್ನೆ ಮಾಡಿದಾಗ ಯಾವುದಾದರೂ ಧರ್ಮದ ಸಂಸ್ಥಾಪಕರ ಬಗ್ಗೆ ಮಾತನಾಡಬೇಕಾದರೆ ಸಂಶೋಧನೆಯಾಗಿ ಮಾತನಾಡಿದ್ದರೆ ಬಹುಶಃ ಮಾನ್ಯ ರಮೇಶ್‌ಕುಮಾರ್‌ರವರ ವಾದವನ್ನು ನಾನು ಒಪ್ಪುತ್ತಿದ್ದೆ ಈ ಪುಸ್ತಕವನ್ನು ಬಹಳ ನಿಗಾ ಇಟ್ಟು ಓದಿದವರಲ್ಲಿ ನಾನು ಒಬ್ಬ ಬಂಜಗೆರೆಯವರು ಎಲ್ಲೋ ಪ್ರಾಮಾಣಿಕವಾಗಿ ಸಂಶೋಧನೆಯನ್ನು ಮಾಡಿದ್ದಾರೆ ಎಂದು ನನಗನಿಸಿಲ್ಲ ಪ್ರಚಾರಕ್ಕೋಸ್ಕರವೇ ಈ ಪುಸ್ತಕವನ್ನು ಬರೆದಿದ್ದಾರೆ ಎಂದು ನಾನು ಅಂದುಕೊಂಡಿದ್ದೇನೆ ಬಸವಣ್ಣನವರು ಲಿಂಗಾಯಿತರಾಗಿ ಹುಟ್ಟಲಿಲ್ಲ, ನಾವು ಲಿಂಗಾಯಿತರಾದವರೆಲ್ಲರೂ ಒಪ್ಪಿಕೊಂಡಿದ್ದೇವೆ ಯಾವುದೇ ಧರ್ಮದಿಂದ ಬಂದಂತಹವರನ್ನು ಸ್ವೀಕಾರ ಮಾಡುವಂತಹ ದೊಡ್ಡ ಧರ್ಮ ನಮ್ಮದು ಇದರಲ್ಲಿ ಏನು ಅವರು ಹರಿಜನರಾಗಿಬಿಟ್ಟು ಅಕಸ್ಮಾತ್ ನಮ್ಮ ಧರ್ಮಸಂಸ್ಥಾಪಕ ಅಥವಾ ಪ್ರಚಾರವಾದಿ ಅಥವಾ ಪ್ರವಾದಿಯಾಗಿದ್ದರೆ ಇನ್ನೂ ಹೆಚ್ಚು ಸ್ವಾಗತವನ್ನು ನಾವು ಮಾಡುತ್ತಿದ್ದೇವು, ಬಸವಣ್ಣನವರೆ ಒಬ್ಬರೇ ಈ ಧರ್ಮದ ಪ್ರಚಾರಕರು

ಅಲ್ಲ, ಅವರ ಹಿಂದೆ ವೀರಶೈವ ಧರ್ಮ ಹುಟ್ಟಲಿಲ್ಲ ಈ ಧರ್ಮವನ್ನು ಅವರೂ ಕೂಡ ಒಪ್ಪಿಕೊಂಡು ಬಂದವರು ಅವರ ಸಮಕಾಲೀನರಾಗಿ ಎಲ್ಲಾ ಜಾತ್ಯಸ್ಥರು, ಎಲ್ಲಾ ಧರ್ಮಸ್ಥರು ನಮ್ಮಲ್ಲಿದ್ದರು ಇದು ಒಬ್ಬರ ಸಿದ್ಧಾಂತದ ಆಧಾರದ ಮೇಲೆ ಅಲ್ಲ ಇದನ್ನು ಪರಂಪರೆ ಎಂದು ಬೆಳೆಸಿಕೊಂಡು ಬಂದಂತ ಧರ್ಮದಲ್ಲಿ ಇದೇ ಸಾಹಿತಿಗಳೇ, ಒಬ್ಬರು ಅವರ ಅಕ್ಕ ಯಾರಿಗೋ ಬಸಿರಾಗಿದ್ದರು, ಅದಕ್ಕಾಗಿ ಅವರನ್ನು ಆಚೆಗೆ ಹಾಕಿದ್ದರು, ಅದಕ್ಕೋಸ್ಕರ ಅವರು ಅಗ್ರಹಾರವನ್ನು ಬಿಟ್ಟುಹೋಗಬೇಕಾಯಿತು ಅದಕ್ಕೋಸ್ಕರ ಅವರನ್ನು ಇಲ್ಲಿ ಇಟ್ಟುಕೊಂಡಿದ್ದಾಗ ಬರೆದಿದ್ದನ್ನು ಕೂಡ ಮುಕ್ತವಾಗಿ ಅಥವಾ ಅಭಿವ್ಯಕ್ತ ಸ್ವತಂತ್ರವನ್ನು ಅವತ್ತು ಒಪ್ಪಿಕೊಂಡಂತಹವರನ್ನು ತಾವು ಕಮಿಟಿಗೆ ಹಾಕಿದ್ದೇ ಅಪರಾದ ತಾವು ಯಾರನ್ನು ಕಮಿಟಿಗೆ ಹಾಕಿದ್ದೀರಿ, ಅವರು ಮೊದಲೇ ಬಸವಣ್ಣನವರ ಬಗ್ಗೆ ಅವರ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರು ನಾವು ಮಾತನಾಡಬೇಕಾಗಿರುವುದು ಅಲ್ಲಿ ಇತ್ತು ತಾವು ಆಯ್ಕೆ ಮಾಡಿ ಕಮಿಟಿಗೆ ಹಾಕಬೇಕಾದರೆ ತಾವು ನಿಷ್ಪಕ್ಷವಾಗಿ ಮಾತನಾಡುವುದನ್ನು ಹಾಕಿರಲೇ ಇಲ್ಲ ಅವತ್ತಿನ ಅಭಿಪ್ರಾಯವನ್ನು ತಾವು ಓದಬೇಕಾಗಿತ್ತು ಹಾಗಾದರೆ ಅವರಿಗೆ ಗೊತ್ತಿತ್ತಲ್ಲಾ ಅವತ್ತಿನ ಅಭಿಪ್ರಾಯ, ಇವತ್ತು ಏತಕ್ಕಾಗಿ ಬೇರೆ ಅಭಿಪ್ರಾಯವನ್ನು ಎತ್ತುತ್ತಾರೆಂದು ನಾವು ಕೇಳಬೇಕಾಗುತ್ತದೆ ಇನ್ನು ಎರಡನೆಯದಾಗಿ ಹೇಳುವುದಾದರೆ, ಈ ಧರ್ಮಕ್ಕೂ ಹುಟ್ಟಿಗೂ ಸಂಬಂಧವೇ ಇಲ್ಲ ಆಚರಣೆಯನ್ನು ನೀವು ಏನು ಮಾಡಿಕೊಂಡು ಹೋಗುತ್ತೀರಿ ನಿಮಗೇನು ಪ್ರೀತಿಯಾಗಿದೆ, ಬಸವಣ್ಣನ ಅಥವಾ ಶಿವನನ್ನು ಒಪ್ಪಿ ಆಚರಣೆ ಮಾಡಿದರೆ, ನೀವು ವೀರಶೈವರಾಗಬಹುದು ನಾನು ಮೊನ್ನೆ ದಿನ ಎಸ್ ಎಸ್ ಪಾಟೀಲ್‌ರವರ ಜೊತೆ ನಾವು ಮಾತನಾಡಿ ಹೇಳಿದೆ ನಾವು ಇನ್ನು ಮುಂದಕ್ಕೆ ಹೋಗಬೇಕಾಗಿದೆ ಹರಿಜನರಾದವರು, scheduled caste ಎಂದು ಹೇಳಿದವರು Christian ಆದರೆ ಆ ಅಜಾತಿಯಲ್ಲಿದ್ದರೂ ಕೂಡ ಹಿಂದಿನ ಜಾತಿಯ ಪ್ರಕಾರ ರಿಸರ್ವೇಶನ್‌ಗೆ entitle ಆಗುವುದಾದರೆ ವೀರಶೈವಧರ್ಮಕ್ಕೆ ಬಂದರೆ, ನಿಮ್ಮ ಹಿಂದೂ ಧರ್ಮದಲ್ಲಿ ಬೇರೆ ಜಾತಿಗೆ ಬಂದರೆ ಅದನ್ನು ಮುಂದುವರಿಸುವಂತಹ ಸ್ಥಿತಿಯನ್ನು ನಾವು ಇಲ್ಲಿ ನಿರ್ಮಾಣ ಮಾಡಬೇಕಾಗಿತ್ತು ಅದನ್ನು ನಾವು ಮಾಡಲಿಲ್ಲ ಇದನ್ನು ಜಾತಿ ಅಂದಿದೆ ಅದನ್ನು ಧರ್ಮ ಎನ್ನುತ್ತೇವೆ ನಾವು ಎಲ್ಲೋ ಒಂದು ಕಡೆಯಲ್ಲಿ ಅವರನ್ನು ಮೇಲಕ್ಕೆ ಹೋಗುವುದಕ್ಕೆ ಬೆಳೆಯುತ್ತಿರುವವರನ್ನು ಮಾಡುತ್ತಿರುವ ಹುನ್ನಾರವನ್ನು ಬಿಟ್ಟರೆ ಬಸವಣ್ಣನವರು ಯಾವ ಜನ್ಮದಲ್ಲಿ ಹುಟ್ಟಿದ್ದರೂ ಯಾವ ಜಾತಿಯಲ್ಲಿ ಹುಟ್ಟಿದ್ದರೂ, ಯಾರಿಗೆ ಹುಟ್ಟಿದರೂ ನಿಜವಾಗಲೂ ಅದು ನಮಗೆ ಅಪ್ರಸ್ತುತವಾದ ವಿಚಾರವಾಗಿರುವುದರಿಂದ ನಾವು ಮಾತನಾಡಬಾರದು ಎಂದರು, ಮುಂದಕ್ಕೆ ಹೋದರು ಬುದ್ಧಿಯಿರುವವರು ಯಾರಾದರೂ ಇದ್ದರೆ ಬ್ರಾಹ್ಮಣರಿಗೆ ಹುಟ್ಟಿದವರು ಎಂದು ವ್ಯಾಖ್ಯಾನ ಮಾಡುವರು ಬಸವಣ್ಣನವರನ್ನು

ಒಬ್ಬರನ್ನು ಹೀಗೆ ಹೇಳಿದರೂ ಗೊತ್ತಿಲ್ಲ ಕುವೆಂಪು ಬಗ್ಗೆ ಮಾತನಾಡುತ್ತಾರೆ ಅಂಬೇಡ್ಕರ ಬಗ್ಗೆ ಹೀಗೆ ಮಾತನಾಡುತ್ತಾರೆ ಬುದ್ಧ ಕ್ಷತ್ರೀಯನಾಗಿ ಹುಟ್ಟಿರುವುದೇ ಅನುಮಾನ ಶಿವಾಜಿಯ ಪರಂಪರೆಯ ಅನುಮಾನ, ಇದರ ಬಗ್ಗೆ ಪೂರ್ವಕವಾಗಿ ಮಾಹಿತಿಯನ್ನು ಕೊಡಬೇಕು, ಸುಮ್ಮನೆ ಆಡುಮುಟ್ಟಿದ ಸೊಪ್ಪು ಇಲ್ಲ ಎಂದು ಎಲ್ಲಾಕಡೆಗೆ ಹೀಗೆ ಅಂದುಕೊಂಡು ಅನುಮಾನಕ್ಕೆ ಆಸ್ಪದ ಕೊಟ್ಟುಕೊಂಡು ಹೋಗುವಂತಹ ಸಾಹಿತಿಗಳು ರಚನೆಯಾಗುವುದಕ್ಕೆ ಶುರುಮಾಡಿದರೆ ಈ ಸಮಾಜದ ಗತಿ ಏನು? ಧರ್ಮಗಳ ಗತಿ ಏನು? ಅದನ್ನು ಆಚರಣೆ ಮಾಡಿಕೊಂಡು ಬಂದಿರುವವರ ಗತಿ ಏನು? ಇದನ್ನು ಹೇಳಬೇಕು ಅವರು ಸ್ಪಷ್ಟವಾಗಿ ಸಂಶೋಧನೆ ಮಾಡಿ ಇಲ್ಲಿ ಇಟ್ಟುಬಿಟ್ಟರೆ ಅದನ್ನು ನಾವು ಒಪ್ಪಿಕೊಳ್ಳುತ್ತೇವೆ ನಮಗೆ ಏನು ಅವಮಾನವಿಲ್ಲ ಈ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಕೂಡ ಒಂದು ಮಿತಿ ಇರಬೇಕಾಗುತ್ತದೆ ಏನಾದರೂ ಮಾತನಾಡಬೇಕಾದರೆ ಅದಕ್ಕೆ ಒಂದು ಆಧಾರ ಇರಬೇಕಾಗುತ್ತದೆ ಬಾಯಿಗೆ ಬಂದದ್ದೆಲ್ಲಾ ಅಂದುಕೊಂಡು ಇನ್ನೊಬ್ಬರ ಮನಸ್ಸಿಗೆ ನೋವು ಉಂಟು ಮಾಡುವುದನ್ನು ಸಂವಿಧಾನ ಒಪ್ಪುವುದಿಲ್ಲ ಎಂಬ ಮಾತನ್ನಷ್ಟೇ ನಾನು ಈ ಸದನದಲ್ಲಿ ಹೇಳಲಿಚ್ಛಿಸುತ್ತೇನೆ

ಉಪಾಧ್ಯಕ್ಷರು · ಆಯಿತು, ಅವರು ಸ್ಟೇಟ್‌ಮೆಂಟ್ ಮಾಡಿದ್ದಾರೆ ನಾವು ಒಪ್ಪಿಕೊಂಡಿದ್ದೇವೆ ಮಾತನಾಡಬೇಕು, ಮಾತನಾಡಿದ್ದೂ ಆಯಿತು ಅದನ್ನೇ ಮಾತನಾಡುತ್ತಾ ಹೋದರೆ ಇದಕ್ಕೆ ಕೊನೆಯಿರುವುದಿಲ್ಲ

ಶ್ರೀ ಎಸ್ ಎಸ್ ಪಾಟೀಲ್ "ಧರ್ಮಕಾರಣ" ಕೃತಿಯನ್ನು ಮುಟ್ಟುಗೋಲು ಹಾಕಿದಾಗ, ಅದು ಸುಪ್ರೀಂ ಕೋರ್ಟ್‌ಗೆ ಹೋದಾಗ ಸುಪ್ರೀಂಕೋರ್ಟ್ ಅದನ್ನೇ ವ್ಯಾಖ್ಯಾನ ಮಾಡಿದೆ "ಭಾರತದ ಸಂವಿಧಾನವೂ ಒಬ್ಬ ಪ್ರಜೆಗೆ ದಯಪಾಲಿಸಿದ ಮೂಲಭೂತ ಹಕ್ಕುಗಳಲ್ಲಿ ಸಂವಿಧಾನದ 19(1) ವಿಧಿಪ್ರಕಾರ ಅಭಿವ್ಯಕ್ತಿ ಸ್ವಾತಂತ್ರವು ಒಂದಾದರೂ 19(2) ರಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಒಬ್ಬ ಪ್ರಜೆ ಸಂವಿಧಾನ ನಿಧಿ 51(ಎ) ರಲ್ಲಿ ನಮೂದಿಸಿದ ಒಬ್ಬ ಪ್ರಜೆಯ ಕರ್ತವ್ಯವನ್ನು ಗಮನವಿಟ್ಟುಕೊಳ್ಳಬೇಕು ಎಂದು ಹೇಳಿದೆ, 51(ಎ) ಜಿ ಪ್ರಕಾರ ಒಬ್ಬ ಪ್ರಜೆ ಬೇರೆಯವರ ಭಾವನೆಗಳ ಬಗ್ಗೆ ಗೌರವವನ್ನಿಟ್ಟುಕೊಂಡು ತನ್ನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಉಪಯೋಗಿಸಬೇಕೆಂದು ಹೇಳಿದೆ "ಸ್ಪಷ್ಟವಾಗಿ ಸುಪ್ರೀಂಕೋರ್ಟ್‌ನವರು ಹೇಳಿದ್ದಾರೆ

ಉಪಾಧ್ಯಕ್ಷರು ಸುಪ್ರೀಂಕೋರ್ಟ್ ಹೇಳಿದೆ ಈಗ ನೀವು ಏನು ಹೇಳಬೇಕು ಅದನ್ನು ಹೇಳಿ

ಶ್ರೀ ಎಸ್ ಎಸ್ ಪಾಟೀಲ್ · ಸುಪ್ರೀಂಕೋರ್ಟ್‌ನವರು ಸ್ಪಷ್ಟವಾಗಿ ವ್ಯಾಖ್ಯಾನ ಮಾಡಿದ್ದಾರೆ

ಉಪಾಧ್ಯಕ್ಷರು ಆಯಿತು ಈಗ ವಿರೋಧ ಪಕ್ಷದ ನಾಯಕರು ಮಾತನಾಡಿ

4 ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ಅ)**ವಿಷಯ** ಬೀದರ್ ಜಿಲ್ಲೆಯಲ್ಲಿ ಅಘೋಷಿತ ಬಂದನಿಂದಾಗಿ ಉದ್ಭವಿಸಿರುವ ಪರಿಸ್ಥಿತಿಯ ಬಗ್ಗೆ

ಶ್ರಿ ಬಿ ಟಿ ಪರಮೇಶ್ವರ ನಾಯಕ್ . ಆ ಕೆಲಸವನ್ನು ಮೊದಲು ಮಾಡಿ ಆಗ ಒಳ್ಳೆಯ ಕೆಲಸ ಯಾರು ಮಾಡಿದ್ದಾರೆ ಅದು ಗೊತ್ತಾಗುತ್ತದೆ ಅದು ಹೊರಕ್ಕೆ ಬರಲಿ ನಿಮಗೇ ಅಧಿಕಾರ ಇದೆಯಲ್ಲ, ನೀವೇ ಏಕೆ ಅದನ್ನು ಮಾಡಬಾರದು?

(ಗೊಂದಲ)

ಶ್ರೀ ಶರಣ ಪ್ರಕಾಶ ರುದ್ರಪ್ಪ ಪಾಟೀಲ್ ನೀವು ಮೈನರ್ ಇರಿಗೇಷನ್ ನಲ್ಲಿ ತೆಗೆದುಕೊಳ್ಳಿ ಇಲ್ಲಿಯವರೆಗೆ ಇದರಲ್ಲಿ ಒಂದೂ ಕೂಡ ಕ್ಷೇತ್ರವಾರು ಕೊಡುತ್ತಿಲ್ಲ ನಾನು 5 ಪ್ರಶ್ನೆ ಹಾಕಿದ್ದೇನೆ ಕಳೆದ ಎರಡು ಸದನದಿಂದ ಆದರೆ ಅವರು ಉತ್ತರವನ್ನೇ ಕೊಡುತ್ತಿಲ್ಲ ಇವತ್ತು ಹೈಸ್ಕೂಲ್ ಆಗಲಿ, ಕಾಲೇಜು ಆಗಲಿ, ಹಾಸ್ಟಲ್, ರಸ್ತೆಗಳಾಗಲಿ

ಉಪಾಧ್ಯಕ್ಷರು ಇದು ಯಾವುದೂ ರೆಕಾರ್ಡ್‌ಗೆ ಹೋಗಬಾರದು ಅವರು ಹೇಳಿದ್ದೆಲ್ಲ ರೆಕಾರ್ಡ್ ಮಾಡಿಕೊಳ್ಳಬೇಡಿ

ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಈ ರೀತಿ ತಾರತಮ್ಯ ಮುಂದುವರೆದರೆ ಖಂಡಿತವಾಗಿ ಈ ರಾಜ್ಯ ಒಂದಾಗಿ ಇರಲು ಸಾಧ್ಯವೇ ಇಲ್ಲ ಹೇಗೆ ಸಾದ್ಯ ಇದೆ ನೀವೇ ಹೇಳಿ

(ಗೊಂದಲ)

ಉಪಾಧ್ಯಕ್ಷರು ಮಾನ್ಯ ರಾಯರೆಡ್ಡಿಯವರೆ, ಈಗ ನೀವು ಮಾತನಾಡುತ್ತೀರೋ, ಇಲ್ಲವೋ?

(ಗೊಂದಲ)

ಶ್ರಿ ಬಸವರಾಜ ರಾಯರೆಡ್ಡಿ I have not yıelded

(ಗೊಂದಲ)

ಉಪಾಧ್ಯಕ್ಷರು ಹೀಗೆಯೇ ಸಾಕಷ್ಟು ಸಮಯ ವ್ಯಯವಾಯಿತು ಈಗಾಗಲೇ ಆರು ಗಂಟೆಯಾಯಿತು ತಾವು ಐದು ಗಂಟೆಗೇ ಮಾತನಾಡಲು ಆರಂಭಿಸಿದ್ದಿರಿ

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ ಯಾವುದೇ ವರ್ಗಕ್ಕೆ, ಯಾವುದೇ ಪ್ರದೇಶಕ್ಕೆ ತಾರತಮ್ಯ ತೋರಿಸುವುದಿಲ್ಲ, ದ್ವೇಷ, ರಾಗ ಇದೆಲ್ಲಾ ಮಾಡುವುದಿಲ್ಲವೆಂದು ತಾವು ಪ್ರಮಾಣ ವಚನವನ್ನು ಸ್ವೀಕಾರ ಮಾಡುವಾಗ ಹೇಳಿದ್ದೀರಿ ಇವತ್ತು ಇದರಿಂದ ಅಪಚಾರವಾಗಿದೆ ಇದನ್ನು ಸರಿ

ಮಾಡುವಂತಹ ಜವಾಬ್ದಾರಿ ಮತ್ತು ಹೊಣೆಗಾರಿಕೆ ಇವತ್ತು ಈ ಸರ್ಕಾರಕ್ಕೆ ಇದೆ ಈ ತಾರತಮ್ಯದಿಂದ ಸಂವಿಧಾನಕ್ಕೆ ಅಪಚಾರವಾಗುತ್ತಿದೆ ಆದ್ದರಿಂದ ಯಾವ ತರಹ ಇದನ್ನು ಸರಿ ಮಾಡುತ್ತಾರೆ ಎಂಬ ಬಗ್ಗೆ ಸರ್ಕಾರ ಸ್ಪಷ್ಟವಾಗಿ ಉತ್ತರವನ್ನು ಹೇಳಬೇಕು

(ಗೊಂದಲ)

ಉಪಾಧ್ಯಕ್ಷರು ಮಾನ್ಯ ರಾಯರೆಡ್ಡಿಯವರೆ, ತಾವು ಮಾತನಾಡಿದ್ದು ಮುಗಿಯಿತೇ? ಮಾನ್ಯ ಪಾಟೀಲ್‌ರೆ, ಕುಳಿತುಕೊಳ್ಳಿ

(ಗೊಂದಲ)

ಶ್ರೀ ಎಸ್ ಎಸ್ ಪಾಟೀಲ್ ಮಾನ್ಯ ಉಪಾಧ್ಯಕ್ಷರೆ, ಒಂದು ನಿಮಿಷ ನಾನು ಹೆಚ್ಚೇನೂ ಹೇಳುವುದಿಲ್ಲ ನಾವು ಯಾರೇ ಏನೇ ಮಾತನಾಡಬೇಕಾದರೂ ಕೂಡ ಕರ್ನಾಟಕ ಒಡೆಯಬೇಕೆನ್ನುವ ಧ್ವನಿಯನ್ನು ನಾವ್ಯಾರು ತೆಗೆಯುವುದು ಬೇಡ

(ಗೊಂದಲ)

ಶ್ರೀ ಬಿ ಆರ್ ಪಾಟೀಲ್ . ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಬಹಳ ಸೂಕ್ಷ್ಮವಾಗಿ ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ

(ಗೊಂದಲ)

ಶ್ರೀ ಎಸ್ ಎಸ್ ಪಾಟೀಲ್ ಇಡೀ ರಾಜ್ಯವನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಬೇಕು, ಆ ಮಾತು ಬೇರೆ ಆದರೆ ಈ ರೀತಿಯ ಅಪಸ್ವರ ಬೇಡ

(ಗೊಂದಲ)

ಶ್ರೀ ಬಿ ಆರ್ ಪಾಟೀಲ್ ಮಾನ್ಯ ಉಪಾಧ್ಯಕ್ಷರೆ, ನಮ್ಮ ಭಾಗದಲ್ಲಿ ನವೆಂಬರ್ 1ನೇ ತಾರೀಖಿಗೆ ಪ್ರತ್ಯೇಕತಾ ಧ್ವಜವನ್ನು ಕಳೆದ ನಾಲ್ಕಾರು ವರ್ಷಗಳಿಂದ ಹಾರಿಸುತ್ತಾ ಬಂದಿದ್ದಾರೆ ಇವತ್ತು ಇದು ಪ್ರಾರಂಭವಾಗಿದೆ ಇದು ದುರ್ದೈವದ ಸಂಗತಿಯಾಗಿದೆ ಇದು ಏಕೆ ಆಗಿದೆ ಎಂದರೆ, ಈ ಸರ್ಕಾರ ಆ ಸರ್ಕಾರ ಎಂದು ನಾನು ಹೇಳುವುದಿಲ್ಲ, ಎಲ್ಲಾ ಸರ್ಕಾರಗಳಿಂದ ನಮಗೆ ಅನ್ಯಾಯವಾಗಿದೆ ಆದರೆ ಮಾನ್ಯ ರಾಯರೆಡ್ಡಿಯವರು ಮತ್ತು ನಾವು ಹೇಳತಕ್ಕಂಥದ್ದು ಏನೆಂದರೆ, ಮುಂದಾದರೂ ಕೂಡ ಈ ಕರ್ನಾಟಕ ಅಖಂಡವಾಗಿ ಉಳಿಯಬೇಕು, ಈ ಕರ್ನಾಟಕ ಒಂದು ಭಾಷಾ ಆಧಾರಿತ ಪ್ರಾಂತ್ಯವಾಗಿ ಸಮೃದ್ಧವಾಗಿ ಬೆಳೆಯಬೇಕು, ಇಡೀ ದೇಶದಲ್ಲಿ ಒಂದು ಉತ್ತಮ ನಾಡನ್ನು ಕಟ್ಟಬೇಕೆಂಬುದು ಆಗಿದ್ದರೆ, ಕನ್ನಡ ನಾಡಿನ ಅಭಿಮಾನ ಇಟ್ಟುಕೊಂಡು ನಾವೇನು ಇಲ್ಲಿ ಸೇರಿದ್ದೇವೋ, ನಮಗೆ ಅನ್ಯಾಯ ಮಾಡುವುದು ಬೇಡ ನಾವು ಯಾರಿಗೂ ಅನ್ಯಾಯ ಮಾಡುವುದು ಬೇಡ ದಯಮಾಡಿ ಸರ್ಕಾರದಲ್ಲಿ ಇರುವವರು ಆ ವಿಚಾರವನ್ನು ಗಮನಕ್ಕೆ ತೆಗೆದುಕೊಳ್ಳಬೇಕು ಇಲ್ಲದಿದ್ದರೆ, ಈ

ಪ್ರತ್ಯೇಕತಾವಾದಿಗಳಿಗೆ ಶಕ್ತಿ ಸಿಗುತ್ತದೆ, ಪ್ರತ್ಯೇಕತಾವಾದಿಗಳಿಗೆ ಬಲ ಸಿಗುತ್ತದೆ ನಾವು ಅವರ ಪರವಾಗಿಲ್ಲ ಆದರೆ ಇಂತಹ ಪರಿಸ್ಥಿತಿ ಬಂದರೆ,

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ No chance at all

(ಗೊಂದಲ)

ಉಪಾಧ್ಯಕ್ಷರು ಇಲ್ಲ ಇದು ಆಗುವುದಿಲ್ಲ ಬಿಡಿ

(ಗೊಂದಲ)

ಶ್ರೀ ಹೆಚ್ ಡಿ ರೇವಣ್ಣ ಈ ಸರ್ಕಾರದಲ್ಲಿ ಮಾನ್ಯ ರಾಯರೆಡ್ಡಿಯವರು ಮಾಡಿಸಿಕೊಂಡಿರುವಷ್ಟು ಕೆಲಸವನ್ನು ಇನ್ಯಾರೂ ಮಾಡಿಸಿಕೊಂಡಿಲ್ಲ ಆದ್ದರಿಂದ ದಯಮಾಡಿ ಅವರು ಟೀಕೆ ಮಾಡುವುದನ್ನು ಬಿಡಬೇಕಾಗುತ್ತದೆ ಅವರು ಕೆಲಸ ಮಾಡಿಸಿಕೊಳ್ಳದೇ ಹೋಗಿದ್ದರೆ ಬೇಕಾದರೆ ಟೀಕೆ ಮಾಡಲಿ

(ಗೊಂದಲ)

ಶ್ರೀ ಬಿ ಆರ್ ಪಾಟೀಲ್ ಸತ್ಯ ಹೇಳಿದರೆ ನಿಮಗೇಕೆ ಬೇಸರವಾಗುತ್ತದೆ? ಇದು on record ಇದೆ ಮಾನ್ಯ ರಾಯರೆಡ್ಡಿಯವರು ತಮ್ಮಗೊಬ್ಬರಿಗೆ ಕೇಳುತ್ತಿಲ್ಲ

(ಗೊಂದಲ)

ನಾನು ನನ್ನಕ್ಷೇತ್ರದ ವಿಚಾರವನ್ನಷ್ಟೇ ಮಾತನಾಡುತ್ತಿಲ್ಲ ನಾನು ಉತ್ತರ ಕರ್ನಾಟಕದ ವಿಚಾರವನ್ನು ಮಾತನಾಡುತ್ತಿದ್ದೇನೆ ನಾನು ಹೊಳೆನರಸೀಪುರ ಅಥವಾ ಯಲ್ಬರ್ಗ ಬಗ್ಗೆ ಮಾತನಾಡುತ್ತಿಲ್ಲ

ಶ್ರೀ ಹೆಚ್ ಡಿ ರೇವಣ್ಣ ನೀವು ಹೊಳೆನರಸೀಪುರದ ಬಗ್ಗೆ ಮಾತನಾಡುತ್ತೀರಲ್ಲಾ, ನಿಮಗೆ ಪ್ರಥಮ ದರ್ಜೆ ಕಾಲೇಜ್ ಅನ್ನು ಮಂಜೂರು ಮಾಡಿಸಿಲ್ಲವೇ?

ಶ್ರೀ ಬಸವರಾಜ ರಾಯರೆಡ್ಡಿ ನಾನು ಮಾಡಿಸಿಲ್ಲವೆಂದು ಹೇಳಲಿಲ್ಲ

ಶ್ರೀ ಹೆಚ್ ಡಿ ರೇವಣ್ಣ ಹೊಳೆನರಸೀಪುರಕ್ಕೆ ಮಾಡಿರುವ ಬಗ್ಗೆ ಮಾತನಾಡುತ್ತೀರಲ್ಲಾ? ಹಾಗಾದರೆ ನೀವು ನಿಮ್ಮ constituency ಗೆ ಏಕೆ ಮಾಡಿಸಿಕೊಂಡಿರಿ? ಜನ ನಿಮಗೆ ಓಟು ಕೊಟ್ಟಿಲ್ಲವೇ?

ಶ್ರೀ ಬಸವರಾಜ ರಾಯರೆಡ್ಡಿ ನಾನು ಇಲ್ಲವೆಂದು ಹೇಳಲಿಲ್ಲ ನೀವು ಮಂಜೂರು ಮಾಡಿದ್ದಕ್ಕೆ ನಾನು ನಿಮ್ಮನ್ನು ಪ್ರಶಂಸೆ ಮಾಡಿದೆ ನೀವು ಆ ತರಹ ಇಡೀ ರಾಜ್ಯಕ್ಕೆ ಮಾಡಿ ಎಂದು ನಾನು ಹೇಳುತ್ತಿದ್ದೇನೆ ಅದೇ ರೀತಿ ಎಲ್ಲಾ ಕ್ಷೇತ್ರಗಳಿಗೂ ಮಾಡಿದರೆ ನಿಮಗೆ ವಂದನೆಗಳನ್ನು ಸಲ್ಲಿಸುತ್ತೇವೆ

(ಗೊಂದಲ)

ಹೊಳೆನರಸೀಪುರಕ್ಕೆ ಮಾಡಿರುವುದು ಸರಿಯಲ್ಲವೆಂದು ನಾನು ಹೇಳಲಿಲ್ಲ ನಾನು ಪ್ರಶಂಸೆ ಮಾಡಿದೆ ಮಾನ್ಯ ಲೋಕೋಪಯೋಗಿ ಮಂತ್ರಿಯಾಗಿ ನೀವು ಅದನ್ನು

ಎಲ್ಲಾ ಕಡೆಗೂ ಮಾಡಿ ಎಂದು ನಾನು ಹೇಳುತ್ತಿದ್ದೇನೆ ಆ Yard stick ಅನ್ನು as a Minister ಎಲ್ಲಾ ಕಡೆಗೂ ಮಾಡಿ ಎಂದು ನಾನು ಹೇಳುತ್ತಿದ್ದೇನೆ

(ಗೊಂದಲ)

ಉಪಾಧ್ಯಕ್ಷರು . ಈಗ ಆ subject ಬಿಡಿ ಅದನ್ನೇ ಮುಂದುವರೆಸಿಕೊಂಡು ಹೋಗುವುದರಲ್ಲಿ ಅರ್ಥವಿಲ್ಲ ಮುಂದಿನ ವಿಷಯಕ್ಕೆ ಹೋಗಿ ನೀವಿನ್ನೂ ಅದರಲ್ಲೇ ಇದ್ದೀರಲ್ಲಾ?

(ಗೊಂದಲ)

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ರಾಯರೆಡ್ಡಿಯವರೆ, ಒಂದೇ ಒಂದು ನಿಮಿಷ ಯೀಲ್ಡ್ ಆಗಿ

(ಗೊಂದಲ)

ಉಪಾಧ್ಯಕ್ಷರು ಎಲ್ಲರಿಗೂ ಯೀಲ್ಡ್ ಆಗಿ ಐದು ಗಂಟೆಗೆ ಮಾತನಾಡಲು ಆರಂಭಿಸಿ ಈಗಾಗಲೇ ಒಂದು ಗಂಟೆಯಾಗಿದೆ

(ಗೊಂದಲ)

ಶ್ರೀ ಕೆ ಶ್ರೀನಿವಾಸಗೌಡ ಮಾನ್ಯ ಬಿ ಆರ್ ಪಾಟೀಲ್‌ರವರು ನಮಗೆ ಸ್ವಾತಂತ್ರ್ಯ ಬಂದಾಗಿನಿಂದ ಉತ್ತರ ಕರ್ನಾಟಕದ ಅಭಿವೃದ್ಧಿ ಕುರಿತವಾಗಿದೆ ಎಂದು ಹೇಳಿದರು ಇಲ್ಲಿ ಬಹಳ ಮೂಲಭೂತವಾಗಿ ಯೋಜನೆ ಮಾಡಬೇಕಾಗಿರುವುದು ಏನೆಂದರೆ, ಈ ಹಳೆ ಮೈಸೂರಿನಲ್ಲಿ ನಮ್ಮ ಮೈಸೂರು ಮಹಾರಾಜರು ಆಳಿರುವುದಕ್ಕೂ, ಅಲ್ಲಿ ನಿಜಾವಾರು ಆಡಳಿತ ನಡೆಸಿದ್ದಕ್ಕೂ ವ್ಯತ್ಯಾಸವಿದೆ ಆ ಕಾರಣಗಳಿಂದ ಅದು ಹಿಂದುಳಿದಿದೆಯೇ ವಿನಃ ಇತರ ಕಾರಣಗಳಿಂದಲ್ಲ ಸರ್ಕಾರವೆಂದ ಮೇಲೆ ಎಲ್ಲಾ ಕಡೆಗಳಲ್ಲೂ ಅಭಿವೃದ್ಧಿಪಡಿಸಬೇಕು ಆದರೆ ಅವರು ಎಷ್ಟು ಉದ್ಧಾರ ಮಾಡಬೇಕಾಗಿತ್ತೋ ಅಷ್ಟು ಉದ್ಧಾರ ಮಾಡಲಿಕ್ಕೆ ಆಗಿರಲಿಲ್ಲ ಆ ಮಹಾರಾಜರುಗಳು ಅಷ್ಟೊಂದು ಹಾಳು ಮಾಡಿ ಹೋಗಿದ್ದರು ಆದರೆ ನಮ್ಮ ಹಳೆಯ ಮೈಸೂರಿನ ಮಹಾರಾಜರುಗಳು ಮತ್ತು ಅವರ ವಂಶಸ್ಥರು ಸ್ವಲ್ಪ ಅಭಿವೃದ್ಧಿ ಕಡೆಗೆ ಗಮನ ಕೊಟ್ಟಿದ್ದರು ಎಲ್ಲಾ ವಿಧದಲ್ಲೂ ಅವತ್ತು Representative of Assembly ಕೆಲಸ ಮಾಡಿದ್ದರಿಂದ ಸ್ವಲ್ಪ ಈ ಹಳೆಯ ಮೈಸೂರು ಭಾಗ ಅಭಿವೃದ್ಧಿಯಾಗಿದೆ ಅದರ ಜೊತೆಗೆ ಆದ್ಯತೆಗಳು ಇರಬಹುದು, ಇಲ್ಲವೆಂದು ನಾನು ಹೇಳುವುದಿಲ್ಲ ಆದರೆ ಎಲ್ಲವೂ ಅಭಿವೃದ್ಧಿಯಾಗಬೇಕು ನಾನು ಹೇಳುವುದು ಇಷ್ಟೇ, ದಯವಿಟ್ಟು ಎಲ್ಲೂ ಕೂಡ ಕೂಗಿದೆ ಎಂದು ಹೇಳಬಾರದು ಇಡೀ ರಾಜ್ಯದ ಏಕೀಕರಣಕ್ಕೆ ದುಡಿದವರು ಇನ್ನೂ ಬದುಕಿರುವಾಗಲೇ ಈ ಮಾತನ್ನುಹೇಳಬಾರದು ಅಂದು ದುಡಿದಂತಹ ಮಾನ್ಯ ಪಾಟೀಲ್‌ಪುಟ್ಟಪ್ಪನವರು ಇನ್ನೂ ಬದುಕಿದ್ದಾರೆ

(ಗೊಂದಲ)

ಉಪಾಧ್ಯಕ್ಷರು ಪ್ರತ್ಯೇಕತೆ ಬಗ್ಗೆ ಮಾತನಾಡುವುದಿದ್ದರೆ ಅದನ್ನು ಅವರು separate ಆಗಿ ಇಟ್ಟುಕೊಳ್ಳಲಿ ಆ ಬಗ್ಗೆ ಇಲ್ಲಿ ಮಾತುಗಳು ಬರುವುದು ಬೇಡ ಆ ವಿಷಯವನ್ನು ಬಿಟ್ಟುಬಿಡಿ

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ರೇವಣ್ಣನವರೆ, ನಮಗೊಂದು ಇಂಜಿನಿಯರಿಂಗ್ ಕಾಲೇಜ್ ಮಾಡಿಕೊಡಿ ನಿಮಗೊಂದು ಅಭಿನಂದನೆ ಸಲ್ಲಿಸುತ್ತೇನೆ ನೀವು ನಮಗೆ ಅದನ್ನು ಮಾಡಿಕೊಡುತ್ತೀರಾ? ನಮ್ಮ ಯಲಬುರ್ಗಾಕ್ಕೊಂದು ಇಂಜಿನಿಯರಿಂಗ್ ಕಾಲೇಜ್ ಅನ್ನು ಮಾಡಿಸಿಕೊಡಿ ಎಂದು ಮಾನ್ಯ ರೇವಣ್ಣನವರ ಮುಖಾಂತರ ಸರ್ಕಾರಕ್ಕೆ ಅರ್ಜಿ ಹಾಕುತ್ತಿದ್ದೇನೆ ಅದನ್ನು ಮಾಡಿದರೆ ನಾನು ನಿಮಗೊಂದು ಅಭಿನಂದನೆ ಸಲ್ಲಿಸುತ್ತೇನೆ

ಉಪಾಧ್ಯಕ್ಷರು ಸುಮ್ಮನೆ ಏನೇನೋ ಕೇಳುತ್ತೀರಲ್ಲಾ?

ಶ್ರೀ ಹೆಚ್ ಡಿ ರೇವಣ್ಣ ಮಾನ್ಯ ಉಪಾಧ್ಯಕ್ಷರೆ, ಅವರು ಇಂಜಿನಿಯರಿಂಗ್ ಕಾಲೇಜ್ ಬಗ್ಗೆ ಮಾತನಾಡಿದರು ಮೈಸೂರು ಮಹಾರಾಜರು 1937ನೇ ಇಸವಿಯಲ್ಲಿ ಬೆಂಗಳೂರಿನಲ್ಲೊಂದು ಇಂಜಿನಿಯರಿಂಗ್ ಕಾಲೇಜ್ ಮಾಡಿದರು ಅದನ್ನು ಬಿಟ್ಟರೆ ಇವತ್ತಿನವರೆಗೂ ಇಲ್ಲಿ ಒಂದೇ ಒಂದು ಇಂಜಿನಿಯರಿಂಗ್ ಕಾಲೇಜ್ ಕೂಡ ಆಗಿಲ್ಲ ಅದರಲ್ಲಿ ಕೇವಲ ಮೂರು ಕೋರ್ಸ್‌ಗಳು ಮಾತ್ರ ಇದೆ Textile, Design ಮತ್ತು Survey ಮಾಡುವುದು, ಈ ಮೂರು ಕೋರ್ಸ್‌ಗಳು ಮಾತ್ರ ಅದರಲ್ಲಿದೆ ಅಲ್ಲಿಗೆ ಯಾರೂ admissionಗೆ ಬರಬಾರದು ಇಲ್ಲಿಯವರೆಗೆ 50 ವರ್ಷಗಳಲ್ಲಿ 170 ಕೋಟಿ ರೂ ಗಳನ್ನು ಖರ್ಚು ಮಾಡಿದ್ದಾರೆ 170 ಕೋಟಿ ರೂ ಗಳನ್ನು ಯಾವ ಯಾವ ಕಾಲೇಜಿಗೆ ಕೊಟ್ಟಿದ್ದಾರೆ ಎನ್ನುವುದನ್ನು ದಯಮಾಡಿ ಹೇಳಿ ಈಗ ಉದಾಹರಣೆಗೆ ಹೇಳುವುದಾದರೆ, ಈಗ ಮಾನ್ಯ ರಾಯರೆಡ್ಡಿಯವರು ಹೇಳಿದರು ಯಾವ ಕ್ಷೇತ್ರಕ್ಕೆ ಏನೇನು ಕೊಟ್ಟರು? ಯಾವ ಯಾವ ವಿಧಾನಸಭಾ ಕ್ಷೇತ್ರಗಳಿಗೆ ಏನೇನು ಕೆಲಸ ನಡೆದಿದೆ ಎಂಬ ಬಗ್ಗೆ ಚರ್ಚೆಯಾಗಲಿ ಅದನ್ನೇನು ನಾನು ಬೇಡ ಎನ್ನುವುದಿಲ್ಲ ನನಗೆ ಕೊಟ್ಟಿದ್ದರೆ, ಬೇರೆ ಕ್ಷೇತ್ರದಲ್ಲೂ ಸರಿಪಡಿಸಿ ಎಂದು ಹೇಳುತ್ತೇನೆ ನನಗೊಂದು First Grade College ಕೊಟ್ಟಿದ್ದಾರೆ, ನಿಮಗೊಂದು First Grade College ಕೊಟ್ಟಿದ್ದಾರೆ, ನನಗೊಂದು ITI ಕೊಟ್ಟಿದ್ದಾರೆ, ನಿಮಗೊಂದು ITI ಕೊಟ್ಟಿದ್ದಾರೆ, ಯಾವ ರೀತಿ ಇದರಲ್ಲಿ ಭೇದಭಾವವಾಗಿದೆ? ನಿಮ್ಮ ಕ್ಷೇತ್ರ ಬಿಟ್ಟು ನೀವು ಉತ್ತರ ಕರ್ನಾಟಕ ಬೇರೆ ಕ್ಷೇತ್ರದ ಬಗ್ಗಯೇನೂ ಇಲ್ಲ ಭಾಷಣ ಮಾಡುತ್ತಿಲ್ಲವಲ್ಲಾ?

(ಗೊಂದಲ)

ಡಾ· ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ ಉತ್ತರ ಕರ್ನಾಟಕದಲ್ಲಿ ಕೇವಲ ಮಾನ್ಯ ರಾಯರೆಡ್ಡಿಯವರೊಬ್ಬರೇ ಇಲ್ಲ ನಾವೂ ಇದ್ದೇವೆ ದಯಮಾಡಿ ನಮ್ಮ ಕಡೆಗೂ ಸ್ವಲ್ಪ ನೋಡಿ

(ಗೊಂದಲ)

ಶ್ರಿ ಹೆಚ್ ಡಿ ರೇವಣ್ಣ ಈ ಸಾರಿ 160 ಕಾಲೇಜುಗಳನ್ನು ಕೊಟ್ಟಿದ್ದೇವೆ ನೀವು 15 ವರ್ಷಗಳಿಂದ ಒಂದೂ ಕಾಲೇಜನ್ನು ಕೊಡಲಿಕ್ಕೆ ಆಗುತ್ತಿರಲಿಲ್ಲ 1000 ಹೈಸ್ಕೂಲ್‌ಗಳನ್ನು ಕೊಟ್ಟಿದ್ದೇವೆ

(ಗೊಂದಲ)

ಡಾ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ · ನಮ್ಮ ಕಡೆಗೆ ನೀವು ಏನನ್ನೂ ಕೊಟ್ಟಿಲ್ಲ ಕೇವಲ ಬಿ ಜೆ ಪಿ ಮತ್ತು ಜೆ ಡಿ [ಎಸ್]ಎಂಎಲ್‌ಎ ಇರುವ ಕಡೆಗಳಲ್ಲಿ ಮಾತ್ರ ಕೊಟ್ಟಿದ್ದೀರಿ

(ಗೊಂದಲ)

ಶ್ರಿ ಬಸವರಾಜ ರಾಯರೆಡ್ಡಿ ಮಾನ್ಯ ಉಪಾಧ್ಯಕ್ಷರೆ ನೀರಾವರಿ ವಿಚಾರಗಳನ್ನು ಅತ್ಯಂತ ಗಂಭಿರವಾಗಿ ವಿಚಾರ ಮಾಡುವಂತಹ ಕಾಲ ಇದಾಗಿದೆ ನಮ್ಮ ರಾಜ್ಯದಲ್ಲಿ ಮುಖ್ಯವಾಗಿ ನಾಲ್ಕು ಜಲಾನಯನ ಪ್ರದೇಶಗಳಿವೆ ಒಟ್ಟು 4000 ಟಿಎಂಸಿ ನೀರು ಇಳುವರಿ ನಮ್ಮ ರಾಜ್ಯದಲ್ಲಿ ಸಿಗುತ್ತದೆ ಅದರಲ್ಲಿ ಮುಖ್ಯವಾಗಿ ಕೃಷ್ಣಾ ಜಲಾನಯನ ಪ್ರದೇಶ ಅಂದರೆ ತುಂಗಭದ್ರ, ಘಟ್ಟಪ್ರಭಾ, ಮಲಪ್ರಭಾ ಇವೆಲ್ಲಾ ಉಪ ನದಿ ಸೇರಿದಂತಹ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ಸುಮಾರು 1 ಲಕ್ಷ 92 ಸಾವಿರ Sq Km ನಲ್ಲಿ 1 ಲಕ್ಷ 13 ಸಾವಿರ Sq Km ಕೃಷ್ಣಾ ಜಲಾನಯನ ಪ್ರದೇಶ ನಮ್ಮ ರಾಜ್ಯದಲ್ಲಿದೆ Annual yıeld of the Krıshna ಜಲಾನಯನ ಪ್ರದೇಶ ıs 1200 ಟಿಎಂಸಿ ಕಾವೇರಿ ಜಲಾನಯನ ಪ್ರದೇಶ ಸುಮಾರು 36 ಸಾವಿರ Sq Km ಇದೆ ಅದರಲ್ಲಿ ಕೇರಳದ್ದೂ ಸೇರಿಕೊಂಡು ಸುಮಾರು 465 ಟಿಎಂಸಿ ನೀರಿನ ಲಭ್ಯತೆ ಇದೆ ಗೋದಾವರಿ ಮತ್ತು ಪೆನ್ನಾರ್ 17 ಸಾವಿರ Sq Km ಪ್ರದೇಶವಿದೆ ಆದ್ದರಿಂದ ಸುಮಾರು 85 ಟಿಎಂಸಿ ಸಿಗುತ್ತದೆ ಪಶ್ಚಿಮ ವಾಹಿನಿ ಸುಮಾರು 2200 ಟಿಎಂಸಿ ನೀರು ಅಲ್ಲಿ ಲಭ್ಯವಿದೆ ಹೀಗೆ ಒಟ್ಟು ಸುಮಾರು 4000 ಟಿಎಂಸಿ ನೀರಿನ ಬಳಕೆಯಲ್ಲಿ ಇವತ್ತು ನಾವು 2000 ಟಿಎಂಸಿ ನೀರನ್ನು ಕಾವೇರಿ, ಕೃಷ್ಣಾ ಮತ್ತು ಗೋದಾವರಿಯಲ್ಲಿ ಬಳಸಿಕೊಳ್ಳಬೇಕಾಗಿದೆ ಈಗಾಗಲೇ ತಮಗೆ ಗೊತ್ತಿದ್ದಂತೆ, ಈ ಕೃಷ್ಣಾ ಜಲಾನಯನ ಪ್ರದೇಶದಲ್ಲಿ ನೀರಾವರಿಗಾಗಿ ಈಗ ನೀರಿನ ಬಳಕೆ ಆಗಬೇಕಾಗಿದೆ ಅದಕ್ಕೊಂದು ದೊಡ್ಡ ಇತಿಹಾಸವಿದೆ 1960ರಲ್ಲಿ ಆ ಹೋರಾಟ ಪ್ರಾರಂಭವಾಯಿತು ಮಾನ್ಯ ನಿಜಲಿಂಗಪ್ಪನವರು ಮುಖ್ಯಮಂತ್ರಿಗಳಾಗಿದ್ದಾಗ, 60ರ ದಶಕದಲ್ಲಿ ಕರ್ನಾಟಕದಲ್ಲಿ ಪ್ರತ್ಯೇಕವಾದ ರಾಷ್ಟ್ರೀಯ ಜಲ ನೀತಿಯನ್ನು ಮಾಡಬೇಕೆಂದು ಕೇಂದ್ರ ಸರ್ಕಾರವನ್ನು ಒತ್ತಾಯಿಸಲಾಯಿತು ಇದಾದ ಮೇಲೆ

ಮಹಾರಾಷ್ಟ್ರ ಕೂಡ ಒತ್ತಾಯ ಮಾಡಿತು ಅವರು ಒತ್ತಾಯ ಮಾಡಿದ ಮೇಲೆ Tribunalನ್ನು ಕೇಂದ್ರ ಸರ್ಕಾರವು 1969ರಲ್ಲಿ ಬಚಾವತ್ ಆಯೋಗದ ನೇತೃತ್ವದಲ್ಲಿ ರಚನೆ ಮಾಡಿತು ಆದರೆ ದುರಾದೃಷ್ಟವಶಾತ್ ಮಾನ್ಯ ಎಂ ಪಿ ಪ್ರಕಾಶ್‌ರವರಿಗೆ ಗೊತ್ತಿದೆ ಈ Tribunal ರಚನೆಯಾದಾಗ ಆಂಧ್ರಪ್ರದೇಶದ ನಾಗಾರ್ಜುನ ಸಾಗರ complete ಆಗಿತ್ತು Nagarjuna Sagar Dam was completed ಅವತ್ತಿನದಿವಸ ಡಾ ಕೆ ಎಲ್ ರಾವ್‌ರವರು ಕೇಂದ್ರದಲ್ಲಿ ನೀರಾವರಿ ಮಂತ್ರಿಗಳಾಗಿದ್ದರು ಇದು ಮುಗಿದ ಮೇಲೆ Tribunal ರಚನೆಯಾಯಿತು ಹೀಗಾಗಿ ನಮಗೂ ಕೂಡ ಬಚಾವತ್ ಅಯೋಗದ ನೀರಿನ ಹಂಚಿಕೆಯಲ್ಲಿ ಕೂಡ ಕೇಂದ್ರದಿಂದ ಬಹಳ ಅನ್ಯಾಯವಾಗಿದೆ 1,13,000 ಜಲಾನಯನ ಪ್ರದೇಶದಲ್ಲಿ 1200 ಟಿಎಂಸಿ ಯೀಲ್ಡ್ ಇದ್ದರೆ ಬಚಾವತ್ ಕಮಿಷನ್ ನಮಗೆ ಮಾಡಿದೆಷ್ಟು ಎಂದರೆ, 700 ಟಿಎಂಸಿ ಮಾತ್ರ Re-Generation ಸೇರಿಸಿ 34 ಟಿಎಂಸಿ ಅದರಲ್ಲಿ STMC ತೆಲಗುಗಂಗಾಗೆ ಕೊಟ್ಟರೆ 729 ಟಿಎಂಸಿ ಮಾತ್ರ ನಮಗೆ ಅಲಾಟ್ ಆಯಿತು ಕೃಷ್ಣಾ ನದಿಯ 47 5% ನಮ್ಮ ಏರಿಯಾ ಇದೆ, ಮಹಾರಾಷ್ಟ್ರ 28% ಏರಿಯಾ ಇದೆ, ಅದಕ್ಕೆ 500 ಟಿಎಂಸಿ ಕೊಟ್ಟರು ಆಂಧ್ರಪ್ರದೇಶದ ಜಲಾನಯನ ಪ್ರದೇಶ ಕೇವಲ 24 5% ಅವರಿಗೆ 800 ಟಿಎಂಸಿಯನ್ನು ಅಲಾಟ್ ಮಾಡಿದರು ಇದಕ್ಕೆ ಕಾರಣವೇನೆಂದರೆ, ನಾಗಾರ್ಜುನ ಸಾಗರವನ್ನು ಕಟ್ಟಿದ ಮೇಲೆ ಏನು Tribunal ಆಯಿತು ಇದರಿಂದ ದೊಡ್ಡ ಅನ್ಯಾಯ ಕರ್ನಾಟಕಕ್ಕೆ ಆಗಿದೆ ಮಾನ್ಯ ಯಡಿಯೂರಪ್ಪನವರೆ, ಇದನ್ನು ನಾವು "ಬಿ"ಸ್ಕೀಮ್‌ನಲ್ಲಿ ಸರಿಪಡಿಸಬೇಕಾಗಿದೆ "ಬಿ" ಸ್ಕೀಮ್‌ನ Tribunal ಬ್ರಿಜೇಶ್ ಕುಮಾರ್‌ರವರ ನೇತೃತ್ವದಲ್ಲಿ ಏನಾಗಿದೆ ಎಂದರೆ, ಇದರ ಬಗ್ಗೆ ಸರ್ಕಾರದವರು ಬಹಳ ಗಂಭೀರವಾಗಿ ಚಿಂತನೆಯನ್ನು ಮಾಡಬೇಕಾಗಿದೆ ನಮ್ಮ ವಾದ ಏನೆಂದರೆ, ಸರಿಯಾಗಿ ಇನ್ನು 400 ಟಿಎಂಸಿಗೆ ನೀರು ಹಂಚಿಕೆಯಾಗುತ್ತದೆ, ಅದರ ಬಗ್ಗೆ ಸರ್ಕಾರ ಬಹಳ ಗಮನವನ್ನು ಹರಿಸಬೇಕಾಗುತ್ತದೆ ಏಕೆಂದರೆ ಇದರಲ್ಲಿ ನಮಗೆ ನ್ಯಾಯ ಸಿಗಬೇಕಾಗುತ್ತದೆ ಇದರ ಬಗ್ಗೆ ಮಾನ್ಯ ಎಂ ಪಿ ಪ್ರಕಾಶ್‌ರವರಿಗೆ ಗೊತ್ತು ಈ ತುಂಗಾಭದ್ರ ನದಿಯಿಂದ Scheme-A ನಲ್ಲಿ 500 ಟಿಎಂಸಿ yield ತುಂಗಾಭದ್ರ ಇದೆ ಈ 500 TMC ಯಲ್ಲಿ restriction ಹಾಕಿದರು ತುಂಗಾಭದ್ರಾದಲ್ಲಿ 120 ಟಿಎಂಸಿ ನೀರನ್ನು ಮಾತ್ರ ನೀವು ಬಳಸಬೇಕೆಂದು restriction ನ್ನು ಹಾಕಿದರು ಈ ಬಗ್ಗೆ ನನಗೆ ಆಶ್ಚರ್ಯವಾಗುತ್ತದೆ ಬಚಾವತ್ Tribunal ನಲ್ಲಿ ಏತಕ್ಕಾಗಿ restriction ಒಂದು ನದಿಗೆ ಹಾಕಿದರು ಇದಕ್ಕೆ ಕಾರಣವೆಂದರೆ, ಆ ನದಿಯ ನೀರು ಒಂದು ಕಾಲುವೆಯ ಮುಖಾಂತರ ಆಂಧ್ರಪ್ರದೇಶಕ್ಕೆ ಹೋಗುತ್ತದೆ Because the dam was the joint venture of Nizam and Madras Presidency ಈಗಿನ

ಆಂಧ್ರಪ್ರದೇಶ ರಾಯಲ್‌ಸೀಮಾ ಏರಿಯಾ was part of the Madras Presidency ಹೀಗಾಗಿ ಆಂಧ್ರದವರ ಒಂದು ಒತ್ತಾಯಕ್ಕೆ ಮಣಿದು Tribunal ಮತ್ತೆ 320 ಟಿಎಂಸಿಗೆ restriction ನ್ನು ಹಾಕಿದರು ನಾವು ಅದನ್ನು "ಬಿ" ಸ್ಕೀಮ್‌ನಲ್ಲಿ ತೆಗೆಸಿ ಹಾಕಬೇಕು ಇಲ್ಲದೇ ಹೋದರೆ ನಿಮ್ಮ ಸಿಂಗಟಾಲೂರು ಯೋಜನೆ ಆಗುವುದಿಲ್ಲ ಅಥವಾ ನಿಮ್ಮ ತುಂಗಾಭದ್ರದ ನೀರಿನಲ್ಲಿ ಏನು ಹೂಳು ಬರುತ್ತದೆ ಅದರಲ್ಲಿ 134 TMC storage ಅಲ್ಲಿ ಇದೆ ಅದು 102 ಕ್ರಮೇಣ ಟಿಎಂಸಿಗೆ ಇಳಿದಿದೆ ಸುಮಾರು 32 ಟಿಎಂಸಿ ತುಂಗಭದ್ರ ಅಣೆಕಟ್ಟಿನಲ್ಲಿ ಹೂಳು ಬಂದಿದೆ ಆ ನೀರು ಇವತ್ತು ಆಂಧ್ರಕ್ಕೆ ಹೋಗುತ್ತಿತ್ತು ನಾವು 30 ಟಿಎಂಸಿ ನೀರನ್ನು ಹೇಗೆ ಬಳಕೆ ಮಾಡಬೇಕೆಂಬುದರ ಬಗ್ಗೆ ಗಂಭೀರವಾಗಿ ಚಿಂತನೆಯನ್ನು ಈ ಸರ್ಕಾರ ಮಾಡಬೇಕಾಗಿದೆ ಇದರ ಜೊತೆಗೆ 729 ಟಿಎಂಸಿ ಇದೆಯಲ್ಲಾ, ಈ ನೀರನ್ನು ಬಳಸಿಕೊಳ್ಳಬೇಕಾಗಿದೆ ನೀರಾವರಿಗೆ ನಾವು ಹೆಚ್ಚು ಮಹತ್ವವನ್ನು ಕೊಡಬೇಕಾಗಿತ್ತು ಆದರೆ ಯಾವುದೋ ಕೆಲವು ಜನಪ್ರಿಯ ಕಾರ್ಯಕ್ರಮಗಳು ಇವತ್ತು ಏನಾಗಿದೆ ಇವತ್ತಿನವರೆಗೂ ಕೂಡ 600 ಟಿಎಂಸಿ ನೀರು ಮಾತ್ರ ಬಳಕೆ ಮಾಡುವುದಕ್ಕೆ ಸಾಧ್ಯವಾಗಿದೆ ಇನ್ನು 130 ಟಿಎಂಸಿ ನೀರನ್ನು ನಾವು field ಹಚ್ಚಿಲ್ಲ, it is a committed utilization ಅದನ್ನು ಮಾಡುವುದಕ್ಕೆ ಆಗಲಿಲ್ಲ ಆ 130 ಟಿಎಂಸಿ ನೀರನ್ನು field canal ಮತ್ತು ಉಪಕಾಲುವೆಗಳನ್ನು ಮಾಡಬೇಕಾಗಿದ್ದರೆ ಇನ್ನು 10 ಸಾವಿರ ಕೋಟಿ ರೂಪಾಯಿಗಳು ಬೇಕಾಗುತ್ತದೆ As on today TSR ಆದರೆ ಇವತ್ತು ಏನಾಗಿದೆ ಎಂದರೆ ಸಾಕಷ್ಟು ಹಣವನ್ನು ರಾಜ್ಯ ಸರ್ಕಾರವು ನೀಡಬೇಕಾಗಿದೆ Plan Scheme ನಲ್ಲಿ ರಾಜ್ಯ ಸರ್ಕಾರ ಹಣವನ್ನು ನೀಡಬೇಕಾಗುತ್ತದೆ ನೀರಾವರಿಗೆ ಹಿಂದಿನ ಸರ್ಕಾರದವರು ಮಾನ್ಯ ದೇವೇಗೌಡರು ಇದ್ದಂತಹ ಸಂದರ್ಭದಲ್ಲಿ ನೀರಾವರಿಗೆ ಹೆಚ್ಚು ಮಹತ್ವವನ್ನು ಕೊಟ್ಟರು ಮಾನ್ಯ ದೇವೇಗೌಡರು ನೀರಾವರಿ ಮಂತ್ರಿಗಳಾಗಿದ್ದಾಗ, ಮುಖ್ಯಮಂತ್ರಿಗಳಾಗಿದ್ದಾಗ ನಾನು ಆ ಕ್ಯಾಬಿನೆಟ್‌ನಲ್ಲಿ ಮಂತ್ರಿಯಾಗಿದ್ದೆ ಅವರು ಅದಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟರು ಅಲ್ಲಿಂದ ಇದು ಪ್ರಾರಂಭವಾಯಿತು ಅದು ಪ್ರಾರಂಭವಾದ ಮೇಲೆ ಮಾನ್ಯ ಎಸ್ ಎಂ ಕೃಷ್ಣರವರ ಸರ್ಕಾರ ಕೃಷ್ಣಜಲಭಾಗ್ಯ ನಿಗಮವನ್ನು ಸ್ಥಾಪನೆ ಮಾಡಿದರು ಅದಕ್ಕೆ ಹೆಚ್ಚು ಮಹತ್ವ ಬಂತು ಮಾನ್ಯ ಕೃಷ್ಣರವರ ಸರ್ಕಾರ ಬಂದು ಕೃಷ್ಣ ಜಲಭಾಗ್ಯ ನಿಗಮವಾಯಿತು ಇದು ಆದ ಮೇಲೆ ಮಾನ್ಯ ಧರ್ಮಸಿಂಗ್‌ರವರ ಸರ್ಕಾರವನ್ನು ನಾವು ಮೆಚ್ಚಬೇಕಾಗುತ್ತದೆ 2004–05ರಲ್ಲಿ 12,322 ಕೋಟಿ ರೂಪಾಯಿಗಳನ್ನು ನಮ್ಮ total plan ಇದರಲ್ಲಿ 3023 ಕೋಟಿ ರೂಪಾಯಿಗಳನ್ನು ಅಂದರೆ ಒಟ್ಟು ಯೋಜನಾ ವೆಚ್ಚದಲ್ಲಿ 24 54% ಹಣವನ್ನು ನೀರಾವರಿಗೆ ಕೊಟ್ಟರು

ಉಪಾಧ್ಯಕ್ಷರು ಮಾನ್ಯ ರಾಯರೆಡ್ಡಿಯವರೆ, ತಮಗೆ ಮಾತನಾಡುವುದಕ್ಕೆ ಇನ್ನು ಎಷ್ಟು ಹೊತ್ತು ಸಮಯ ಬೇಕು?

ಶ್ರೀ ಬಸವರಾಜರಾಯರೆಡ್ಡಿ ಇನ್ನು half on hour ಬೇಕು ನಾನು 6 30 ಗಂಟೆಗೆ ಮುಗಿಸುತ್ತೇನೆ ಇಲ್ಲಾ ಅಂದರೆ ಮಧ್ಯದಲ್ಲಿ ನಿಲ್ಲಿಸುತ್ತೇನೆ ನಾಳೆ ಈ ಬಗ್ಗೆ ಮಾತನಾಡುತ್ತೇನೆ

ಉಪಾಧ್ಯಕ್ಷರು ಇನ್ನು ಕಾಲು ಗಂಟೆಯಲ್ಲಿ ಮುಗಿಸಿಬಿಡಿ

ಶ್ರೀ ಬಸವರಾಜರಾಯರೆಡ್ಡಿ 2005–06ರಲ್ಲಿ ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಇದ್ದಂತಹ ಸಂದರ್ಭದಲ್ಲಿ 13,555 ಕೋಟಿ ರೂಪಾಯಿಗಳು ಯೋಜನಾ ವೆಚ್ಚ, ನೀರಾವರಿಗೆ 3,942 ಕೋಟಿ ರೂಪಾಯಿಗಳು ಅಂದರೆ 29 8% is the highest ಆಮೇಲೆ 2006–07 16,166 ಕೋಟಿ ರೂಪಾಯಿಗಳು ಅದಕ್ಕೆ ಕೊಟ್ಟಿರುವುದು ಎಷ್ಟೆಂದರೆ, 4208 ಕೋಟಿ ರೂಪಾಯಿಗಳು ಅಂದರೆ 26 48% ಹೆಚ್ಚು ಕಡಿಮೆ ಈ ಬಜೆಟ್‌ನ್ನು ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳು ಇದ್ದಂತಹ ಸಂದರ್ಭದಲ್ಲಿ ಆಯಿತು ಆಗ ಇನ್ನು 15–20 ದಿವಸಗಳು ಇತ್ತು ಈ ಒಂದು ಬಜೆಟ್‌ನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಸ್ವಲ್ಪ ಯಡಿಯೂರಪ್ಪ ನವರು ಯಾವುದೋ ಹೊಸ ಜನಪ್ರಿಯ ಕಾರ್ಯಕ್ರಮದ ಸಲುವಾಗಿ 3% ಕಡಿಮೆ ಮಾಡಿಬಿಟ್ಟರು ಅವರು ಹೆಚ್ಚು ಕೈ ಆಡಿಸುವುದಕ್ಕಾಗಲಿಲ್ಲ ಈಗ 2007–08ರಲ್ಲಿ 17,782 ಕೋಟಿ ರೂಪಾಯಿಗಳಲ್ಲಿ is a plan ಇದಕ್ಕೆ allotment ಎಷ್ಟೆಂದರೆ 3,145 ಕೋಟಿ ರೂಪಾಯಿಗಳು ಅಂದರೆ 17 69% 2005–06ರಲ್ಲಿ 29 8% ಇದ್ದು, 2006–07ಕ್ಕೆ 26 48% ಆಯಿತು 2007–08ಕ್ಕೆ 17 69% ಆಯಿತು ಇದರಿಂದ ನೀರಾವರಿಯ ಏನು ಕೆಲಸ ಇದೆ, ಇದನ್ನು ಮುಗಿಸುವುದಕ್ಕೆ ಸಾಧ್ಯವೇ ಹೇಗೆ? ತಾವು ಯೋಚನೆ ಮಾಡಿ ಸ್ವಾಮಿ, ನಾನು ಈ ಬಗ್ಗೆ ಟೀಕೆ ಮಾಡಬೇಕು, ತಮ್ಮನ್ನು ತೊಂದರೆಗೆ ಸಿಲುಕಿಸಬೇಕೆಂದು ನಾನು ಮಾತನಾಡುತ್ತಿಲ್ಲ ಆದರೆ ನಿಮಗೆ commitment ಇದೆ ಇದನ್ನು ನೋಡಿದರೆ ನಿಮಗೆ ಈ ದೇಶದಲ್ಲಿ ಈ ರಾಜ್ಯದಲ್ಲಿ ರಾಜಕೀಯ ಇಚ್ಛಾಶಕ್ತಿ ಇಲ್ಲ, ನೀರಾವರಿಯನ್ನು ಪೂರ್ತಿಗೊಳಿಸುವುದಕ್ಕೆ ಕೇವಲ ಅಗ್ಗದ ಜನಪ್ರಿಯತೆಯ ಕೆಲಸವನ್ನು ಮಾಡಿ ಹಣವನ್ನು ಮರ ಹಾಗೂ ದೇವಸ್ಥಾನಗಳಿಗೆ ಹಂಚಿದರೆ ಇದರಿಂದ ಏನು ಪ್ರಯೋಜನಕ್ಕೆ ಬಂತು? ನೀವು ಹಂಚಬೇಡವೆಂದು ಹೇಳುವುದಿಲ್ಲ, ಸರ್ಕಾರ ನಿಮ್ಮದು ಇದೆ, ನೀವು ಊರಿಗೆ ಬೇಕಾದರೆ ಕೊಡಬಹುದು, ಆದರೆ productivity ನೀರಾವರಿಗಾಗಿ, ಮಾನ್ಯ ಕುಮಾರಸ್ವಾಮಿಯವರೆ ಯಾವ ದೇವೇಗೌಡರು ನೀರಾವರಿಗಾಗಿ ಮಾನ್ಯ ಹೆಗಡೆಯವರ ಜೊತೆ ಹೋರಾಟವನ್ನು ಮಾಡಿದರು, ಅದು ನಿಮ್ಮ ಕಾಲದಲ್ಲಿ ನೀರಾವರಿಗೆ ಕಡಿಮೆ ಆಗಬಾರದು ನೀವು ದೇವೇಗೌಡರ ಸೇವೆಯನ್ನು ಈಡೇರಿಸಬೇಕಾಗಿತ್ತು ಇವತ್ತು ಆಗಲಿಲ್ಲ ನೋಡಿ ಬರೀ ಅಗ್ಗದ

ಜನಪ್ರಿಯತೆಗಾಗಿ ಈ ಹಣವನ್ನು ಬಹಳಷ್ಟು ಪ್ರಮಾಣದಲ್ಲಿ ಇವತ್ತು ಕಡಿಮೆ ಮಾಡಿದ್ದಾರೆ ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳನ್ನು ಕೇಳುತ್ತೇನೆ ನೀವು 5000 ಕೋಟಿ ರೂಪಾಯಿಗಳಿಗೆ plan ನಲ್ಲಿ ಈ ಸಾರಿ ಹಣವನ್ನು revise ಮಾಡಿಕೊಡಬೇಕು ಬೇರೆ ಅಗ್ಗದ ಜನಪ್ರಿಯತೆ ಕಾರ್ಯಕ್ರಮಗಳನ್ನು ನಿಲ್ಲಿಸಿ ಇಲ್ಲದಿದ್ದರೆ ಬೇರೆ ಹೆಚ್ಚಿನ ಹಣವನ್ನು ಕ್ರೋಢೀಕರಣ ಮಾಡಿ ನೀರಾವರಿಗೆ ಹೆಚ್ಚಿನ ಮಹತ್ವವನ್ನು ಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಚೆಪಡುತ್ತೇನೆ ನಾನು ಇಲ್ಲಿ ಬಹಳ ಗಂಭೀರವಾದ ವಿಚಾರವನ್ನು ಹೇಳುವುದಕ್ಕೆ ಇಚ್ಚೆಪಡುತ್ತೇನೆ ಈ Scheme-A ನಲ್ಲಿ ಇನ್ನು ಕೂಡ ಹಿಪ್ಪರಗಿ ಇದೆ 12 ಟಿಎಂಸಿ ನೀರು ಅಲ್ಲಿಗೆ ಬೇಕು, ಅಲ್ಲಿ ಇನ್ನು ಏನು ಕೆಲಸ ಪ್ರಾರಂಭವಾಗಿಲ್ಲ ಮಾನ್ಯ ಯಡಿಯೂರಪ್ಪನವರೆ ನಿಮಗೆ ಗೊತ್ತಿದೆ ಆ Rehabilitation Camp ಹಿಪ್ಪರಗಿ ಬ್ಯಾರೇಜಿನ 29 ಹಳ್ಳಿಗಳ ಜನರು ಯಾವ ಪರಿಸ್ಥಿತಿಯಲ್ಲಿ ವಾಸ ಮಾಡುತ್ತಿದ್ದಾರೆ ಮಸ್ಕಿ ನಾಲಾ, ರಾಮತಹಳ್ಳಿ, ಭೀಮಾ ಹಳ್ಳಿ, ಖಿಂಡೂರಿನಾಲಾ, ದೂದಗಂಗಾ, ತುಂಗಾಭದ್ರಾ ಮೇಲ್ದಂಡೆ ಅವು ನಿಮ್ಮವೆ 12 4 ಟಿಎಂಸಿ, ಸಿಂಗಟಾಲ್ಲೂರು LIS 18 ಟಿಎಂಸಿಯಿಂದ ಮಾನ್ಯ ಪ್ರಕಾಶ್‌ರವರೆ ಮಾನ್ಯ ಪಾಟೀಲ್‌ರವರೆ 18 ಟಿಎಂಸಿಯಿಂದ ಅದನ್ನು 12 ಟಿಎಂಸಿಗೆ ಇಳಿಸಿದ್ದಾರೆ ಅದನ್ನು ತಾವು 18 ಟಿಎಂಸಿಗೆ ತೆಗೆದುಕೊಂಡು ಹೋಗಬೇಕಾಗಿದೆ ಹೇಗಾಗುತ್ತದೆ ಎಂದರೆ 30 ಟಿಎಂಸಿ ನೀರು ಹೂಳೂ ಬಂದಿದೆ ಅಲ್ಲಿ, ಅದನ್ನು ಬಳಸಿಕೊಳ್ಳಿ

ಶ್ರೀ ಎಂ ಪಿ ಪ್ರಕಾಶ್ (ಮಾನ್ಯ ಗೃಹ ಸಚಿವರು ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) . ಮಾನ್ಯ ಉಪಾಧ್ಯಕ್ಷರೆ, ತಾವು ದಯಮಾಡಿ ಕೇಳಬೇಕು ಅಂಗಡಿಯವರ ವರದಿಯ ಪ್ರಕಾರ ಅಲ್ಲಿ ಸ್ವಲ್ಪ ನೀರು ಸಿಗುತ್ತದೆ ಇನ್ನೊಂದು ಕಾಗಿನೆಲೆಯಲ್ಲಿ ಒಂದಿಷ್ಟು ನೀರು ಸಿಗುತ್ತದೆ ಮಲಪ್ರಭಾದಲ್ಲಿ ಒಂದಿಷ್ಟು ನೀರು ಸಿಗುತ್ತದೆ ಇವೆಲ್ಲವನ್ನೂ ಸೇರಿಸಿ 18 ಟಿಎಂಸಿ ನೀರು ಎಂದು Tribunalನವರು ಮಾಡಿದ್ದಾರೆ ಆ 18 ಟಿಎಂಸಿ ಅಂದರೆ ಈಗರಿತಕ್ಕಂತಹ ತೊಂದರೆ ಇದೆ ಎಂದು ಹೇಳಿ, ರಾಯಚೂರು ಜಿಲ್ಲೆ, ಬಳ್ಳಾರಿ ಜಿಲ್ಲೆಯ ತಾಲ್ಲೂಕಿನ 3 ತಾಲ್ಲೂಕುಗಳು ಅವರೆಲ್ಲರೂ ಕೂಡ ಭತ್ತದ ಕಣಜ ಎನ್ನುವಂತಹ ಪ್ರದೇಶಗಳು 18 ಟಿಎಂಸಿ ನೀರು ಇಲ್ಲ, ನಮ್ಮ ಅಚ್ಚುಕಟ್ಟನ್ನು disturb ಮಾಡಬೇಡಿ ಎಂದು ಹೇಳಿದರು ಇದಾದ ಮೇಲೆ ಮಾನ್ಯ ಕೆ ಸಿ ರೆಡ್ಡಿಯವರ ಸಮಿತಿ ಆಯಿತು ಕೆ ಸಿ ರೆಡ್ಡಿಯವರ ಸಮಿತಿ 12 TMC ನೀರು ಇದೆ ಎಂದು ಬಂದಿದ್ದಾರೆ ಇವತ್ತು ನಮ್ಮಲ್ಲಿ ಒಂದೂ ಕೂಡ ಸಮತೋಲನ ಕೆರೆಗಳಿಲ್ಲ 100 TMC ಗಿಂತ ಹೆಚ್ಚು ನೀರನ್ನು ನಾವು ನದಿಗಳಿಗೆ ಬಿಟ್ಟೆವು 18

TMC ನೀರು ಎಂದು ಹೇಳುವುದೂ ಒಂದು Notional ಪರಿಕಲ್ಪನೆ 12 TMC ನೀರು ಸಿಗಬಹುದೇನೋ ಗೊತ್ತಿಲ್ಲ ಆದ್ದರಿಂದಲೇ ಹಿಂದಿನ ಸರ್ಕಾರದವರು

ಶ್ರೀ ಬಸವರಾಜರಾಯರೆಡ್ಡಿ ತಮಗೆ ಗೊತ್ತಿದೆ, 1947 ರಲ್ಲಿ ತುಂಗಭದ್ರಾ ಡ್ಯಾಂ ಪ್ರಾರಂಭವಾಗಿ 1953 ರಲ್ಲಿ ಅದನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ full capacity one storage 134 TMC ಒಂದು ಟಿಎಂಸಿ ಹೆಚ್ಚು ಕಡಿಮೆ ಹೇಳಿರಬಹುದು ಇವತ್ತು 102 TMC ಇದೆ 30 TMC ಅಷ್ಟು ಹೂಳು ಬಂದಿದೆ ಆ ನೀರು ಈಗ ಆಂದ್ರಕ್ಕೆ ಹೋಗುತ್ತಿದೆ ನಿಮಗೆ ಕೆಳಗೂ ಜಲಾಶಯ ಇಲ್ಲ, ಮೇಲೆಯೂ ಜಲಾಶಯ ಇಲ್ಲ ಸಿಂಗಟಾಲೂರಿನಲ್ಲಿ ನೀವು 18 TMC ಗೆ ಮಾಡಿದರೆ ಏನೂ ತಪ್ಪಿಲ್ಲವೆಂದು ನಾನು ಹೇಳುವುದು

ಶ್ರೀ ಡಿ ಆರ್ ಪಾಟೀಲ್ ಮಾನ್ಯ ಉಪಾಧ್ಯಕ್ಷರೆ, ಕಳೆದ 10 ವರ್ಷಗಳ outflow ನೀವು ನೋಡಿದರೆ, ಏಳು ವರ್ಷಗಳಿಂದ ಅವರಿಗೆ ಎಷ್ಟು ನೀರು ಹೋಗಬೇಕು, ಅದಕ್ಕಿಂತ ಹೆಚ್ಚಾಗಿ ನೀರು ಹೋಗಿದೆ ಮೂರು ವರ್ಷ ಮಾತ್ರ ಕಡಿಮೆಯಾಗಿದೆ ಹೆಚ್ಚಿನ ನೀರನ್ನು ನಾವು ಆಂದ್ರದವರಿಗೆ ಏಕೆ ಕೊಡಬೇಕು? ನಮ್ಮಲ್ಲಿಯೇ ಅದನ್ನು ಏಕೆ ಬಳಸಿಕೊಳ್ಳಬಾರದು? ಏಳು ವರ್ಷಗಳ ಕಾಲ ಅನುಕೂಲವಾಗಿದೆ ಮೂರು ವರ್ಷ ತೊಂದರೆ ಇದ್ದಾಗ ನಾವು ಅಣ್ಣತಮ್ಮಂದಿರು ಹೇಗೋ ಹಂಚಿಕೊಳ್ಳೋಣವಂತೆ ಆ ದೃಷ್ಟಿಯಿಂದ ನೀವು ವಿಚಾರ ಮಾಡಿ

ಶ್ರೀ ಎಂ ಪಿ ಪ್ರಕಾಶ್ ಸಮತೋಲನ ಕೆರೆ ಮಾಡಿ ಎಂದು ಬಹಳ ವರ್ಷಗಳಿಂದ ಹೇಳಿಕೊಂಡು ಬಂದಿದ್ದೇವೆ ಒಂದೊಂದಕ್ಕೆ 30 ರಿಂದ 40 ಕೋಟಿ ರೂ ಕೊಟ್ಟಿದ್ದರೆ ಆಗಿ ಹೋಗುತ್ತಿತ್ತು ಯಾರೂ ಅದರ ಪ್ರಯತ್ನ ಮಾಡಲಿಲ್ಲ ಈಗ ಮಾಡುವುದು ಬೇರೆ ವಿಷಯ ಈ ಅನ್ಯಾಯಕ್ಕೆ ಕಾರಣ ಏನು ಎನ್ನುವುದು ತಾವು ಯೋಚನೆ ಮಾಡಿ

ಶ್ರೀ ಬಸವರಾಜರಾಯರೆಡ್ಡಿ ಸಿಗಟಾಲೂರು 18 TMC ಬೆಳಗಾಂನ ಬಳ್ಳಾರಿ ನಾಲಾ 2 TMC, ಗುಲ್ಬರ್ಗ ಜಿಲ್ಲೆಯ ಕಾಗಿನಾ ಸ್ವಂತಿ, ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳು ಈ ಯೋಜನೆಗಳನ್ನು ಪೂರ್ಣಗೊಳಿಸುವುದರ ಜೊತೆಗೆ, ಮಾನ್ಯ ಯಡಿಯೂರಪ್ಪನವರೇ ತಮ್ಮ ಮೈನರ್ ಇರ್ರಿಗೇಷನ್ ಇಲಾಖೆಯಲ್ಲಿ ಇನ್ನೂ 93 TMC ನೀರನ್ನು ನೀವು ಬಳಕೆ ಮಾಡಿಕೊಂಡಿಲ್ಲ, 93 TMC water of the MI Tanks ನೀವು ಹೆಚ್ಚಿನ ಹಣವನ್ನು ಇದಕ್ಕೆ ಕೊಡದೇ ಇದ್ದರೆ, 729 TMC ನೀರನ್ನು ನೀವು ಬಳಕೆ ಮಾಡುವುದಕ್ಕಾಗುತ್ತಿಲ್ಲ 729 TMC Committed utilization ಮಾಡಬೇಕೆಂದು ಅದನ್ನು 31 ಮೇ 2000ರ ಒಳಗಾಗಿ ಮಾಡಬೇಕೆಂದು ಬಚಾವತ್ ಆಯೋಗ ಹೇಳಿತ್ತು ಇವತ್ತಿಗೂ ಕೂಡ ನೀವು ಮಾಡಿಲ್ಲ ಹೀಗಾಗಿ ಇದರ ಬಗ್ಗೆ ಹೆಚ್ಚು ಗಮನ

ಹರಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಇಚ್ಛೆ ಪಡುತ್ತೇನೆ ಮಹದಾಯಿ ಯೋಜನೆ ಬಗ್ಗೆ ಎಲ್ಲರೂ ಮಾತನಾಡುತ್ತಾರೆ ಮಹದಾಯಿ ಯೋಜನೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಮಾಂಡ್ವಿ ರಿವರ್ ಇದೆ, ಮಾಂಡ್ವಿ ರಿವರ್‌ಗೆ ಕರ್ನಾಟಕದಿಂದ ಮತ್ತು ಕರ್ನಾಟಕದ ಸುತ್ತಮುತ್ತಲು ಮತ್ತು ಗೋವಾ ಪ್ರದೇಶಗಳಿಂದ ಸುಮಾರು 200 TMC ನೀರು ಸಮುದ್ರಕ್ಕೆ ಹೋಗುತ್ತಿದೆ ಮಾಂಡ್ವಿ ರಿವರ್‌ಗೆ ಯಾವುದೇ ಡ್ಯಾಂಗಳಿಲ್ಲ ಯಾವುದೇ ನೀರಾವರಿ ಆಗುತ್ತಿಲ್ಲ ಗೋವಾ ರಾಜ್ಯದವರು ಅನಾವಶ್ಯಕವಾಗಿ ಕರ್ನಾಟಕಕ್ಕೆ ತೊಂದರೆ ಕೊಡಬೇಕೆಂದು ಹೇಳಿ, ಮತ್ಸರ ಬುದ್ಧಿಯಿಂದ ಈ ಮಹದಾಯಿ ಯೋಜನೆಗೆ ಅಡ್ಡಗಾಲು ಹಾಕುತ್ತಿದ್ದಾರೆ ಇದು ನಿಲ್ಲಬೇಕು ಅದಕ್ಕಾಗಿ ಹಿಂದೆ NDA ಸರ್ಕಾರ ಮಾನ್ಯ ವಾಜಪೇಯಿಯವರು ಪ್ರಧಾನ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ 7 56 TMC ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಕರ್ನಾಟಕಕ್ಕೆ ತಾತ್ವಿಕವಾದ ಒಪ್ಪಿಗೆ ಕೊಟ್ಟರು ಒಪ್ಪಿಗೆ ಕೊಟ್ಟ ತಕ್ಷಣ ಕೇವಲ ಆರು ತಿಂಗಳುಗಳು ಒಂದು ವರ್ಷದಲ್ಲಿ ಅದನ್ನು ಸ್ಟೇ ಮಾಡಿದರು ಹೀಗಾಗಿ ಇವತ್ತು ಆ ಯೋಜನೆಯನ್ನು ಕೈಗೆತ್ತಿಕೊಳ್ಳುವುದಕ್ಕಾಗುತ್ತಿಲ್ಲ ಸುಮ್ಮನೆ ನಮ್ಮ ಮಾನ್ಯ ಈಶ್ವರಪ್ಪನವರು foundation ಹಾಕುತ್ತಾರೆ ಇದು ಹೇಗೆ ಸಾಧ್ಯ? ಅಂತರರಾಜ್ಯದ ನದಿ ನೀವು ಹೇಗೆ ಕೆಲಸ ಮಾಡುತ್ತೀರಿ? ಬರೀ ಪ್ರಚಾರಕ್ಕಾಗಿ ಮಾಡಿದರೆ ಆಗುವುದಿಲ್ಲ ಈ ನೀರನ್ನು ಉಪಯೋಗ ಮಾಡುವುದಕ್ಕೆ ಮತ್ತೆ stay ಕೊಟ್ಟಿದ್ದೇ NDA Government ಮಾನ್ಯ ಮುಖ್ಯಮಂತ್ರಿಗಳು, ಉಪ ಮುಖ್ಯ ಮಂತ್ರಿಗಳು ಮತ್ತು ಸದನದ ಎಲ್ಲಾ ಮುಖಂಡರೂ ಸೇರಿ ನಾವು ಮತ್ತೆ ಕೇಂದ್ರ ಸರ್ಕಾರವನ್ನು ಒತ್ತಾಯ ಮಾಡಿ ಏನು ಹಿಂದಿನ ಕೇಂದ್ರ ಸರ್ಕಾರ ಸ್ಟೇ ಕೊಟ್ಟಿದೆ ಅದನ್ನು ತೆಗೆದು ಹಾಕಿ, ನೀರಾವರಿ ಕೆಲಸ ಪ್ರಾರಂಭ ಮಾಡುವುದಕ್ಕೆ ಅನುಮತಿ ಕೊಡದೇ ಇದ್ದರೆ ಇದು ಸುಮ್ಮನೆ ಪ್ರಚಾರ ಆಗುತ್ತದೆ ಇದು ಏನೂ ಮಾಡುವುದಕ್ಕಾಗುವುದಿಲ್ಲ ಮಹದಾಯಿ ಮಹದಾಯಿ ಎಂದು ಹೇಳಿದರೆ ಏನೂ ಪ್ರಯೋಜನವಿಲ್ಲ ಅದಕ್ಕಾಗಿ ನಾವು ಈ ಒತ್ತಾಯವನ್ನು ಮಾಡಬೇಕಾಗುತ್ತದೆ ಇಲ್ಲದಿದ್ದರೆ ಸನ್ಮಾನ್ಯ ಮುಖ್ಯಮಂತ್ರಿಗಳು ಮತ್ತು ಉಪ ಮುಖ್ಯ ಮಂತ್ರಿಗಳು ಗೋವಾ ರಾಜ್ಯದ ಮುಖ್ಯ ಮಂತ್ರಿಗಳ ಜೊತೆ ಸೌಹಾರ್ದತೆಯ ಮಾತುಕತೆಗೆ ಪ್ರಯತ್ನ ಮಾಡಬೇಕು ಈ ಸರ್ಕಾರ ಬಂದು 18 ತಿಂಗಳುಗಳಾದವು ಇವತ್ತಿನವರೆಗೂ ಕೂಡ ಸೌಹಾರ್ದತೆಯ ಮಾತುಕತೆ ಆಗಿಲ್ಲ ಇದರ ಬಗ್ಗೆ ಏನು ಚಿಂತನೆ ಮಾಡುತ್ತೀರಿ ಎನ್ನುವುದನ್ನು ಮಾನ್ಯ ಮಂತ್ರಿಗಳು ಸ್ಪಷ್ಟವಾಗಿ ಹೇಳಬೇಕೆಂದು ಹೇಳಿ ಈ ಸಂದರ್ಭದಲ್ಲಿ ನಾನು ಕೇಳುತ್ತೇನೆ ನಾನು ಸ್ಕೀಮ್ ಬಗ್ಗೆ ಹೇಳುವುದಕ್ಕೆ ಇಚ್ಛೆ ಪಡುತ್ತೇನೆ ಉಪಾಧ್ಯಕ್ಷರೆ ತಮಗೆ ಗೊತ್ತಿದೆ ಕೃಷ್ಣ ನದಿಯಲ್ಲಿ ಸುಮಾರು 2400 TMC ನೀರಿನ ಲಭ್ಯತೆ ಇದೆ ಎನ್ನುವುದನ್ನು ವಿಚಾರ ಮಾಡಿ ಬಚಾವತ್ ರವರು 1969 ರಲ್ಲಿ 200 TMC ಗೆ ಅವಾರ್ಡ್

ಮಾಡಿದರು 400 TMC ಗೆ 2000ನೇ ಇಸವಿಯಲ್ಲಿ Tribunal ರಚನೆ ಮಾಡಿ, ಉಳಿದ ನೀರನ್ನು ಹಂಚಿಕೆ ಮಾಡಿ ಎನ್ನುವಂತಹ ಮಾತನ್ನು ಹೇಳಿದರು ಆದರೆ 2000ನೇ ಇಸವಿ ಹೊತ್ತಿಗೆ Tribunal ರಚನೆ ಆಗಬೇಕಾಗಿತ್ತು ರಾಜಕೀಯ ಒತ್ತಡದ ಕಾರಣಕ್ಕಾಗಿ ಟ್ರಿಬ್ಯುನಲ್ ರಚನೆ ಆಗಲಿಲ್ಲ ಮಾನ್ಯ ಯಡಿಯೂರಪ್ಪನವರಿಗೆ ಸ್ಪಷ್ಟವಾಗಿ ಗೊತ್ತಿದೆ ಮಾನ್ಯ ಚಂದ್ರಬಾಬು ನಾಯ್ಡುರವರು 2000ನೇ ಇಸವಿಯಲ್ಲಿ ಆಂಧ್ರದ ಮುಖ್ಯಮಂತ್ರಿಯಾಗಿ NDA patner ಆಗಿದ್ದರು ಅವರು ಮಾನ್ಯ ವಾಜಪೇಯಿ ಸರ್ಕಾರದ ಮೇಲೆ Tribunal ರಚನೆ ಮಾಡಬೇಡಿ ಎಂದು ಒತ್ತಡ ತಂದರು ಮಾನ್ಯ ಪ್ರಕಾಶ್ ರವರಿಗೆ ಚೆನ್ನಾಗಿ ಗೊತ್ತಿದೆ, ಮಾನ್ಯ ಜೆ ಹೆಚ್ ಪಟೇಲರ ಸರ್ಕಾರ ಮತ್ತು ಮಾನ್ಯ ಎಸ್ ಎಂ ಕೃಷ್ಣರವರ ಸರ್ಕಾರ Tribunalನ್ನು ರಚನೆ ಮಾಡಿ ಎಂದು ಒತ್ತಡ ತಂದರು ರಾಜಕೀಯ ಕಾರಣಕ್ಕಾಗಿ, ರಾಜಕೀಯ ಒತ್ತಡಕ್ಕೆ ಮಣಿದು, ಹಿಂದಿನ NDA ಸರ್ಕಾರ Tribunal ರಚನೆ ಮಾಡಲಿಲ್ಲ ನನಗೆ ಅನುಭವ ಇದೆ ನಾನು ಹಿಂದೆ special representative ಆಗಿ ಕೆಲಸ ಮಾಡಿದಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಮುಖ್ಯ ಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಹಲವಾರು ಸಾರಿ ಆಗಿನ ಪ್ರಧಾನ ಮಂತ್ರಿಗಳನ್ನು ಭೇಟಿ ಮಾಡಿ ಒತ್ತಾಯ ಮಾಡಿದ್ದೇವೆ 2001ನೇ ಇಸವಿಯಲ್ಲಿ ಅಲ್ಲಿ ಮಾನ್ಯ ಚಂದ್ರ ಬಾಬುನಾಯ್ಡುರವರ ಒತ್ತಡಕ್ಕೆ ಮಣಿದು ಇದು ಆಗಲಿಲ್ಲ ನಾಲ್ಕುವರೆ ವರ್ಷಗಳ ಕಾಲ ಕೇಂದ್ರದಲ್ಲಿರುವಂತಹ NDA ಸರ್ಕಾರ second Tribunalನ್ನು ಕೃಷ್ಣ ನದಿಗೆ ರಚನೆ ಮಾಡದೇ ಇರುವುದರಿಂದ ನಮಗೆ ನೀರಿನ ಹಂಚಿಕೆ ಆಗಲಿಲ್ಲ ಇದರ ಅನ್ಯಾಯ ಕರ್ನಾಟಕಕ್ಕೆ ಆಯಿತು 2004ರಲ್ಲಿ ಮಾನ್ಯ ಮನಮೋಹನ್ ಸಿಂಗ್ ರವರು ಕುಮಾರ್ ರವರ ನೇತೃತ್ವದಲ್ಲಿ Tribunal ರಚನೆ ಆಯಿತು Tribunal ಬಹಳ fast ಆಗಿ ನಡೆಯುತ್ತಿದೆ ತಮಗೂ ಗೊತ್ತಿದೆ ಮಹಾರಾಷ್ಟ್ರದ ಹಿಯರಿಂಗ್ ಆಯಿತು, ಕರ್ನಾಟಕದ ಹಿಯರಿಂಗ್ ಆಗಿದೆ, ಆಂದ್ರಪ್ರದೇಶದ ಹಿಯರಿಂಗ್ ಆಗಿದೆ ಬಹಳ fast ಆಗಿ ಹೋಗುತ್ತಿದೆ ಉಳಿದಿರುವಂತಹ 400 ರಿಂದ 450 TMC ನೀರಿನಲ್ಲಿ ಕರ್ನಾಟಕಕ್ಕೆ ಸುಮಾರು 300 TMC ಬರಬೇಕಾಗಿದೆ ಏಕೆಂದರೆ, ನಾನು ಮೊದಲೇ ಹೇಳಿದಂತೆ ಬಚಾವತ್ Tribunal ನಲ್ಲಿ ನಮಗೆ ಸುಮಾರು 200 TMC ಅಷ್ಟು ನೀರಿನ ಅನ್ಯಾಯವಾಗಿದೆ ನಮಗೆ ನ್ಯಾಯವಾಗಿ ಸಿಗಬೇಕಾದ 200 TMC ನೀರು ನಮಗೆ ಅನ್ಯಾಯವಾಗಿದೆ ಅದನ್ನು ಸರಿಪಡಿಸಬೇಕಾದರೆ ನೀವು ನಿಮ್ಮ ವಾದವನ್ನು ಮಂಡಿಸಿ 300 TMC ನೀರನ್ನಾದರೂ ಕನಿಷ್ಟ ಪಕ್ಷ ತರಬೇಕು ಅದಕ್ಕೇ ಒಂದು master plan ಮಾಡಿ Where is a master plan? ಅದಕ್ಕೆ ನೀವು ಏನು ಮಾಡಿದ್ದೀರಿ? ನಾಳೆ

ಅವಾರ್ಡ್ ಆಗಬಹುದು, 180 TMC ಕೊಡಬಹುದು, 200 TMC ನೀರು ಕೊದಬಹುದು, ನಿಮ್ಮ ಒತ್ತಾಯಕ್ಕೆ ಮಣಿದು 300 TMC ನೀರು ಕೊಡಬಹುದು ಕನಿಷ್ಟ ಪಕ್ಷ 200 TMC ಬಂದೇ ಬರುತ್ತದೆ ಆ 200 TMC ನೀರಿಗೆ 20,000 ಕೋಟಿ ರೂಪಾಯಿಗಳು ಬೇಕಾಗುತ್ತವೆ ಅದಕ್ಕೆ master plan ಏನು ಮಾಡಿದ್ದೀರಿ? ಎಲ್ಲೆಲ್ಲಿ ಕಾಲುವೆಗಳನ್ನು ಮಾಡಬೇಕೆಂದು ಸರ್ವೇ ಕೆಲಸ ಪ್ರಾರಂಭ ಮಾಡಿದ್ದೀರಿ? ಯಾವುದಕ್ಕೂ ಇಲ್ಲ ನೀವು ಹಣ ಕಡಿಮೆ ಮಾಡಿದ್ದೀರಿ 29% ನಿಂದ 17% ಗೆ ಇಳಿಸಿದ್ದೀರಿ ದಯಮಾಡಿ ಈ ಹಣವನ್ನು ಹೆಚ್ಚು ಮಾಡಿ ಇಲ್ಲದಿದ್ದರೆ ರಾಜಕೀಯ ಇಚ್ಚಾಶಕ್ತಿ ಈ ಸರ್ಕಾರಕ್ಕೆ ಇಲ್ಲ ಅದಕ್ಕಾಗಿ ಈ ವಿಚಾರದಲ್ಲಿ ಸರ್ಕಾರ ಗಂಭಿರವಾಗಿ ವಿಚಾರ ಮಾಡುತ್ತದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ ಹಿಂದೆ ಮಾನ್ಯ ಜೆ ಹೆಚ್ ಪಟೇಲರು ಇದ್ದಂತಹ ಸಂದರ್ಭದಲ್ಲಿ ಅವರ ಸರ್ಕಾರವನ್ನು ನಾವು ಮೆಚ್ಚಬೇಕಾಗುತ್ತದೆ 524 65 ಮೀಟರ್ ಹೈಟ್‌ಗೆ ಡ್ಯಾಂ ಅನ್ನು ಕಟ್ಟಬೇಕೆಂದು ತೀರ್ಮಾನ ಮಾಡಿ ಕಟ್ಟಿದರು ಆಂಧ್ರದೇಶದವರು Supreme Courtಗೆ ಹೋದರು Supreme Court ನಿಮಗೆ ನೀರಿನ ಬಳಕೆ ಎಷ್ಟಾಗುತ್ತದೆ ಎಂದು ವಿಚಾರ ಮಾಡಿ 519 65 TMC ರೆಡಿ ಇದೆ B scheme ನಲ್ಲಿ ನಿಮಗೆ 200 TMCನೀರಿನ ಅವಾರ್ಡ್ ಆದರೆ, ನಿಮ್ಮ ನೀರಿನ ಸಂಗ್ರಹವನ್ನು ಎಲ್ಲಿ ಮಾಡುತ್ತೀರಿ ನೀವು? ಪ್ಯಾರಲಲ್ಲಾಗಿ ನಿಮಗೆ ಕೃಷ್ಣ ನದಿಯಲ್ಲಿ ಡ್ಯಾಂ ಕಟ್ಟುವುದಕ್ಕೆ ಅವಕಾಶವಿಲ್ಲ ಏಕೆಂದರೆ, ಆಲಮಟ್ಟಿ ಡ್ಯಾಂ ನಿಂದ ಹಿನ್ನೀರು ಮಹಾರಾಷ್ಟ್ರಕ್ಕೆ ಮುಟ್ಟುತ್ತದೆ ಮುಂದೆ ಇರುವಂತಹ ನಾರಾಯಣಪುರ ಡ್ಯಾಂ ಅನ್ನು ಕಟ್ಟಿದರೆ ಅದು ಆಲಮಟ್ಟಿಗೆ ಮುಟ್ಟುತ್ತದೆ ನಾರಾಯಣಪುರದಿಂದ ಮುಂದೆ ಕಟ್ಟುವುದಕ್ಕೆ ಸಾಧ್ಯವಿಲ್ಲ ನಾವು ಆಂಧ್ರಪ್ರದೇಶಕ್ಕೆ ಹೋಗಿ ಬಿಡುತ್ತೇವೆ ಹೀಗಾಗಿ 524 65 ಟಿ ಎಂ ಸಿ ನಮಗೆ ಅನಿವಾರ್ಯವಾಗಿ ಬೇಕೇ ಬೇಕು It is inevitable ಇದನ್ನು ನೀವು ಉಳಿಸಿಕೊಳ್ಳಬೇಕಾಗುತ್ತದೆ ಆ ಬಗ್ಗೆ ಸರ್ಕಾರ ಟ್ರೈಬ್ಯುನಲ್ ಮುಂದೆ ಕನ್‌ವಿನ್ಸ್ ಮಾಡಬೇಕಾಗುತ್ತದೆ ಈ ಬಗ್ಗೆ ಸ್ಪಷ್ಟವಾಗಿ ಈ ಸಕಾರ ಕನ್‌ವಿನ್ಸ್ ಮಾಡದೇ ಹೋದರೆ ಅವರು ಅವಾರ್ಡ್ ಮಾಡಿದರೂ ಕೂಡ ಮುಂದೆ ಆ ನೀರನ್ನು ನಿಲ್ಲಿಸುವುದಕ್ಕೆ ಸಂಗ್ರಹಣೆ ಮಾಡುವುದಕ್ಕೆ ಯಾವುದೇ ಸ್ಥಳವಿಲ್ಲ ಅದರ ಬಗ್ಗೆ ಸರ್ಕಾರ ಗಂಭಿರವಾಗಿ ಚಿಂತನೆಯನ್ನು ಮಾಡಬೇಕಾಗುತ್ತದೆ ಮತ್ತೆ ಇದರಿಂದ ಆಲಮಟ್ಟಿ, ನಾರಾಯಣಪುರ ಡ್ಯಾಂನಿಂದ 20 ಲಕ್ಷ ಎಕರೆ ನೀರಾವರಿಯಾಗುತ್ತದೆ ಇದರ ಬಗ್ಗೆ ರಾಜಕೀಯ ಇಚ್ಚಾಶಕ್ತಿಯನ್ನು ಈ ಸರ್ಕಾರ ತೋರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ, ಇನ್ನು ಬಾಗಲಕೋಟೆ ಪುನರ್ವಸತಿ ಬಗ್ಗೆ ನಾವು ಬಹಳ ಮಾತಾಡಬೇಕಿದೆ ಏಕೆಂದರೆ ಬಾಗಲಕೋಟೆಯಲ್ಲಿ ಸುಮಾರು ಒಂದೂವರೆ ಲಕ್ಷ

ಜನಸಂಖ್ಯೆ ಇದೆ ಹಿಂದೆ ಸುಮಾರು ಒಂದು ಲಕ್ಷ ಜನಸಂಖ್ಯೆಗೆ ಸುಮಾರು 667 ಕೋಟಿ ರೂಪಾಯಿಗಳ ರಿಹ್ಯಾಬಿಲಿಟೇಶನ್ ಪ್ಲಾನ್ ಮಾಡಿದ್ದರು ಹಿಂದೆ ಮಾನ್ಯ ಧರ್ಮಸಿಂಗ್‌ರವರ ನಾಯಕತ್ವದ ಸರ್ಕಾರ ಬರುವ ಮೊದಲು ಮಾನ್ಯ ಯಡಿಯೂರಪ್ಪನವರು ವಿರೋಧ ಪಕ್ಷದ ನಾಯಕರಾಗಿದ್ದರು ಆಗ ಅಲ್ಲಿ ಹಿನ್ನೀರಿನಿಂದ ತೊಂದರೆಯಾಯಿತು ಆ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ನಮ್ಮ ಸರ್ಕಾರ ಬಂದರೆ ಒಂದು ತಾಸಿನಲ್ಲಿ 667 ಕೋಟಿ ರೂಪಾಯಿಗಳನ್ನು ಕೊಟ್ಟುಬಿಡುತ್ತೇವೆಂದು ಹೇಳಿದ್ದರು ಅದನ್ನು ಈಗ ಯಡಿಯೂರಪ್ಪನವರಿಗೆ ಜ್ಞಾಪಿಸುವುದಕ್ಕೆ ಇಚ್ಚೆಪಡುತ್ತೇನೆ ಒಂದು ತಾಸಿನಲ್ಲಿ ಕೊಟ್ಟುಬಿಡುತ್ತೇನೆಂದು ಹೇಳಿದ್ದರು ಆದರೆ ಈ ಸರ್ಕಾರ 2006–07ನೇ ಸಾಲಿನಲ್ಲಿ ಮಾನ್ಯ ಯಡಿಯೂರಪ್ಪನವರು ಹಣಕಾಸಿನ ಖಾತೆಯನ್ನು ಹೊಂದಿ ಉಪ ಮುಖ್ಯಮಂತ್ರಿಗಳಾದ ಮೇಲೆ ಬಾಗಲಕೋಟೆಗೆ ಕೊಟ್ಟಿದ್ದು ಕೇವಲ 26 ಕೋಟಿ Last year's expenditure was only Rs 26 crores Allotment is Rs 26 crores and expenditure is Rs 26 crores ಹೀಗಾಗಿ ಮಾನ್ಯ ಯಡಿಯೂರಪ್ಪನವರೆ ನಿಮ್ಮ ಮಾತು ಎಲ್ಲಿ ಹೋಯಿತು? ಒಂದು ತಾಸಿನಲ್ಲಿ 667 ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿದ್ದ ನಿಮ್ಮ ಮಾತು ಎಲ್ಲಿಗೆ ಹೋಯಿತು? ಏಕೆ ಈ ರೀತಿ ನೀವು ಅಧಿಕಾರದಲ್ಲಿ ಇಲ್ಲದಿದ್ದಾಗ ಒಂದು ಮಾತು, ಅಧಿಕಾರಕ್ಕೆ ಬಂದ ಮೇಲೆ ಒಂದು ರೀತಿ ಮಾತನಾಡುತ್ತೀರಿ? ಇದು ನನಗೆ ಅರ್ಥವಾಗುತ್ತಿಲ್ಲ ನಾವು ನಿಜವಾಗಿಯೂ ಕೂಡ ಹಿಂದಿನ ಸರ್ಕಾರವನ್ನು ಮೆಚ್ಚಬೇಕಾಗುತ್ತದೆ ಎಸ್ ಎಂ ಕೃಷ್ಣರವರ ಸರ್ಕಾರವಿದ್ದಾಗ ಬಾಗಲಕೋಟೆಗೆ ಎಷ್ಟು ಕೊಟ್ಟಿದ್ದಾರೆಂಬುದನ್ನು ಹೇಳುತ್ತೇನೆ 1999–2000ನೇ ಸಾಲಿನಲ್ಲಿ 66 ಕೋಟಿ, 2000–2001 ರಲ್ಲಿ 50 ಕೋಟಿ, 2003–04ರಲ್ಲಿ 37 ಕೋಟಿ, 2005–06ರಲ್ಲಿ 31 ಕೋಟಿ ಈಗ ನೀವು ಕೊಟ್ಟಿರುವುದು 26 ಕೋಟಿ

ಶ್ರಿ ಬಿ ಎಸ್ ಹೊರಟ್ಟಿ ಆಗ ನೀವು ಇನ್ನೂ ಕಾಂಗ್ರೆಸ್ ನಲ್ಲಿ ಇರಲಿಲ್ಲ ಆಗ ನೀವು ಜನತಾ ದಳದಲ್ಲಿದ್ದಿರಿ

ಶ್ರೀ ಬಸವರಾಜ ರಾಯರೆಡ್ಡಿ ಕಾಂಗ್ರಸ್, ಜನತಾ ದಳ ಎಂದು ನಾನು ಹೇಳಲಿಲ್ಲ ನಾನು ದೇವೇಗೌಡರನ್ನು ಹೊಗಳಲಿಲ್ಲವೇ, ಜೆ ಹೆಚ್ ಪಟೇಲ್ ರವರನ್ನು ಹೊಗಳಲಿಲ್ಲವೇ ಹೇಳಿ ನಾನು ದೇವೇಗೌಡರನ್ನು ಹೊಗಳಿದ್ದೇನೆ ವಿರೇಂದ್ರಪಾಟೀಲರನ್ನು ಹೊಗಳಿದ್ದೇನೆ ನೀವು ಅವರಂತೆ ಮಾಡಲಿಲ್ಲವೆಂದು ಹೇಳಿದ್ದೇನೆ

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ ಇವರಿಬ್ಬರೂ ಒಂದೇ ನಾಣ್ಯದ ಎರಡು ಮುಖ ಇದ್ದಂತೆ

ಉಪಾಧ್ಯಕ್ಷರೆ ಬಸವರಾಜ ರಾಯರೆಡ್ಡಿಯವರೆ, ನೀವು 5 00 ಗಂಟೆಗೆ ಮಾತನಾಡಲು ಆರಂಭಿಸಿದ್ದೀರಿ ಈಗ 6 30 ಗಂಟೆಯಾಗುತ್ತಿದೆ ಇನ್ನೂ

ಮಾತನಾಡುವವರು 25 ಮಂದಿ ಇದ್ದಾರೆ ಆದುದರಿಂದ ದಯವಿಟ್ಟು ಇನ್ನು 10 ನಿಮಿಷದಲ್ಲಿ ತಮ್ಮ ಭಾಷಣವನ್ನು ಮುಗಿಸಿ ನೀವು ಬಹಳ ಚೆನ್ನಾಗಿಯೇ ಮಾತನಾಡುತ್ತಿದ್ದೀರಿ ಆದರೆ ಬೇರೆಯವರಿಗೂ ಅವಕಾಶ ಮಾಡಿಕೊಡಬೇಕು ಎನ್ನುವ ಉದ್ದೇಶದಿಂದ ನಿಮ್ಮ ಭಾಷಣವನ್ನು ಬೇಗ ಮುಕ್ತಾಯ ಮಾಡಿ ಎಂದು ಹೇಳುತ್ತಿದ್ದೇನೆ ನಿಮ್ಮ ಭಾಷಣ ಬಹಳ ಚೆನ್ನಾಗಿದೆ ನಾನಂತೂ ನಿಮ್ಮ ಭಾಷಣವನ್ನು ಒಪ್ಪಿಕೊಂಡಿದ್ದೇನೆ

ಶ್ರೀ ಬಸವರಾಜ ರಾಯರೆಡ್ಡಿ – ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಈ ಸರ್ಕಾರಕ್ಕೆ ಸ್ಪಷ್ಟವಾಗಿ ಒತ್ತಾಯವನ್ನು ಮಾಡಿದ್ದೇನೆ ನಿಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಿ ಈ ಅಗ್ಗದ ಜನಪ್ರಿಯತೆಯ ಕೆಲಸಗಳನ್ನು ಬಿಟ್ಟು ನೀರಾವರಿಗಾಗಿ ತಾವು ಹೆಚ್ಚು ಗಮನವನ್ನು ಕೊಡಬೇಕಾಗಿದೆ ಇನ್ನು ಕಾವೇರಿ ಜಲಾನಯನ ಪ್ರದೇಶದ ಬಗ್ಗೆ ಹೇಳಬಯಸುತ್ತೇನೆ ದುರಾದೃಷ್ಟದಿಂದ ಈಗಾಗಲೇ ಕಾವೇರಿ ತೀರ್ಪು ಬಂದಿದೆ, ಫೈನಲ್ ಅವಾರ್ಡ್ ಬಂದ ಮೇಲೆ ನಮಗೆ ಸುಮಾರು 465 ಟಿ ಎಂ ಸಿ ಗೆ ನೀರಿನ ಅವಶ್ಯಕತೆ ಇದೆ ನೀರಾವರಿ, ಬೆಂಗಳೂರು ಮಹಾನಗರಕ್ಕೆ ಕುಡಿಯುವ ನೀರಿಗಾಗಿ, ಗ್ರಾಮಾಂತರ ಪ್ರದೇಶಕ್ಕೆ ಮತ್ತು ಉದ್ದಿಮೆಗಳನ್ನು ಸೇರಿಸಿಕೊಂಡಂತೆ 465 ಟಿ ಎಂ ಸಿ ನೀರು ನಮಗೆ ಅವಶ್ಯಕತೆ ಇದೆ ಆದರೆ ಟ್ರಿಬ್ಯುನಲ್ ನಮಗೆ ಕೊಟ್ಟಿರುವುದು ಕೇವಲ 217 ಟಿ ಎಂ ಸಿ ಮಾತ್ರ. ಇದು ಬಹಳ ಪರಮ ಅನ್ಯಾಯ ಅದಕ್ಕಾಗಿ ಮುಂದಿನ ದಿನಮಾನಗಳಲ್ಲಿ ಕುಡಿಯುವ ನೀರಿಗಾಗಿ ಸಿವಿಲ್‌ವಾರ್ ಆಗುವಂಥ ಪರಿಸ್ಥಿತಿ ಉದ್ಭವವಾಗುತ್ತದೆ ಏಕೆಂದರೆ ಬೆಂಗಳೂರು ಸಿಟಿ ಒಂದಕ್ಕೆ 30 ಟಿ ಎಂ ಸಿ ನೀರು ಬೇಕು ಆದರೆ ಟ್ರಿಬ್ಯುನಲ್ ಅವಾರ್ಡ್ ಮಾಡಿರುವುದು ಕೇವಲ 18 ಟಿ ಎಂ ಸಿ ಮಾತ್ರ. ಅಂದರೆ 2 ಟಿ ಎಂ ಸಿ ಗಿಂತಲೂ ಕಡಿಮೆ ಬಂತು ಹೀಗಾಗಿ ಈಗಾಗಲೇ ಕರ್ನಾಟಕ ಸರ್ಕಾರ ಟ್ರಿಬ್ಯುನಲ್ ಅವಾರ್ಡ್ ವಿರುದ್ಧ ಸುಪ್ರೀಕೋರ್ಟ್‌ನಲ್ಲಿ ಏನು ದಾವಾ ಹಾಕಿದೆ, ಆ ಮೂಲಕ ಈ ಟ್ರಿಬ್ಯುನಲ್ ಅವಾರ್ಡ್‌ನ್ನು ರದ್ದುಪಡಿಸಿ ಹೊಸ ಟ್ರಿಬ್ಯುನಲ್ ಮಾಡಿಸುವುದಕ್ಕೆ ಪ್ರಯತ್ನವನ್ನು ಮಾಡಬೇಕು ಅದರ ಬಗ್ಗೆ ಏನು ಚಿಂತನೆಯನ್ನು ಈ ಸರ್ಕಾರ ಮಾಡಿದೆ ಎಂಬುದನ್ನು ತಿಳಿಸಬೇಕು ತಮಿಳುನಾಡಿಗೆ 419 ಟಿ ಎಂ ಸಿ, ಕೇರಳಕ್ಕೆ 30 ಟಿ ಎಂ ಸಿ, ಪಾಂಡಿಚೇರಿಗೆ 7 ಟಿ ಎಂ ಸಿ ಮತ್ತು ಪರಿಸರಕ್ಕೆ 10 ಟಿ ಎಂ ಸಿ ಎಂದು ಏನು ಟ್ರಿಬ್ಯುನಲ್ ಅವಾರ್ಡ್ ಮಾಡಿದ್ದಾರೆ ಇದನ್ನು ಯಾವ ರಾಜ್ಯದವರು ಒಪ್ಪಿಲ್ಲ ನೋಡಿ ತಮಿಳುನಾಡಿಗೆ 419 ಟಿ ಎಂ ಸಿ ಯನ್ನು ಕೊಟ್ಟರೂ ಕೂಡ ಅವರಿಗೆ ಖುಷಿ ಇಲ್ಲ ಅಷ್ಟು ದುರಾಸೆ ಈ ತಮಿಳುನಾಡಿಗೆ ಇದೆ ಅದಕ್ಕಾಗಿ ಅವರೂ ಕೂಡ ಸುಪ್ರೀಂಕೋರ್ಟ್‌ಗೆ ಹೋಗಿದ್ದಾರೆ ಕೇರಳದವರೂ ಕೂಡ ಹೋಗಿದ್ದಾರೆ ಹೀಗಾಗಿ ಕರ್ನಾಟಕಕ್ಕೆ ಒಳ್ಳೆಯ ಅವಕಾಶ ಇದೆ All the states are before the Supreme Court. ಇದರ ಸದ್ಬಳಕೆಯನ್ನು ಮಾಡಿಕೊಂಡು ಈ ಟ್ರಿಬ್ಯುನಲ್

ಅವಾರ್ಡ್‌ನ್ನು ರದ್ದುಪಡಿಸಿ ಮತ್ತೊಂದು ಟ್ರಿಬ್ಯುನಲ್ ಮಾಡುತ್ತೀರೋ ಅಥವಾ ಸೌಹಾರ್ದತೆಯಿಂದ ಈ ನಾಲ್ಕು ರಾಜ್ಯಗಳ ಮುಖ್ಯಮಂತ್ರಿಗಳು ಕುಳಿತುಕೊಂಡು ಈ ಬಗ್ಗೆ ಚಿಂತನೆಯನ್ನು ಮಾಡಿ ಯಾವ ತರಹ ಸೌಹಾರ್ದತೆಯಿಂದ ಹಂಚಿಕೆ ಮಾಡಿಕೊಳ್ಳಬೇಕು ಎನ್ನುವುದರ ಬಗ್ಗೆ ಗಂಭಿರವಾದಂಥ ಚಿಂತನೆಯನ್ನು ಮಾಡುತ್ತೀರೋ ಎಂದು ಹೇಳಬೇಕು ಆದರೆ ಈ ಸರ್ಕಾರ ಆ ರೀತಿ ಮಾಡುತ್ತಿಲ್ಲ ನೀರಾವರಿ ಬಗ್ಗೆ ಚಿಂತನೆಯನೇ ಮಾಡುತ್ತಿಲ್ಲ "ಕೇವಲ ಸೈಕಲ್ ಕೊಡುತ್ತೇವೆ, ದೇವಸ್ಥಾನಕ್ಕೆ ಹಣ ಕೊಡುತ್ತೇವೆ, ಸ್ಮಶಾನಕ್ಕೆ ಹಣ ಕೊಡುತ್ತೇವೆ" ಎಂದು ಬರೇ ಇದೇ ಹೇಳುವುದೇ ಆಯಿತು ಇದು ಅಗ್ಗದ ಪ್ರಚಾರಕ್ಕಾಗಿ, ಪ್ರೊಡಕ್ಟಿವಿಟಿ ಬಗ್ಗೆ ವಿಚಾರವನ್ನೇ ಮಾಡುತ್ತಿಲ್ಲ ಮಾನ್ಯ ಯಡಿಯೂರಪ್ಪನವರೆ, ನೀವು ಕೊಡಿ, ನಾವೇನು ಕೊಡಬೇಡಿ ಎಂದು ನಿಮಗೆ ಹೇಳುವುದಿಲ್ಲ ಆದರೆ ನಿಮ್ಮ ಆದ್ಯತೆ, ಸರ್ಕಾರದ ಆದ್ಯತೆ ಯಾವುದರ ಮೇಲೆ ಇರಬೇಕಾಗಿತ್ತೋ ಅದರ ಮೇಲೆ ಇಲ್ಲ ಅದರ ಬಗ್ಗೆ ಬಹಳ ಗಂಭೀರವಾಗಿ ತಾವು ಚಿಂತನೆಯನ್ನು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ ನಾನು ಈಗಾಗಲೇ ನೀರಾವರಿ ವಿಚಾರವಾಗಿ ಕಾವೇರಿ ಮತ್ತು ಕೃಷ್ಣಾ ನದಿಯ ನೀರಿನ ಬಗ್ಗೆ ಹೇಳಿದ್ದೇನೆ ಇವೊತ್ತು ಪಶ್ಚಿಮ ವಾಹಿನಿ ನದಿಗಳಿಂದ 2 ಸಾವಿರ ಟಿ ಎಂ ಸಿ ನೀರು ಅಂದರೆ, exactly 50% of the water ಸಮುದ್ರಕ್ಕೆ ಹೋಗುತ್ತಿದೆ ಇವೊತ್ತು ಆ ನೀರು ಹೋಗುವುದನ್ನು ತಿರುವು ಮಾಡಬೇಕು ಇದನ್ನು ನಿಮ್ಮ ಒಂದೇ ಸರ್ಕಾರ ಚಿಂತನೆಯನ್ನು ಮಾಡುವುದಿಲ್ಲವೆಂದು ನಾನು ಅಪಾದನೆಯನ್ನು ಮಾಡುವುದಿಲ್ಲ ಇದು ಬಹಳ ಕಷ್ಟದ ಕೆಲಸ ಇದರ ಬಗ್ಗೆ ಗಂಭೀರವಾದಂಥ ಚಿಂತನೆಯನ್ನು ಮಾಡುವಂಥ ಕೆಲಸ ಯಡಿಯೂರಪ್ಪನವರೆ ನಿಮ್ಮ ಕಾಲದಲ್ಲಿ ಆಗಬೇಕು ನೀರಾವರಿಗಾಗಿ ಈ 2 ಸಾವಿರ ಟಿ ಎಂ ಸಿ ನೀರು ಪಶ್ಚಿಮವಾಹಿನಿಗಳಿಂದ ಸಮುದ್ರಕ್ಕೆ ಏನು ಹೋಗುತ್ತಿದೆ ಅದನ್ನು ತಿರುವು ಮಾಡಲು against the gravity ನೀವು ಮಾಡಬೇಕಾಗುತ್ತದೆ ಅದರ ಬಗ್ಗೆ ನೀವು ಏನು ಚಿಂತನೆಯನ್ನು ಮಾಡಿದ್ದೀರಿ ಎಂದು ದಯಮಾಡಿ ಸರ್ಕಾರದವರು ಹೇಳಬೇಕಾಗುತ್ತದೆ

ಶ್ರೀ ಡಿ ಆರ್ ಪಾಟೀಲ್ – ರಾಯರೆಡ್ಡಿಯವರೆ ಒಂದು ನಿಮಿಷ ಮಾನ್ಯ ಉಪಾಧ್ಯಕ್ಷರೆ, ನೇತ್ರಾವತಿ ತಿರುವು ಯೋಜನೆ ಗ್ರಾವಿಟಿ ಮೇಲೆಯೇ ಆಗುತ್ತದೆ ಬಹುತೇಕ ನಮ್ಮ ಗದಗ ಜಿಲ್ಲೆಯಿಂದ ಹಿಡಿದು ಕೋಲಾರ ಜಿಲ್ಲೆಯವರೆಗೂ ಅದರಿಂದ ಅನುಕೂಲವಾಗುತ್ತದೆ ಪರಮಶಿವಯ್ಯ ಎನ್ನುವ ಒಬ್ಬರು ರಿಟೈರ್ಡ್ ಚೀಫ್ ಇಂಜಿನಿಯರ್ ಈ ಪ್ರಾಜೆಕ್ಟ್‌ನ್ನು ತಯಾರು ಮಾಡಿದ್ದಾರೆ ತಾವು ದಯವಿಟ್ಟು ಅವರನ್ನು ಕರೆಸಿ ಅವರ ಜೊತೆ ಚರ್ಚೆ ಮಾಡಿ ಆ ದಿಸೆಯಲ್ಲಿ ನಿಮ್ಮ ಕಾರ್ಯಕ್ರಮ ರೂಪಿತಗೊಳ್ಳಬೇಕೆಂದು ಒತ್ತಾಯ ಮಾಡುತ್ತೇನೆ

ಶ್ರೀ ಕೆ ಅಭಯಚಂದ್ರ ಆ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜನಗಳಿಗೆ ಆಗುವಂಥ ತೊಂದರೆ ಬಗ್ಗೆ ಕೂಡ ಪರಿಶೀಲಿಸಬೇಕಾಗುತ್ತದೆ ನೇತ್ರಾವತಿ ತಿರುವು ಯೋಜನೆ ಬಗ್ಗೆ ಪರಮಶಿವಯ್ಯನವರು ರಿಪೋರ್ಟ್ ಕೊಡುತ್ತಾರೆ ಆದರೆ ಅದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ಆಗುವಂಥ ಹಾನಿಯನ್ನೂ ಕೂಡ ಆ ಸಂದರ್ಭದಲ್ಲಿ ಪರಿಶೀಲಿಸಬೇಕಾಗುತ್ತದೆ

ಶ್ರೀ ಎನ್ ಯೋಗೀಶ್‌ಭಟ್ ಮಾನ್ಯ ಉಪಾಧ್ಯಕ್ಷರೆ, ಈಗ ಪಶ್ಚಿಮವಾಹಿನಿಗಳಿಂದ ಸಾಕಷ್ಟು ನೀರನ್ನು ಬೇರೆ ಜಿಲ್ಲೆಗಳಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ ಆದುದರಿಂದ ಪಶ್ಚಿಮವಾಹಿನಿ ನೀರನ್ನು ತಿರುವುಗೊಳಿಸುವ ಪ್ರಾಜೆಕ್ಟ್ ಮೊದಲು ಅನುಷ್ಠಾನಕ್ಕೆ ಬರಲಿ ಅದನ್ನು ಮಾಡಿದ ನಂತರ ನಮಗೆ ಗೊತ್ತಾಗುತ್ತದೆ

ಶ್ರೀ ಯು ಟಿ ಖಾದರ್ ಮಾನ್ಯ ಅಧ್ಯಕ್ಷರೆ, ನೇತ್ರಾವತಿ ನದಿ ತಿರುವು ಯೋಜನೆಯನ್ನು ಕೈಬಿಡಬೇಕು ಏಕೆಂದರೆ ಇದರಿಂದ ದಕ್ಷಿಣ ಕನ್ನಡ ಜಿಲ್ಲೆಗೆ ತುಂಬಾ ಅನ್ಯಾಯವಾಗುತ್ತದೆ

ಶ್ರೀ ಬಸವರಾಜ ರಾಯರೆಡ್ಡಿ ಲೋಕೋಪಯೋಗಿ ಮಂತ್ರಿಗಳಾದ ರೇವಣ್ಣನವರು ಹೊರಟೇ ಬಿಟ್ಟರು ನೋಡಿ ಈಗ ನಾವು 2007 ರಲ್ಲಿ ಇದ್ದೇವೆ, ಇವೊತ್ತಿನ ದಿವಸ ನಮ್ಮ ರಾಜ್ಯದಲ್ಲಿ ಒಟ್ಟು ವಿದ್ಯುತ್ತಿನ ಉತ್ಪಾದನೆ ಎಲ್ಲಾ ಮೂಲಗಳಿಂದ, ಅಂದರೆ ಥರ್ಮಲ್, ಹೈಡ್ರೋ, ಇವೆಲ್ಲಾ ಸೇರಿ ಒಟ್ಟು 4995 ಮೆಗಾವ್ಯಾಟ್‌ಗಳು ಉತ್ಪಾದನೆಯಾಗಿದೆ ಸುಮಾರು 1 ಸಾವಿರ ಮೆಗಾವ್ಯಾಟ್ ಕೇಂದ್ರದಿಂದ ಬರುತ್ತದೆ ಸುಮಾರು 1,000 MW ಕೇಂದ್ರದಿಂದ ಬರುತ್ತದೆ ನೈವೇಲಿ, ರಾಮಗೊಂಡಂ, ಕೈಗಾ ಹೀಗೆ ಕೇಂದ್ರದ ಪಾಲು ಸೇರಿ ನಮಗೆ ಲಭ್ಯವಿರುವಂತಹ ವಿದ್ಯುತ್ ಸುಮಾರು 6,000 MW As per the records of the Energy Department ಇವತ್ತು ನಮಗೆ ಬೇಕಾಗಿರುವಂತಹ ವಿದ್ಯುತ್ 7,853 MW ಎಂದರೆ ನಾವು ಕರ್ನಾಟಕದಲ್ಲಿ 1,953 MW ವಿದ್ಯುತ್‌ನ ಕೊರತೆಯನ್ನು ಅನುಭವಿಸುತ್ತಿದ್ದೇವೆ ಇದರಿಂದ ಎಲ್ಲಾ ಕಡೆ load shedding ಆಗುತ್ತದೆ ಗ್ರಾಮಾಂತರ ಪ್ರದೇಶದಲ್ಲಿ 24 ಗಂಟೆ current ಕೊಡುವುದಕ್ಕಾಗುತ್ತಿಲ್ಲ, ರೈತರು ನೀರಾವರಿ ಪ್ರದೇಶದಲ್ಲಿ ನೀರನ್ನು ರಾತ್ರಿ ಹೊತ್ತು ಹಾಯಿಸಿಕೊಳ್ಳಬೇಕಾದಂತಹ ಪರಿಸ್ಥಿತಿ ಇದೆ ಇದಕ್ಕೆ ಗಂಭೀರವಾದಂತಹ ವಿದ್ಯುತ್ತಿನ ಉತ್ಪಾದನೆ ಬಗ್ಗೆ ಈ ಸರ್ಕಾರ ಚಿಂತನೆ ಮಾಡಬೇಕು ಹಿಂದಿನ ಸರ್ಕಾರ ಕೂಡ ಸಾಕಷ್ಟು ವಿದ್ಯುತ್ ಉತ್ಪಾದನೆಯನ್ನು ಮಾಡಿಕೊಟ್ಟಿದೆ ಮಾನ್ಯ J H Patel ಸರ್ಕಾರ ಇದ್ದಾಗ 800 MW ವಿದ್ಯುತ್‌ನ್ನು ಮಾಡಿಕೊಟ್ಟರು ಮಾನ್ಯ S M Krishnaರವರ ಸರ್ಕಾರ ಇದ್ದಾಗ ಸುಮಾರು 1,500 MW ವಿದ್ಯುತ್ ಉತ್ಪಾದನೆಯನ್ನು ಮಾಡಿಕೊಟ್ಟರು ಆದರೆ ಈ ಸರ್ಕಾರ ವಿದ್ಯುತ್‌ನ ಉತ್ಪಾದನೆ ಬಗ್ಗೆ ಹೆಚ್ಚು ಗಮನವನ್ನು

ಕೊಡಬೇಕು ಅದರ ಬಗ್ಗೆ ಗಂಭಿರವಾದಂತಹ ಚಿಂತನೆ ಈ ಸರ್ಕಾರದಲ್ಲಿ ಪ್ರಾರಂಭವಾಗಬೇಕು ನಾನು ಈಗಾಗಲೇ ಹೇಳಿದಂತೆ ಈಗ 2,000 MW ವಿದ್ಯುತ್ ಕಡಿಮೆಯಾಗುತ್ತದೆ, ಇನ್ನೊಂದು ಐದು ವರ್ಷದಲ್ಲಿ ನಮಗೆ ಇನ್ನೂ 3,000 MW ಬೇಕು ಎಂದರೆ ಕರ್ನಾಟಕಕ್ಕೆ ಸುಮಾರು 5,000 MW ವಿದ್ಯುತ್ ಬೇಕಾಗುತ್ತದೆ ಅಷ್ಟು ಕೊರತೆ ಬೀಳುತ್ತದೆ ಹೀಗಾಗಿ ಅದರ ಉತ್ಪಾದನೆ ಕಡೆ ಗಮನ ಕೊಡಬೇಕು ಹಿಂದೆ ಮಾನ್ಯ ಜೆ ಹೆಚ್ ಪಟೇಲ್‌ರವರು ಮುಖ್ಯ ಮಂತ್ರಿಗಳಾಗಿದ್ದಂತಹ ಸಂದರ್ಭದಲ್ಲಿ ಬಳ್ಳಾರಿಯಲ್ಲಿ Thermal power Station ಪ್ರಾರಂಭ ಮಾಡಬೇಕೆಂದು ಮಾಡಿದರು ಮುಂದೆ S M Krishnaರವರು ತಕ್ಷಣ ಅಧಿಕಾರಕ್ಕೆ ಬಂದರು ಅವರು ಬಂದ ತಕ್ಷಣ ಸುಮಾರು 2,100 ಕೋಟಿ ರೂಪಾಯಿಗಳ ವೆಚ್ಚದಲ್ಲಿ 500 MW ವಿದ್ಯುತ್ ಉತ್ಪಾದನೆ ಸಲುವಾಗಿ ಪ್ರಯತ್ನ ಮಾಡಿದರು ಈಗ ಅದು ಮುಗಿಯುವ ಹಂತದಲ್ಲಿದೆ ಅದಾದನಂತರ ಮಾನ್ಯ ಧರ್ಮಸಿಂಗ್‌ರವರ ಸರ್ಕಾರ ಬಂದಮೇಲೆ 2nd Stage ನಲ್ಲಿ 500 MW ಮಾಡಬೇಕೆಂದು ಹೇಳಿ ಪ್ರಾರಂಭ ಮಾಡಿದರು ಆ ಕೆಲಸ ಕೂಡ ಪ್ರಾರಂಭವಾಗುತ್ತಿದೆ ನಾನು ಮಾನ್ಯ ಯಡಿಯೂರಪ್ಪನವರಿಗೆ ಹೇಳುವುದಕ್ಕೆ ಇಚ್ಛೆಪಡುವುದೇನೆಂದರೆ, ತೋರಣಗಲ್ಲೂ ಪ್ರದೇಶ ಏನಿದೆ, ಅಲ್ಲಿ ನಿಮಗೆ 2,000 MW ವಿದ್ಯುತ್ ಅನ್ನು ಉತ್ಪಾದನೆ ಮಾಡುವುದಕ್ಕೆ ನಿಮಗೆ ಸಾಧ್ಯವಿದೆ ಅಲ್ಲಿ 2,000 MWನ Super Thermal Power Station ಮಾಡುವುದಕ್ಕೆ ನಿಮಗೆ ಸಾಧ್ಯವಿದೆ It is as good as like Ramagondam Super Thermal Power Station ಅದನ್ನು ಮಾಡುವುದಕ್ಕೆ ಸಾಧ್ಯತೆಗಳಿವೆ ಅದರ ಬಗ್ಗೆ ನಿಮ್ಮ ಈ ಸರ್ಕಾರ ಚಿಂತನೆ ಮಾಡಬೇಕು ಏಕೆಂದರೆ ಮಾನ್ಯ ಜಿ ಹೆಚ್ ಪಟೇಲ್ ಮತ್ತು ಧರ್ಮಸಿಂಗ್ ಇದ್ದಾಗ, ಈ ಯೋಜನೆಗಳು ಆಯಿತು, ನಿಮ್ಮ ಸರ್ಕಾರ ಇದ್ದಾಗ ಏನೂ ಮಾಡಲಿಲ್ಲ ನಿಮಗೆ ಇನ್ನೂ 1,000 MW ಮಾಡುವುದಕ್ಕೆ ಸಾಧ್ಯತೆ ಇದೆ ಇದಕ್ಕೆ ಕಾರಣ ಅಲ್ಲಿ ಕಲ್ಲಿದ್ದಲು ಮತ್ತು ನೀರು ಇದೆ ಅಲ್ಲಿ ನೀರು ವಿಫಲವಾಗಿ ಸಿಗುತ್ತದೆ ಅಲ್ಲಿ ಕಲ್ಲಿದ್ದಲು ಸಾಗಾಣಿಕೆಗೆ ರೈಲು ಮಾರ್ಗಗಳಿವೆ ಮತ್ತು ರಸ್ತೆ ಸಂಪರ್ಕಗಳಿವೆ ಹೀಗಾಗಿ ನೀವು ವಿದ್ಯುತ್ ಉತ್ಪಾದನೆ ಬಗ್ಗೆ ಗಂಭೀರವಾಗಿ ಚಿಂತನೆ ಮಾಡಿ ಈ ಬಗ್ಗೆ ನಿಮ್ಮ ರಾಜಕೀಯ ಇಚ್ಛಾಶಕ್ತಿಯನ್ನು ತೋರಿಸಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ Raichur Thermal Power Station ನಲ್ಲಿ ಈಗಾಗಲೇ 210 MW x 7 ಎಂದರೆ ಸುಮಾರು 1,470 MW ವಿದ್ಯುತ್ ಉತ್ಪಾದನೆಯಾಗುತ್ತದೆ ಹಿಂದೆ ಮಾನ್ಯ ಎಸ್ ಎಂ ಕೃಷ್ಣರವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ 7 ಮತ್ತು 8 ಘಟಕಗಳನ್ನು ಪ್ರಾರಂಭ ಮಾಡಿದರು ಮಾನ್ಯ ದೇವೇಗೌಡರು ಮತ್ತು ಮಾನ್ಯ ಜೆ ಹೆಚ್ ಪಟೇಲರು ಇದ್ದಂತಹ ಸಂದರ್ಭದಲ್ಲಿ ನಾನು Raichur district in charge minister

ಆಗಿದ್ದೆ ಆಗ 6ನೇ ವಿದ್ಯುತ್ ಘಟಕವನ್ನು ಉತ್ಪಾದನೆ ಮಾಡುವುದಕ್ಕೆ ಪ್ರಯತ್ನ ಮಾಡಿದರು ಹೀಗಾಗಿ ಅಲ್ಲಿ 1470 MW ವಿದ್ಯುತ್ ಉತ್ಪಾದನೆಯಾಗುತ್ತಿದೆ ಅಲ್ಲಿ ಇನ್ನೂ 1,000 MW ವಿದ್ಯುತ್ ಉತ್ಪಾದನೆ ಅವಕಾಶವಿದೆ ಅದರ ಬಗ್ಗೆ ಈ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳುವುದನ್ನು ಇಚ್ಛೆಪಡುತ್ತೇನೆ, ರಾಯಚೂರು ಮತ್ತು ಬಳ್ಳಾರಿಯಲ್ಲಿ Thermal Power Station ಏನಿವೆ, ಇವೆಲ್ಲವೂ ಕೂಡ ಕಲ್ಲಿದ್ದಲು ಮುಖಾಂತರ ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿವೆ ಈಗಾಗಲೇ ನಮಗೆ ಪ್ರತಿ ದಿವಸಕ್ಕೆ 25,000 metric ton ಕಲ್ಲಿದ್ದಲು ಬೇಕಾಗುತ್ತದೆ ಇದನ್ನು ಪ್ರತಿದಿನ burn ಮಾಡುತ್ತೇವೆ, ಅದರಿಂದ pollution ಆಗುತ್ತದೆ. ಅದಕ್ಕಾಗಿ gas turbine ಮಾಡುವುದಕ್ಕೆ ಪ್ರಯತ್ನ ಮಾಡಿ ಮಾನ್ಯ ಯಡಿಯೂರಪ್ಪನವರೆ ತಮಗೆ ಗೊತ್ತಿದೆ, ಮಹಾರಾಷ್ಟ್ರದ ದಾದೊಲ್‌ನಲ್ಲಿ gas turbine ಅನ್ನು ಮಾಡಿದ್ದಾರೆ ಅದರಿಂದ ಇವತ್ತು 2,000 MW ಗಿಂತ ಹೆಚ್ಚು ವಿದ್ಯುತ್ ಉತ್ಪಾದನೆಯನ್ನು ಮಾಡುತ್ತಿದ್ದಾರೆ ಅದರ ಬಗ್ಗೆ ಈ ಸರ್ಕಾರ ಗಂಭೀರವಾಗಿ ಚಿಂತನೆ ಮಾಡಬೇಕು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಅಧ್ಯಕ್ಷರೆ, ಇವತ್ತು ಸೋಮವಾರ ಆಯವ್ಯಯದ ಬೇಡಿಕೆಗಳ ಮೇಲೆ ಚರ್ಚೆಯಾಗುತ್ತಿದೆ 225 ಜನ ಶಾಸಕರಲ್ಲಿ ಇಲ್ಲಿ 28 ಜನ ಶಾಸಕರು ಮಾತ್ರ ಇದ್ದೇವೆ ಅದರಲ್ಲಿ ಇಲ್ಲಿ 6 ಜನ ಮಂತ್ರಿಗಳಿದ್ದಾರೆ ಈ ಸದನದ ಪರಿಸ್ಥಿತಿ ಎಲ್ಲಿಗೆ ಬಂತು? ನಾವು ಯಾವ ಹಂತಕ್ಕೆ ಹೋಗುತ್ತಿದ್ದೇವೆಂದು ತಮಗೆ ಹೇಳುತ್ತೇನೆ ಮಾನ್ಯ ಮುಖ್ಯ ಮಂತ್ರಿಗಳು Sampleಗೆ ಬಂದರು, 50 sign ಹಾಕಿದರು, ಹೊರಟರು ಇದೇನು ಸಭೆ? ಇದಕ್ಕೆ ಏನಾದರೂ ಗಾಂಭೀರ್ಯ ಇದೆಯಾ? ಇಲ್ಲಿ ಸುಮಾರು 28 ರಿಂದ 30 ಬೇಡಿಕೆಗಳನ್ನು agendaದಲ್ಲಿ ,ಸಂಪೂರ್ಣವಾಗಿ ಇಟ್ಟಿದ್ದೀರಿ ಅದರ ಬಗ್ಗೆ ಸಮಗ್ರವಾಗಿ ಚರ್ಚೆ ನಡೆಯುತ್ತಿದೆ ಆ ಬೇಡಿಕೆಗಳಿಗೆ ಸಂಬಂಧಪಟ್ಟಂತಹ ಮಂತ್ರಿಗಳು ಇಲ್ಲ ಆ ಕಡೆ ಹೋಗಲಿ, ಈ ಕಡೆಯಾದರೂ 50 ಜನ ಕುಳಿತುಕೊಂಡು, ನಾವು ಮಾತನಾಡಿದರೆ ಕೇಳಬೇಕು ಇಲ್ಲಿ ನೋಡಿ ಸಂಪೂರ್ಣವಾಗಿ ಒಂದು ರೀತಿ ಪ್ರೇತ ಕಳೆ, ಈ ರೀತಿಯ ಭೀಕರವಾದಂತಹ ಪರಿಸ್ಥಿತಿ ಏನಿದೆ ಈ ರೀತಿಯ ಪರಿಸ್ಥಿತಿ ಯಾವತ್ತು ಇರಲಿಲ್ಲ ಸುವರ್ಣ ಯುಗವನ್ನು ನೋಡಿಯಾಯಿತು ಮಾನ್ಯ ಪ್ರಕಾಶ್‌ರವರೆ ಏನು ಈ ಪರಿಸ್ಥಿತಿ? ಈ ಸದನಕ್ಕೆ ಎಷ್ಟು ಪ್ರಾಮುಖ್ಯತೆ ಇರಬೇಕು ಮಾನ್ಯ ರಾಯರೆಡ್ಡಿಯವರೆ ತಾವು ಸುಮ್ಮನೆ ಇರಿ, ತಾವು ಬಹಳ ಸಮಗ್ರವಾಗಿ ಮಾತನಾಡಿದ್ದೀರಿ ಸಂತೋಷ ನೀವು ಮಾತನಾಡುವುದನ್ನು ಕೇಳೂವುದಕ್ಕೆ ಇಲ್ಲಿ ಯಾರಾದರೂ ಬೇಕಲ್ಲ ಈ

ಸದನಕ್ಕೆ ಏನಾದರೂ ಗಾಂಭೀರ್ಯ ಇರಬೇಕು ಮಾನ್ಯ ರಾಜಣ್ಣನವರೆ ನಾನು ಬೆಳಿಗ್ಗೆ ಕೂಡ ನಾವು ನೀವು ಇಲ್ಲಿ ಮಾತನಾಡಿದೆವು

ಶ್ರೀ ಎನ್ ರಾಜಣ್ಣ ನಿಮ್ಮ ಅಕ್ಕಪಕ್ಕ ಇಲ್ಲವಲ್ಲ ಎಂದು ನನ್ನ ವ್ಯದೆ

ಶ್ರೀ ವಾಟಾಳ್ ನಾಗರಾಜ್ ಅದೇನೆ ಇರಲಿ, ಎರಡೂ ಕಡೆ, ನಾನು ಆ ಕಡೆ ಈ ಕಡೆ ಎಂದು ಹೇಳುವುದಿಲ್ಲ

ಶ್ರೀ ಮಲ್ಲಿಕಾರ್ಜುನ ಖರ್ಗೆ ಅಕ್ಕಪಕ್ಕ ಏಕೆ ಬೇಕು? ಚುಚ್ಚಯವುದಕ್ಕೆ ಒಬ್ಬರೇ ಸಾಕು ಮೂರು ಜನ ಏಕೆ ಬೇಕು

ಶ್ರೀ ವಾಟಾಳ್ ನಾಗರಾಜ್ ಮಾನ್ಯ ಉಪಾಧ್ಯಕ್ಷರೆ, ತಮಗೂ ಗೊತ್ತಿದೆ ನಾವು ಈ ಸದನಕ್ಕೆ ಎಷ್ಟು ಗೌರವ ಕೊಡಬೇಕು? ಅದರಲ್ಲೂ ಇಲ್ಲಿ ಅಯವ್ಯಯದ ಪ್ರತಿ ಬೇಡಿಕೆಗಳ ಬಗ್ಗೆ ಚರ್ಚೆ ಮಾಡಿ ಯಾವ್ಯಾವ ರೀತಿ ಬೆಳಕು ಚೆಲುತ್ತಾರೆ? ನಾವೇನು ಮಾಡಬೇಕು? ಏನೂ ಕೂಡ ಯಾರಿಗೂ ಬೇಕಾಗಿಲ್ಲ ಈ ಪರಿಸ್ಥಿತಿ ನಿರ್ಮಾಣವಾದರೆ ಈ ಸದನಕ್ಕೆ ಅದರಲ್ಲೂ ಸಂವಿಧಾನಕ್ಕೆ ಪ್ರಜಾತಂತ್ರ ವ್ಯವಸ್ಥೆಯಲ್ಲಿ ಅಪಚಾರವಾದಂತಹ ಪದ್ಧತಿ ಇದು ಒಳ್ಳೆಯ ಸೂಚನೆ ಏನಲ್ಲ ನಮ್ಮ ಸ್ನೇಹಿತರುಗಳೆಲ್ಲಾ ಎಲ್ಲಿ ಹೋಗಿದ್ದಾರೆ ಅವರಿಗೆ ಯಾವ ರಾಜಕಾರಣ? ಏನಾದರೂ ರಾಜಕಾರಣ ಇರಬೇಕು ಈ ಸಮ್ಮಿಶ್ರ ಸರ್ಕಾರದಲ್ಲಿ ತೀವ್ರವಾದಂತಹ ಒಡಕಾಗಿ ಎಲ್ಲಾದರೂ ಒಂದು ಕಡೆ ಸೇರಿ ಏನಾದರೂ ಚರ್ಚೆ ನಡೆಯುತ್ತಿದೆಯಾ? ಏನೇ ಆಗಲಿ ಇತ್ತೀಚಿನ ದಿನಗಳಲ್ಲಿ ಈ ರೀತಿ ನಡೆಯುತ್ತಿದೆ ಈಗ ಪತ್ರಿಕೆಗಳಲ್ಲಿ ಬರುತ್ತಿರುವುದನ್ನು ನೋಡಿದರೆ ಆ ರೀತಿ ಏನಾದರೂ ಪರಿಸ್ಥಿತಿ ನಿರ್ಮಾಣವಾಗಿದೆಯಾ?

ಶ್ರೀ ಜೆ ಸಿ ಮಾಧುಸ್ವಾಮಿ ಎಲ್ಲಾ Medical checkup ನಲ್ಲಿದ್ದಾರೆ

ಶ್ರೀ ವಾಟಾಳ್ ನಾಗರಾಜ್ ವೈದ್ಯಕೀಯ ತಪಾಸಣೆ ನಡೆಯುತ್ತಿದೆ ಎಂದು ಮಾನ್ಯ ಮಾಧುಸ್ವಾಮಿಯವರು ಹೇಳಿದರು ಇಷ್ಟೊಂದು 200 ಜನ ಶಾಸಕರಿಗೆ ಅನಾರೋಗ್ಯ ಇದೆಯೇ? ಯಾವ್ಯಾವ ರೋಗ? ಏನೇನು ರೋಗ ಬಂದಿದೆ? ಏನಿದು?

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಉಪಾಧ್ಯಕ್ಷರೆ, ನೀವೆಲ್ಲಿ ನಾವು ಇರಬೇಕೆಂದು insist ಮಾಡುವುದಕ್ಕಿಂತಲೂ ಆಡಳಿತ ಪಕ್ಷದ ದೃಷ್ಟಿಯಿಂದ ಒಳ್ಳೆಯದು ಏಕೆಂದರೆ ಅನೇಕ ಜನ ಹೊಸ ಮಂತ್ರಿಗಳು ಆಗಿ ಹೊಸದಾಗಿ ಅಧಿಕಾರ ವಹಿಸಿಕೊಂಡಿದ್ದಾರೆ ಯಾರು demand ಮೇಲೆ ಏನು ಮಾತನಾಡುತ್ತಾರೆ ಎಂದು ತಿಳಿದುಕೊಂಡು ಅದಕ್ಕೆ ಉತ್ತರ ಕೊಡುವಂತಹ ಕೆಲಸವಾಗಬೇಕು ಉತ್ತರ ಕೊಡುವುದಕ್ಕಾಗದೇ ಇದ್ದರೂ ಕನಿಷ್ಟ ಅವರವರ ಇಲಾಖೆಯಲ್ಲಿ ಸಂಬಂಧಪಟ್ಟಂತಹ Secretaryಗಳನ್ನು ಕರೆದು, ವಿಧಾನಸಭೆಯಲ್ಲಿ ಇಂತಹ ಪ್ರಶ್ನೆ ಬಂದಿತ್ತು ಇದು ಏನಾಯಿತು? ಎಲ್ಲಿಯವರೆಗೆ ಬಂತು ಎಂದು ಕೇಳೂವುದಕ್ಕಾದರೂ ಅವರಿಗೆ ಅವಕಾಶ ಇದೆ ಆದರೆ ಇಲ್ಲಿ

ಅವರು ಕಲಿಯುವುದಕ್ಕೂ ಕೂಡ ತಯಾರಿಲ್ಲ, ಕುಳಿತುಕೊಳ್ಳುವುದಕ್ಕೂ ತಯಾರಿಲ್ಲವೆಂದರೆ ಬಹಳ ಕಷ್ಟವಾಗುತ್ತದೆ ಉತ್ತರವನ್ನು ಯಾರಾದರು ಕೊಡಬಹುದು ಹಿಂದೆ ಅನೇಕ ಸಾರಿ ಮಾನ್ಯ ಯಡಿಯೂರಪ್ಪನವರೆ, ಇಲ್ಲಿ ಕುಳಿತಾಗ ಯಾರೋ ಒಬ್ಬಿಬ್ಬರು ಇಲ್ಲದೇ ಹೋದರೆ ಬಹಳ ಗಲಾಟೆ ಮಾಡುತ್ತಿದ್ದರು ವಿಷಯಕ್ಕೆ ಸಂಬಂಧಪಟ್ಟವರು ಇಲ್ಲದಿದ್ದಾಗ ಭಾಷಣವನ್ನೇ ಮಾಡಿಲ್ಲ ಈಗಲೂ ಕೂಡ 35 ಜನ ಮಂತ್ರಿಗಳು ಕೂಡ present ಇರಬೇಕೆಂದು ಇಲ್ಲ 50% ಅಥವಾ 30% ಇರಲಿ, ಅದೇ ರೀತಿಯಾಗಿ secretaryಗಳು ಇದ್ದರೆ ಏನಾದರೂ ಮಾತನಾಡುವುದಕ್ಕೆ ಇನ್ನೂ ಕೂಡ ಚೆನ್ನಾಗಿರುತ್ತದೆ ನಾವು ಯಾವುದೇ ವಿಷಯದ ಬಗ್ಗೆ ನೂರು ಮಾತನಾಡಿದರೆ ಒಂದೆರಡು ಹೊಸ ಹೊಸ ಉಪಯುಕ್ತವಾದಂತಹ ಸಲಹೆಗಳು ಇರಬಹುದಲ್ಲವೇ? ಅದರ ಬಗ್ಗೆ ಅವರಿಗೂ ಕೂಡ ತಿಳಿದುಕೊಳ್ಳುವುದಕ್ಕಾಗುತ್ತದೆ ಇದು ಸರಿಯಲ್ಲ, ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದಂತೆ ತಾವು ಕನಿಷ್ಠ ಅವರು ಬರುವ ಹಾಗೆ ಮಾಡಬೇಕು ಇಲ್ಲವೆಂದರೆ ಮಾನ್ಯ ಉಪ ಮುಖ್ಯಮಂತ್ರಿಗಳು ಕೂಡ ಸ್ವಲ್ಪ ಕುಳಿತುಕೊಳ್ಳಿ ಎಂದು ಹೇಳಿ, Whip ಮುಖಾಂತರ ಅವರಿಗೆ ತಿಳಿಸಿ ಹೇಳಬೇಕು ಮಾನ್ಯ ಜೆ ಹೆಚ್ ಪಟೇಲ್‌ನಂತ ವಯಸ್ಸಾದವರೇ ಇಲ್ಲಿ ಕುಳಿತಿರುತ್ತಿದ್ದರು ದಿವಂಗತ ಗುಂಡೂರಾವ್ ಕುಳಿತಿರುತಿದ್ದರು ಮಾನ್ಯ ದೇವರಾಜ್ ಅರಸು ಅವರಂತೂ ಕುಳಿತೇ ಇರುತ್ತಿದ್ದರು ನಾನು ನಿಮಗೆ ದೊಡ್ಡಸ್ತಿಕ್ಕೆಗೆ ಎಂದು ಹೇಳೂತ್ತಿಲ್ಲ, 36 ವರ್ಷದಲ್ಲಿ ನಾನು Assembly ಯಲ್ಲಿ ಒಂದು ದಿವಸ ಮಾತ್ರ absent ಇದ್ದೇನೆ ಇವತ್ತೂ ಕೂಡ ನಾನು ಗುಲ್ಬರ್ಗಾದಿಂದ 5 00 ಗಂಟೆ flight ನಲ್ಲಿ ಬಂದು ನೇರವಾಗಿ ಇಲ್ಲಿಗೆ ಬಂದಿದ್ದೇನೆ ಏನೋ urgent ಕೆಲಸ ಇದ್ದರೆ ಹೋಗಲಿ At least ಅವರ demand ಚರ್ಚೆಗೆ ಬಂದಾಗ ಸಚಿವರು ಹಾಜರಿರಬೇಕಾಗುತ್ತದೆ ಸದನದಲ್ಲಿ ಯಾವುದೇ ಗಲಾಟೆಯಿಲ್ಲ, ಗದ್ದಲವಿಲ್ಲ, ಧರಣಿಯಿಲ್ಲ, ಮಾತನಾಡಬೇಕು ಎನ್ನುವುದನ್ನು ನಾವು ತೀರ್ಮಾನ ಮಾಡಿಕೊಂಡು, ಇವುಗಳು ಯಾವುದನ್ನೂ ಮಾಡುವುದು ಬೇಡವೆಂದು ಹೇಳಿ ಮಾತನಾಡುವುದಕ್ಕೆ ನಿಂತಿದ್ದೇವೆ ಅದನ್ನು ಕೇಳುವುದಕ್ಕೂ ಸೌಜನ್ಯವಿಲ್ಲವೆಂದರೆ ನಾವೇನು ಮಾಡಬೇಕು

ಶ್ರೀ ವಾಟಾಳ್ ನಾಗರಾಜ್ · ಮಾನ್ಯ ಉಪಾಧ್ಯಕ್ಷರೇ, ನನಗೊಂದು ವಿಷಯ ಜ್ಞಾಪಕಕ್ಕೆ ಬರುತ್ತದೆ ತಮಗೂ ಗೊತ್ತಿರಬಹುದು ಮಾನ್ಯ ವೀರೇಂದ್ರ ಪಾಟೀಲರಿಗೆ ಪಾರ್ಶ್ವವಾಯು ಆಗಿತ್ತು ಅವರು ಈ ಒಂದು ಪರಿಸ್ಥಿತಿಯಲ್ಲೂ ದೊಣ್ಣೆ ಹಿಡಿದುಕೊಂಡು, ಮೆಟ್ಟಿಲು ಹತ್ತಿಕೊಂಡು ಬಂದು ಇಲ್ಲಿ ಕುಳಿತುಕೊಳ್ಳುತ್ತಿದ್ದರು ಆಗ ಅವರ ಬಾಯಿ ಇನ್ನೂ ಸರಿಯಾಗಿರಲಿಲ್ಲ ಅಂಥಾದ್ದರಲ್ಲೂ ತೊದಲುನುಡಿಯಲ್ಲೇ ಇಲ್ಲಿ ಕಾವೇರಿಯ ಬಗ್ಗೆ ಭಾಷಣ

ಮಾಡಿದರು ಅಂದರೆ, ಈ ಸದನಕ್ಕೆ ಎಷ್ಟು ಗೌರವ, ಗಾಂಭೀರ್ಯ ಇತ್ತು ಎನ್ನುವುದು ಅರ್ಥವಾಗುತ್ತದೆ ಇದುವರೆಗೆ ನಾನು ಒಂದು ದಿನವೂ ಸದನಕ್ಕೆ ಗೈರುಹಾಜರಾಗಿಲ್ಲ ಎನ್ನುವುದನ್ನು ತಮಗೆ ಹೇಳುತ್ತೇನೆ ಎಂದ ಸಂದರ್ಭ ಬಂದರೂ ನಾನು ಇಲ್ಲಿ ಬಂದು ಕುಳಿತಿದ್ದೇನೆ ಬೆಳಿಗ್ಗೆ ಬಂದು, ಅಧ್ಯಕ್ಷರನ್ನು ಭೇಟಿ ಮಾಡಿ, ನಾವು ಏನು ಮಾತನಾಡಬೇಕು ಎನ್ನುವುದನ್ನು ಹೇಳಿ ಇಲ್ಲಿ ಬಂದು ಕುಳಿತಿರುತ್ತೇವೆ ಬೆಳಿಗ್ಗೆ ನಾವು ನೋಡುತ್ತಿದ್ದಾಗ ಗಮನಿಸಿದಂತೆ, ಕೆಲವು ಮಂತ್ರಿಗಳ ಕೈಯ್ಯಲ್ಲಿ ಉತ್ತರ ಕೊಡುವುದಕ್ಕೆ ಆಗುತ್ತಿರಲಿಲ್ಲ ತಾವು ಅವರಿಗೆ ರಕ್ಷಣೆ ಕೊಡುತ್ತಿದ್ದೀರಿ ಚಿಂತೆಯಿಲ್ಲ, ಅವರು ಕಳಿತುಕೊಳ್ಳಲಿ ಆದರೆ, ಈ ಸದನಕ್ಕೆ ಗೌರವ ಬೇಕಲ್ಲವೇ? ಈ ಸದನ ಎಂದರೇನು? ಏತಕ್ಕೋಸ್ಕರ ಈ ಸದನವನ್ನು ನಡೆಸಬೇಕು? ಈ ರೀತಿಯಾದರೆ ಅಧಿಕಾರಿಗಳಿಗೂ ತೀರಾ ಸರಾಗ, ಸಲೀಸು ಆಗುತ್ತದೆ ಅವರಿಚ್ಛೆ ಬಂದ ಹಾಗೆ ನಡೆದುಕೊಳ್ಳುತ್ತಾರೆ ಪ್ರತಿ ಬೇಡಿಕೆಗಳ ಮೇಲೆ ಚರ್ಚೆ ನಡೆಯುವಾಗ, ಪ್ರತಿ ಇಲಾಖೆಯಲ್ಲಿ ಆಗಿರತಕ್ಕಂಥ ಅನ್ಯಾಯಗಳ ಬಗ್ಗೆ ನಾವು ಯಾವ ಯಾವ ರೀತಿ ಹೇಳಬೇಕಾಗುತ್ತದೋ ಆ ಎಲ್ಲ ರೀತಿಯಲ್ಲಿ ಹೇಳಬೇಕಾಗುತ್ತದೆ ಅಧಿಕಾರಿಗಳನ್ನೂ ಬಿಡವುದಕ್ಕೆ ಆಗುವುದಿಲ್ಲ, ಮಂತ್ರಿಗಳನ್ನೂ ಬಿಡುವುದಕ್ಕೆ ಆಗುವುದಿಲ್ಲ ಮತ್ತು ಅನ್ಯಾಯವಾಗಿರತಕ್ಕಂಥ ಎಲ್ಲವನ್ನೂ ನಾವು ಹೇಳಬೇಕಾಗುತ್ತದೆ ಅಂಥ ಪರಿಸ್ಥಿತಿಯಲ್ಲಿ ಇಲ್ಲಿ ಯಾರೂ ಇಲ್ಲ ಎಂದರೆ, ಎಲ್ಲರೂ ಎಲ್ಲಿ ಹೋಗಿದ್ದಾರೆ? ಪರಿಸ್ಥಿತಿ ಏನಾಗಿದೆ ಎಂದು ನೋಡಿ ಸ್ವಲ್ಪ ನೀವು ಆ ಕಡೆಗೆ ಒಂದು ಕಣ್ಣಾಡಿಸಿದರೆ ಗೊತ್ತಾಗುತ್ತದೆ ಈ ಸದನ ನಿಮಗೆ ಹೇಗೆ ಕಾಣುತ್ತದೆ? ಎಷ್ಟು ಭೀಕರವಾಗಿ ಕಾಣುತ್ತಿದೆ ಈ ಸದನಕ್ಕೆ ಒಂದು ಗೌರವ ಬೇಡವೇ? ಇದು ಸರಿಯಾದ ಕ್ರಮವಲ್ಲ

ಶ್ರೀ ಬಸವರಾಜ ರಾಯರೆಡ್ಡಿ ಮಾನ್ಯ ಹಿರಿಯ ಸದಸ್ಯರಾದಂಥ ವಾಟಾಳ್ ನಾಗರಾಜ್‌ರವರು ಮತ್ತು ಖರ್ಗೆಯವರು ಹೇಳಿದುದರಲ್ಲಿ ಸತ್ಯವಿದೆ

ಉಪಾಧ್ಯಕ್ಷರು ಅವರು ಹೇಳಿರುವಂಥಾದ್ದಕ್ಕೆ ನೀವು ಹೋಗಬೇಡಿ ನೀವು ಮಾತನಾಡಿ

ಶ್ರೀ ಬಸವರಾಜ ರಾಯರೆಡ್ಡಿ ಸಂಬಂಧಪಟ್ಟ ಮಂತ್ರಿಗಳಿಲ್ಲ ಎಂದು ಹೇಳುತ್ತಿದ್ದೇನೆ

ಉಪಾಧ್ಯಕ್ಷರು ಅದನ್ನು ಅವರು ಹೇಳಿದ್ದಾರೆ ಎಷ್ಟು ಜನ ಬರುತ್ತಾರೆ ಎಂದು ನಾಳೆ ನೋಡೋಣ ಎಷ್ಟು ಹೊತ್ತು ನಡೆಸುತ್ತೇವೆ, ಎಷ್ಟು ಜನ ಇರುತ್ತಾರೆ ಎಂದು ನೋಡೋಣ

ಶ್ರೀ ಬಸವರಾಜ ರಾಯರೆಡ್ಡಿ ನೀರಾವರಿ ಬಗ್ಗೆ ಇಷ್ಟೆಲ್ಲಾ ಮಾತನಾಡಿದೆ ಎನರ್ಜಿ ಬಗ್ಗೆ ಮಾತನಾಡಿದೆ ಆದರೆ ಅಲ್ಲಿ ಯಾರೂ ಇಲ್ಲ ಎಂದು ಹೇಳಿದೆ ಅವರು ಹೇಳಿದ್ದು ಸತ್ಯವಿದೆ ಅವರಿಗೆ ಜವಾಬ್ದಾರಿ ಬೇಡವೇ? Energy

Department ಮತ್ತು Irrigation Department Minister ಜವಾಬ್ದಾರಿ ಬೇಡವೇ? ನಾನು ಈಗಾಗಲೇ ಹೇಳಿದಂತೆ, ಬಳ್ಳಾರಿ ಮತ್ತು ರಾಯಚೂರು ಶಾಖೋತ್ಪನ್ನ ಕೇಂದ್ರಗಳಿಗೆ major source ಎಂದರೆ ಕಲ್ಲಿದ್ದಲು ಮುಂದಿನ ದಿನಮಾನಗಳಲ್ಲಿ ಪ್ರತಿದಿನಕ್ಕೆ ಸುಮಾರು 40 ಸಾವಿರ ಮೆಟ್ರಿಕ್ ಟನ್‌ಗಿಂತ ಹೆಚ್ಚು ಕಲ್ಲಿದ್ದಲು ಬೇಕಾಗುತ್ತದೆ ಅದಕ್ಕಾಗಿ ಹೊಸ ರೈಲ್ವೆ ಲೈನ್ ಬೇಕು ಸನ್ಮಾನ್ಯ ಎಂ ಪಿ ಪ್ರಕಾಶ್‌ರವರಿಗೆ ಚೆನ್ನಾಗಿ ಗೊತ್ತು Bellary Thermal Power Station ಮತ್ತು Raichur Thermal Power Station ಗಳಿಗೆ more than 40,000 metric ton coal per day ಬೇಕಾಗುತ್ತದೆ. ಅದಕ್ಕಾಗಿ, ರಾಯಚೂರಿನಿಂದ ಮುನಿರಾಬಾದ್‌ಗೆ ಹೊಸ ರೈಲ್ವೆ ಲೈನ್ ಬೇಕು ಅದು ಮುನಿರಾಬಾದ್ ಮೆಹಬೂಬ್‌ನಗರ ರೈಲ್ವೆ ಲೈನ್ ಆ ರೈಲ್ವೆ ಲೈನನ್ನು ಈಗಾಗಲೇ ಸ್ವಲ್ಪ ಪ್ರಮಾಣದಲ್ಲಿ ಪ್ರಾರಂಭಿಸಿದ್ದಾರೆ ಹಿಂದೆ ದೇವೇಗೌಡರು ಪ್ರಧಾನ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ, ಐ ಕೆ ಗುಜ್ರಾಲ್‌ರವರು ಪ್ರಧಾನ ಮಂತ್ರಿಗಳಾಗಿದ್ದಂಥ ಸಂದರ್ಭದಲ್ಲಿ ಅದು ಒಪ್ಪಿಗೆಯಾಯಿತು ಬಹಳ ಪ್ರಮುಖವಾದಂಥ ರೈಲ್ವೆ ಅದು ಕೊಪ್ಪಳ, ಗಂಗಾವತಿ, ಸಿಂಧನೂರು, ಮಾನ್ವಿ, ರಾಯಚೂರು ಮುಖಾಂತರ ಹೈದರಾಬಾದಿಗೆ ಹೋಗುತ್ತದೆ ಇದಕ್ಕೆ ಪ್ರತಿವರ್ಷ 10–15 ಕೋಟಿ ರೂಪಾಯಿಗಳನ್ನು ಮಾತ್ರ ಕೊಡುತ್ತಾರೆ ದಯಮಾಡಿ ಈ ರೈಲ್ವೆ ಲೈನಿಗೆ ನೀವು 50% ಹಣವನ್ನು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಕೊಡಬೇಕಾಗುತ್ತದೆ ಹುಬ್ಬಳ್ಳಿಯಿಂದ ಗುಲ್ಬರ್ಗಾಕ್ಕೆ ಹೋಗಲಿಕ್ಕೆ, ಹುಬ್ಬಳ್ಳಿಯಿಂದ ರಾಯಚೂರಿಗೆ ಹೋಗಲಿಕ್ಕೆ ಹುಬ್ಬಳ್ಳಿಯಿಂದ ಬೀದರ್‌ಗೆ ಹೋಗಲಿಕ್ಕೆ ನೇರವಾದಂಥ ರೈಲು ಮಾರ್ಗ ಇದು ಆಗುತ್ತದೆ ಕರ್ನಾಟಕದಲ್ಲಿ ಇದೊಂದು ರೈಲ್ವೆ ಲೈನಿಗೆ ಕರ್ನಾಟಕ ಸರ್ಕಾರ ಸಹಭಾಗಿತ್ವದಲ್ಲಿ ,ಹಣ ಹಾಕುತ್ತಿಲ್ಲ ನೀವು ಬೀದರ್ ಗುಲ್ಬರ್ಗಾ ಕೊಟ್ಟಿದ್ದೀರಿ, ಹೊಸಪೇಟೆ ಗುಂತಕಲ್‌ಗೆ ಕೊಟ್ಟಿದ್ದೀರಿ, ಬಿಜಾಪುರ ಗದಗ್‌ಗೆ ಕೊಟ್ಟಿದ್ದೀರಿ, ಹುಬ್ಬಳ್ಳಿ ಅಂಕೋಲಾಗೆ ಕೊಟ್ಟಿದ್ದೀರಿ, ಕೊಟ್ಟೂರು ಹರಿಹರಕ್ಕೆ ಕೊಟ್ಟಿದ್ದೀರಿ, ಮಂಗಳೂರು ಹಾಸನಕ್ಕೆ ಕೊಟ್ಟಿದ್ದೀರಿ, ರಾಮನಗರ ಬೆಂಗಳೂರಿಗೆ ಕೊಟ್ಟಿದ್ದೀರಿ ನಾನು ಹೇಳುತ್ತಿರುವುದು ಬಹಳ ಪ್ರಮುಖವಾದಂಥ ರೈಲ್ವೆ ಲೈನ್ ಇದರಿಂದ ಹೈದರಾಬಾದ್ ಕರ್ನಾಟಕ ಮತ್ತು ಬಾಂಬೆ ಕರ್ನಾಟಕದ ನೇರ ಸಂಪರ್ಕವಾಗುತ್ತದೆ ಈ ರೈಲ್ವೆ ಲೈನ್ ಕೊಪ್ಪಳದಿಂದ ಪ್ರಾರಂಭವಾಗಿ ಗಂಗಾವತಿ, ಸಿಂಧನೂರು ಮಾರ್ಗವಾಗಿ, ಸುಮಾರು ಆರು ಲಕ್ಷ ಎಕರೆ ನೀರಾವರಿ ಪ್ರದೇಶದಲ್ಲಿ ಹೋಗುತ್ತದೆ ಕೊಪ್ಪಳ ಭಾಗದಲ್ಲಿರುವಂಥ ಕಬ್ಬಿಣದ ಅದಿರು Raichur Thermal Power Stationಗೆ ಹೋಗುವುದರಿಂದ ಅಲ್ಲಿನ ಕಲ್ಲಿದ್ದಲ್ಲಿಗೆ ಅನುಕೂಲವಾಗುತ್ತದೆ It is the most economically viable railway line ಇದಕ್ಕೆ 700 ಕೋಟಿ ರೂಪಾಯಿಗಳು ಬೇಕು ಈ 700 ಕೋಟಿ ರೂಪಾಯಿಗಳಲ್ಲಿ 50% ಹಣವನ್ನು ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ನೀವು

ಕೊಡಬೇಕು, ಬೇರೆ ಮಾರ್ಗಗಳಿಗೆ ಕೊಟ್ಟಿದ್ದೀರಿ ಕೆಲವಕ್ಕೆ 65% ಕೊಟ್ಟಿದ್ದೀರಿ ಹಾಸನ ಮಂಗಳೂರು ಮಾರ್ಗಕ್ಕೆ 65% ಕೊಟ್ಟದ್ದಾರೆ ರಾಮನಗರ ಬೆಂಗಳೂರು ಮಾರ್ಗಕ್ಕೆ 65% ಕೊಟ್ಟಿದ್ದಾರೆ ಬೀದರ್ ಗುಲ್ಬರ್ಗಾ ಮಾರ್ಗಕ್ಕೆ 50% ಕೊಟ್ಟಿದ್ದೀರಿ ಅದರಂತೆ, ಈ ರೈಲ್ವೆ ಲೈನಿಗೂ ಕೂಡ 50% ಕೊಟ್ಟರೆ, ಇದರಿಂದ ಕೇವಲ ಒಂದು ಊರಿಗೆ ಮಾತ್ರವಲ್ಲ, ಎರಡು ಪ್ರದೇಶಗಳಿಗೆ ಅನುಕೂಲವಾಗುವುದರೆ ಜೊತೆಗೆ ವಾಣಿಜ್ಯ, ಕೃಷಿ ಮತ್ತು ಕೈಗಾರಿಕೆಗಳ ಅಭಿವೃದ್ಧಿಯಾಗುತ್ತದೆ ಇದಕ್ಕೆ ನೀವು ಒಪ್ಪಿಗೆ ಕೊಟ್ಟಿದ್ದೀರಿ ಯಡಿಯೂರಪ್ಪನವರೇ ನಾನು ನಿಮ್ಮನ್ನು ಅಭಿನಂದಿಸುತ್ತೇನೆ 35% ಹಣವನ್ನು ಸಹಭಾಗಿತ್ವದಲ್ಲಿ ತರಲಿಕ್ಕೆ ತಾವು ಒಪ್ಪಿಗೆ ಕೊಟ್ಟಿದ್ದೀರಿ ಆದರೆ, ಕೆಲವು ತಾಂತ್ರಿಕ ನೆಪವೊಡ್ಡಿ ಇದನ್ನು ಕ್ಯಾಬಿನೆಟ್‌ನಲ್ಲಿ ವಾಪಸ್ಸು ತೆಗೆದುಕೊಂಡು ಹೋಗಿದ್ದಾರೆ ಅದನ್ನು ನೀವು ತರಿಸಿ, ಅದಕ್ಕೆ ಒಪ್ಪಿಗೆ ಕೊಟ್ಟರೆ ಇಡೀ ರಾಜ್ಯಕ್ಕೆ ಒಳ್ಳೆಯದಾಗುತ್ತದೆ ನಾವು ನಿಮಗೆ ಅಭಿನಂದನೆಯನ್ನು ಸಲ್ಲಿಸುತ್ತೇವೆ ಆದ್ದರಿಂದ, ದಯಮಾಡಿ ಇದರ ಬಗ್ಗೆ ಮಾನ್ಯ ಯಡಿಯೂರಪ್ಪನವರು ಮತ್ತು ಎಂ ಪಿ ಪ್ರಕಾಶ್‌ರವರು ಚಿಂತನೆಯನ್ನು ಮಾಡಬೇಕೆಂದು ನಾನು ಹೇಳಲಿಕ್ಕೆ ಇಚ್ಛೆಪಡುತ್ತೇನೆ

ಕೊನೆಯದಾಗಿ, ನಾನು ಜಲ ವಿದ್ಯುತ್ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ ಜಲ ವಿದ್ಯುತ್ ಉತ್ಪಾದನೆಗೆ recurring expenditure ಇರುವುದಿಲ್ಲ ಈಗ ನಾವೇನು ಶಾಖೋತ್ಪನ್ನದಲ್ಲಿ ಮಾಡುತ್ತಿದ್ದೇವೆ ಧರ್ಮಲ್‌ನಿಂದ, ಕಲ್ಲಿದ್ದಲುನಿಂದ ಅಗಲಿ, ಗ್ಯಾಸ್ ಟರ್ಬೈನ್ ಇದಕ್ಕೆ ಶಾಖೋತ್ಪನ್ನ ಕೇಂದ್ರಗಳಲ್ಲಿ ವಿದ್ಯುತ್ ಉತ್ಪಾದನೆ ಮಾಡುತ್ತಿರುವಂಥಾದಕ್ಕೆ ಸಾಕಷ್ಟು recurring expenditure ಇರುತ್ತದೆ ಆದರೆ, ಜಲವಿದ್ಯುತ್ತಿಗೆ ಇಲ್ಲ ಜಲವಿದ್ಯುತ್ ನಮ್ಮಲ್ಲಿ ವರಾಹಿ, ಗುಂಡ, ಈ ಎರಡೂ ನೀರಾವರಿ ಪ್ರದೇಶದಿಂದ ಸುಮಾರು ವರಾಹಿಯಲ್ಲಿ 460 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಸಾಧ್ಯವಿದೆ ನಿಮ್ಮ ಜಿಲ್ಲೆಯದೇ ಅದು, ನಿಮಗೆ ಗೊತ್ತಿದೆ ಈಗಾಗಲೇ ಎರಡು ಘಟಕಗಳು ಪ್ರಾರಂಭವಾಗಿವೆ ಇನ್ನೂ ಎರಡು ಘಟಕಗಳು ಪ್ರಾರಂಭವಾಗಬೇಕಾಗಿದೆ ಆಗ ಇನ್ನೂ ಸುಮಾರು 200 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ ಆದರೆ ಅದರ ಬಗ್ಗೆ ಯಾವುದೇ ಕ್ರಮವಾಗಿಲ್ಲ ಅದರ ಬಗ್ಗೆ ತಾವು ಗಂಭೀರವಾಗಿ ಚಿಂತನೆ ಮಾಡಬೇಕು ಅದೇ ರೀತಿ ಗುಂಡ್ಯ ನೀರಾವರಿ ಪ್ರದೇಶದಿಂದ ಸುಮಾರು 400 ಮೆಗಾವ್ಯಾಟ್ ವಿದ್ಯುತ್ತಿನ ಉತ್ಪಾದನೆಯಾಗಬೇಕು ಈ ಕೆಲಸ ಬೇಗನೇ ಪ್ರಾರಂಭವಾಗಬೇಕು ಇದು ಇನ್ನೂ ಕೂಡ ಕೇಂದ್ರ ಸರ್ಕಾರದ ಸೆಂಟ್ರಲ್ ವಿದ್ಯುತ್ ಗ್ರಿಡ್‌ನಲ್ಲಿ ಪೆಂಡಿಂಗ್ ಇದೆ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡಿ ಇದನ್ನು ಕ್ಲಿಯರ್ ಮಾಡಿಸಿದರೆ, 400 ಮೆಗಾವ್ಯಾಟ್ ವಿದ್ಯುತ್ತಿನ ಉತ್ಪಾದನೆ ಆಗಲಿಕ್ಕೆ ಸಾಧ್ಯವಿದೆ ಅದರೆ ಜೊತೆಗೆ, ಪ್ರಮುಖವಾದ ಇನ್ನೊಂದು ವಿಷಯವೆಂದರೆ, ಕಾವೇರಿ

ನದಿಯಿಂದ ಸುಮಾರು 600 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಸಾಧ್ಯವಿದೆ ಅದಕ್ಕಾಗಿ ಹಿಂದಿನ ಕರ್ನಾಟಕ ಸರ್ಕಾರ ಶಿವನಸಮುದ್ರದಲ್ಲಿ 220 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಕೇಂದ್ರ ಸರ್ಕಾರಕ್ಕೆ ಅರ್ಜಿ ಹಾಕಿದೆ ಅದಕ್ಕೆ ತಮಿಳುನಾಡು ಆಕ್ಷೇಪಣೆ ಮಾಡಿದೆ ಇದಕ್ಕೆ ಕಾರಣ, ನಮ್ಮ Detailed Project Reportನಲ್ಲಿ ರಿವರ್ಸಬಲ್ ಟರ್ಬೈನ್ ಎಂದು ಹಾಕಿರುವುದು ರಿವರ್ಸಬಲ್ ಟರ್ಬೈನ್ ಎಂದು ಹಾಕಿರುವುದರಿಂದ, ನೀರನ್ನು ಪುನಃ ಬಳಸುತ್ತಾರೆ ಎಂದು ತಮಿಳುನಾಡಿನವರು ಅದಕ್ಕೆ objection ಹಾಕಿದ್ದಾರೆ ಅದನ್ನು ಸರಿಯಾಗಿ ಹೇಳಬೇಕಾಗುತ್ತದೆ ರಿವರ್ಸಬಲ್ ಟರ್ಬೈನ್‌ನಿಂದ ನೀರಿನ ಲಾಸ್ ಇಲ್ಲ ಹೀಗಾಗಿ, ಅದನ್ನು ತಾವು ಕೇಂದ್ರ ಸರ್ಕಾರಕ್ಕೆ ಮನದಟ್ಟು ಮಾಡಿಕೊಡಬೇಕಾಗುತ್ತದೆ ಅದರ ಜೊತೆಗೆ, ಹೊಗೆನಿಕಲ್ ಮತ್ತು ಮೇಕೆದಾಟುವಿನಲ್ಲಿ ಸುಮಾರು 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಮಾಡಲಿಕ್ಕೆ ಸಾಧ್ಯವಿದೆ ಆದರೆ, ಅದಕ್ಕೆ ತಮಿಳುನಾಡು objection ಮಾಡಿದೆ ಇದಕ್ಕೆ ಕಾರಣ, ಹೊಗೆನಿಕಲ್ ಎರಡೂ ದಂಡೆಯ ಮೇಲೆ ಅಂದರೆ ತಮಿಳುನಾಡು ಮತ್ತು ಕರ್ನಾಟಕದಲ್ಲಿದೆ ತಮಿಳುನಾಡಿನವರೂ 200 ಮೆಗಾವ್ಯಾಟಿಗೆ ಬಲಭಾಗದಲ್ಲಿ ಹಾಕಿದ್ದಾರೆ ರಸ್ಸಿ ಮನಾಲ್ ಎಂಬ ಪ್ರದೇಶದಲ್ಲಿ ಅವರೂ ಕೂಡ 400 ಮೆಗಾವ್ಯಾಟಿಗೆ ಹಾಕಿದ್ದಾರೆ ಆ ರಸ್ಸಿ ಮನಾಲ್ ಯೋಜನೆಯನ್ನು ಅವರು ಪ್ರಾರಂಭಿಸಿದರೆ ನಮ್ಮ ಮೇಕೆದಾಟು ಮುಳುಗಿಹೋಗುತ್ತದೆ ಹೀಗಾಗಿ, ಅದಕ್ಕೆ ನಾವು objection ಹಾಕಿದ್ದೇವೆ ಇದರಿಂದಾಗಿ, ಕಾವೇರಿ ನದಿ ಪ್ರದೇಶದಲ್ಲಿ 800 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆ ಆಗಲಿಕ್ಕೆ ಸಾಧ್ಯವಿರುವುದು ಎರಡೂ ರಾಜ್ಯಗಳ ಜಗಳದಿಂದಾಗಿ ವಿದ್ಯುತ್ ಉತ್ಪಾದನೆಯಾಗದೇ ಸುಮಾರು 20 ವರ್ಷಗಳಾದವು ಆದ್ದರಿಂದ, ಇದಕ್ಕೆ ಒಂದು ಸೌಹಾರ್ದ ರೀತಿಯಲ್ಲಿ ಮಾತುಕತೆಯಾಗಬೇಕು National Hydro Power Corporation, NHPC ಮುಖಾಂತರ ವಿದ್ಯುತ್ ಉತ್ಪಾದನೆ ಮಾಡಬೇಕೆಂದು ಹಿಂದೆ ಜೆ ಹೆಚ್ ಪಟೇಲರ ಸರ್ಕಾರವಿದ್ದಾಗ, ಎಸ್ ಎಂ ಕೃಷ್ಣರವರ ಸರ್ಕಾರದಲ್ಲಿ ಪ್ರಯತ್ನಗಳು ನಡೆದವು ಆದರೆ ಅದು ಹಾಗೇ ನಿಂತಿದೆ ಅದರೆ ಬಗ್ಗೆ ಈ ಸರ್ಕಾರ ಪ್ರಯತ್ನ ಮಾಡಬೇಕಾಗುತ್ತದೆ ಎರಡೂ ರಾಜ್ಯಗಳು ಸೌಹಾರ್ದತೆಯಿಂದ ಮಾತನಾಡಿಕೊಂಡರೆ ಅವರಿಗೆ 400 ಮೆಗಾವ್ಯಾಟ್, ನಮಗೆ 400 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತದೆ ಅದರ ಬಗ್ಗೆ ಈ ಸರ್ಕಾರ ಗಂಭೀರವಾಗಿ ಚಿಂತನೆಯನ್ನು ಮಾಡಬೇಕು ಅದರ ಜೊತೆಗೆ, ಇನ್ನೊಂದು ಮಾತನ್ನು ನಾನು ಹೇಳಬೇಕಾಗುತ್ತದೆ ಜುರಾಲಾ ಪ್ರಾಜೆಕ್ಟ್ ಬಗ್ಗೆ ಪ್ರಕಾಶ್‌ರವರಿಗೆ ಚೆನ್ನಾಗಿ ಗೊತ್ತಿದೆ ಇದು ಆಂಧ್ರಪ್ರದೇಶದ ಗಡಿಭಾಗದ ರಾಯಚೂರಿನಲ್ಲಿದೆ 1978ರಲ್ಲಿ ಜುರಾಲಾ ಡ್ಯಾಂಅನ್ನು ಪೂರ್ತಿಗೊಳಿಸುವಂಥ ಸಂದರ್ಭದಲ್ಲಿ, ದೇವರಾಜು ಅರಸುರವರ ಕಾಲದಲ್ಲಿ ಕರ್ನಾಟಕ ಮತ್ತು

